ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 5 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 347 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಿಸರ್ಗದತ್ತ ಮಾರ್ಗೋಪಾಯದಿಂದ ಬದುಕು ಹಸನು

ಇಸ್ರೋದ ವಿಶ್ರಾಂತ ಪರಿಸರ ವಿಜ್ಞಾನಿ ಡಾ.ಜಗನ್ನಾಥ ವೆಂಕಟರಾಮಯ್ಯ ಅಭಿಮತ



ವಿಶೇಷ ಉಪನ್ಯಾಸ ಮಾಲೆಯಲ್ಲಿ ಇಸ್ರೋದ ವಿಶ್ರಾಂತ ಪರಿಸರ ವಿಜ್ಞಾನಿ ಡಾ.ಜಗನ್ನಾಥ ವೆಂಕಟರಾಮಯ್ಯ ಮಾತನಾಡಿದರು.

ಮೈಸೂರು, ಏ.4– ಮಾನವನ ಆಧುನಿಕ ಜೀವನ ಶೈಲಿ ಪರಿಸರವನ್ನು ಎಗ್ಗಿಲ್ಲದೇ ಹಾಳುಗೆಡವುತ್ತಿದೆ. ಜೊತೆಗೆ ಆಧುನಿಕ ತಂತ್ರಜ್ಞಾನದಲ್ಲಿ ಮಾನವನ ಸಂಬಂಧ ಹಾಳಾಗುತ್ತಿದ್ದು, ಅದಕ್ಕಾಗಿ ನಮ್ಮಲ್ಲಿನ ಅರಿವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವುದೇ ಬಹುಮುಖ್ಯ ವಿಜ್ಞಾನವಾಗಿದೆ ಎಂದು ಇಸ್ರೋದ ವಿಶ್ರಾಂತ ಪರಿಸರ ವಿಜ್ಞಾನಿ ಡಾ.ಜಗನ್ನಾಥ ವೆಂಕಟರಾಮಯ್ಯ ಅಭಿಪ್ರಾಯಪಟ್ಟರು.

ವಿದ್ಯಾವರ್ಧಕ ಪ್ರಥಮದರ್ಜೆ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಘಟಕಗಳ ಸಹಯೋಗದೊಂದಿಗೆ ಆಯೋಜಿಸಿದ್ದ ಪ್ರಸಕ್ತ ಶೈಕ್ಷಣಿಕ ಸಾಲಿನ ವಿಶೇಷ ಉಪನ್ಯಾಸ ಮಾಲೆಯಲ್ಲಿ 'ಹವಾಮಾನ ವೈಪರೀತ್ಯ ನಿರ್ವಹಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ' ವಿಷಯವನ್ನು ಆಧರಿಸಿ ಮಾತನಾಡುತ್ತಿದ್ದರು. ಪರಿಸರದ ಬಗ್ಗೆ ಸಮಾಜಕ್ಕೆ ಅರಿವು ಮೂಡಿಸುವ ನಿಟ್ಟಿನಲ್ಲಿ ಹಲವಾರು ತರಗತಿಗಳು, ಬೋಧನೆ, ಬೀದಿ ನಾಟಕ, ಜಾಥಾಗಳನ್ನು ಹಮ್ಮಿಕೊಂಡಿದ್ದರೂ ಅಂತಹ ಹೇಳಿಕೊಳ್ಳುವ ಅರಿವು ಜನತೆಯಲ್ಲಿ ಕಂಡು ಬಾರದಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ ಎಂದರು.

ವಿಶೇಷ ಉಪನ್ಯಾಸ ಮಾಲೆಯ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಎಸ್. ಮರೀಗೌಡ ವಹಿಸಿದ್ದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು, ಅಧ್ಯಾಪಕೇತರರು ಹಾಜರಿದ್ದರು. ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಬಿ.ಎಸ್.ಶ್ರೀಹರ್ಷ ಸ್ವಾಗತಿಸಿ, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಸತೀಶ್ ವಂದಿಸಿದರು.

> ಹಲವು ಆವಿಷ್ಕಾರದ ಪರಿಣಾಮದಿಂದಾಗಿ ಭೂಮಿಯ ಉಷ್ಣಾಂಶ ಹೆಚ್ಚಾಗಿ ಮಳೆ ಮಾರುತಗಳು, ವಾಯುವಿನ ಚಲನೆ ಸರಿಯಾದ ಸಮಯಕ್ಕೆ ಆಗದೆ ಮಳೆ ಇಳೆ ತಲುಪುತ್ತಿಲ್ಲ. ನಮ್ಮ ಸುತ್ತಲಿನ ವಾತಾವರಣವನ್ನು ಮಾಲಿನ್ಯದಿಂದ ಸಂರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಗೊತ್ತಿರುವುದನ್ನು ಮಾಡುವುದೇ ಇಂದಿನ ಪೀಳಿಗೆಯ ಪ್ರಮುಖ ಗುರಿಯಾಗಿದೆ. ಜೀವನದ ಅಗತ್ಯವನ್ನರಿತು ವಸ್ತು ಮತ್ತು ಶಕ್ತಿಯನ್ನು ಮಿತವಾಗಿ ಬಳಕೆ ಮಾಡಿದರೆ ಪರಿಸರ ಸಂರಕ್ಷಣೆ ಮಾಡಬಹುದು.
> –ಡಾ.ಜಗನ್ನಾಥ ವೆಂಕಟರಾಮಯ್ಯ, ಇಸ್ರೋ ವಿಶ್ರಾಂತ ಪರಿಸರ ವಿಜ್ಞಾನಿ

ಮೈಸೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಮುಂಜಾಗ್ರತೆ ವಹಿಸಿ

ಅಧಿಕಾರಿಗಳಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಸೂಚನೆ



ಮೈಸೂರು ಜಿಲ್ಲಾ ಪಂಚಾಯ್ತಿ ಸಿಇಓ ಕೆ.ಎಂ.ಗಾಯತ್ರಿ ಅವರು ಕುಡಿಯುವ ನೀರು ಸರಬರಾಜು ಸಂಬಂಧ ಗುರುವಾರ ತಮ್ಮ ಕಚೇರಿಯಲ್ಲಿ ಸಭೆ ನಡೆಸಿದರು.

ಮೈಸೂರು,ಏ.4(ಆರ್‌ಕೆ)–ಮೈಸೂರು ಜಿಲ್ಲೆಯಾದ್ಯಂತ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಿ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯ್ತಿ ಕಚೇರಿ ಮಿನಿ ಸಭಾಂಗಣದಲ್ಲಿ ವೀಡಿಯೋ ಸಂವಾದದ ಮೂಲಕ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದ ಅವರು, ಮುಂದಿನ 15 ದಿನಗಳಲ್ಲಿ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಆಯಾ ಗ್ರಾಮಗಳ ಮಾಹಿತಿ ಪಡೆದು ಸಮಸ್ಯೆ ಎದುರಿಸಲು ಸಿದ್ಧತೆ ಮಾಡಿಕೊಳ್ಳುವಂತೆ ತಾಕೀತು ಮಾಡಿದರು.

> ಮೈಸೂರು ಜಿಲ್ಲಾ ಪಂಚಾಯ್ತಿ ಕಚೇರಿಯಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸಲು ಕಂಟ್ರೋಲ್ ರೂಂ (0821–2526355)ಗೆ ಬರುವ ಮಾಹಿತಿಗಳನ್ವಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ನೀರು ಪೂರೈಕೆಗೆ ಕ್ರಮ ವಹಿಸಬೇಕು. ಅಗತ್ಯ ಬಿದ್ದರೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡು ಸಮರ್ಪಕವಾಗಿ ಕುಡಿಯುವ ನೀರು ಪೂರೈಸಬೇಕಾಗಿದೆ. ಜನ, ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸುವುದು ನಮ್ಮ ಜವಾಬ್ದಾರಿ ಎಂಬುದನ್ನು ಮರೆಯಬಾರದು. –ಕೆ.ಎಂ.ಗಾಯತ್ರಿ

ಈ ಬಾರಿ ಬೇಸಿಗೆ ತಾಪಮಾನ ಜಾಸ್ತಿಯಾಗಿದ್ದು, ಕೊಳವೆ ಬಾವಿಗಳಲ್ಲೂ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ಎಲ್ಲೆಲ್ಲಿ ಕೊಳವೆ ಬಾವಿ ಕೆಟ್ಟು ನಿಂತಿವೆ, ನೀರು ಬರುತ್ತಿಲ್ಲ ಎಂಬ ಮಾಹಿತಿ ಪಡೆದು ಪರ್ಯಾಯ ವ್ಯವಸ್ಥೆ ಕಲ್ಪಿಸುವ ಬಗ್ಗೆ ವರದಿ ಸಲ್ಲಿಸಿ ಎಂದೂ ಕೆ.ಎಂ.ಗಾಯತ್ರಿ ತಿಳಿಸಿದರು.

ಭೂಗರ್ಭಶಾಸ್ತ್ರಜ್ಞರಿಂದ ತಪಾಸಣೆ ನಡೆಸಿ ನೀರಿನ ಲಭ್ಯತೆ ದೃಢಪಡಿಸಿಕೊಂಡು ಬೋರ್‌ವೆಲ್ ಕೊರೆಸಲು ಜಾಗ ಗುರುತಿಸಿ, ನೀರಿನ ಸಮಸ್ಯೆಗಳ ಬಗ್ಗೆ ಬರುವ ದೂರುಗಳ ಆಧಾರದಲ್ಲಿ ಅಗತ್ಯವಿರುವೆಡೆ ಕೊಳವೆ ಬಾವಿ ತೆಗೆಸಿ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕೆಂದು ಅವರು ತಿಳಿಸಿದ್ದಾರೆ. ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಗನ್ನಾಥ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಂಜಿತಾ, ಹೆಚ್.ಡಿ. ಕೋಟೆ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಧರಣೇಶ ಹಾಗೂ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಖೇಲೋ ಇಂಡಿಯಾಗೆ ಏ.15, 16ರಂದು ಕ್ರೀಡಾಪಟುಗಳ ಆಯ್ಕೆ

ಮೈಸೂರು,ಏ.4– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೆಂಗಳೂರಿನ ವಿದ್ಯಾನಗರದ ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರಕ್ಕೆ ಅಥ್ಲೆಟಿಕ್ಸ್, ಶೂಟಿಂಗ್, ಈಜು ಕ್ರೀಡೆಗಳಲ್ಲಿ ಪ್ರತಿಭಾನ್ವಿತರಾಗಿರುವ ಕ್ರೀಡಾಪಟುಗಳನ್ನು ಆಯ್ಕೆ ಮಾಡುವ ಸಲುವಾಗಿ ಏ.15 ಹಾಗೂ 16ರಂದು ಬೆಂಗಳೂರಿನ ವಿದ್ಯಾನಗರದಲ್ಲಿರುವ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ ಕ್ರೀಡಾ ಶಾಲೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಪ್ರಸಕ್ತ 2023–24ನೇ ಸಾಲಿನಲ್ಲಿ 10ನೇ ತರಗತಿಯನ್ನು ಅಭ್ಯಸಿಸುತ್ತಿದ್ದು, 2024–25ನೇ ಸಾಲಿಗೆ ಪ್ರಥಮ ಪದವಿ ಪೂರ್ವ ಕೋರ್ಸ್ (ಪ್ರಥಮ ಪಿ.ಯು.ಸಿ) ಗೆ ಪ್ರವೇಶ ಪಡೆಯುವ ಅರ್ಹತೆವುಳ್ಳವರಾಗಿರಬೇಕು. ಅಂತಾರಾಷ್ಟ್ರೀಯ ಕ್ರೀಡಾಪಟುಗಳಿಗೆ ಎರಡು ವರ್ಷಗಳ ವಯೋಮಿತಿಯನ್ನು ಸಡಿಲಗೊಳಿಸಲಾಗುವುದು. ತಜ್ಞರ ಸಮಿತಿ ಶಿಫಾರಸಿನ ಅನ್ವಯ ಗರಿಷ್ಟ ವಯೋಮಿತಿಯನ್ನು ಸಾಮರ್ಥ್ಯದ ಆಧಾರದ ಮೇಲೆ ನಿಗದಿಪಡಿಸಲಾಗುವುದು. ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರದೊಂದಿಗೆ ಸ್ವ–ವಿವರದ ಅರ್ಜಿಯನ್ನು ಆಯ್ಕೆ ಸಂದರ್ಭದಲ್ಲಿ ಸಲ್ಲಿಸಬೇಕು. ಕರ್ನಾಟಕದಲ್ಲಿ ಜನಿಸಿದ ಹಾಗೂ ವಾಸಿಸುತ್ತಿರುವವರಿಗೆ ಆದ್ಯತೆ ನೀಡಲಾಗುವುದು. ಆಧಾರ್ ಕಾರ್ಡ್ ನಕಲು ಪ್ರತಿ ಹಾಗೂ ಮೂಲ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಕನಿಷ್ಠ ಪಕ್ಷ ರಾಜ್ಯಮಟ್ಟದ ಅಧಿಕೃತ ಕ್ರೀಡಾಕೂಟದಲ್ಲಿ (ರಾಜ್ಯ ಅಥ್ಲೆಟಿಕ್ಸ್ ಹಾಗೂ ಈಜು ಸಂಸ್ಥೆ ರಾಜ್ಯ ಶಾಲಾ ಕ್ರೀಡಾಕೂಟ, ವಿಶ್ವವಿದ್ಯಾನಿಲಯ ಸಂಘಟಿಸುವ ಕ್ರೀಡಾಕೂಟ) ಪದಕ ಪಡೆದಿರಬೇಕು. ಕಳೆದ ಹಾಗೂ ಪ್ರಸ್ತುತ ಸಾಲಿನ ಕ್ರೀಡಾಕೂಟದ ಸ್ಪರ್ಧೆಗಳಲ್ಲಿ ಭಾಗವಹಿಸಿರಬೇಕು. ಆಸಕ್ತ ಅರ್ಹ ಕ್ರೀಡಾಪಟುಗಳು ನೇರವಾಗಿ ಆಯ್ಕೆಯಲ್ಲಿ ಭಾಗವಹಿಸಬಹುದಾಗಿರುತ್ತದೆ ಎಂದು ಮೈಸೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಪಿಬಿ ಸ್ಮರಣಾರ್ಥ ನಾಳೆ ಜಗನ್ಮೋಹನ ಅರಮನೆಯಲ್ಲಿ ಗೀತ ಗಾಯನ



ಮೈಸೂರು, ಏ.4(ಜಿಎ)–ಖ್ಯಾತ ಗಾಯಕ ಎಸ್.ಪಿ.ಬಾಲಸುಬ್ರಮಣ್ಯಂ ಸ್ಮರಣಾರ್ಥ ಮೈಸೂರಿನ ನಿನಾದ ಮ್ಯೂಸಿಕಲ್ ಟ್ರಸ್ಟ್ ಮತ್ತು ಪ್ರಸನ್ನ ಫಿಲ್ಮ್ ಹಿಟ್ಸ್ ವತಿಯಿಂದ ಏಪ್ರಿಲ್ 6ರಂದು ಸಂಜೆ 5ರಿಂದ ಜಗನ್ಮೋಹನ ಅರಮನೆಯಲ್ಲಿ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಸ್ಥಾಪಕ ಎ.ಎಸ್.ಪ್ರಸನ್ನಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟ್ರಸ್ಟ್‌ನ ಸುಮಾರು 26ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಕಲಾವಿದರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಈಗಾಗಲೇ ಎಲ್ಲರೂ ಉತ್ತಮ ತರಬೇತಿ ಪಡೆದುಕೊಂಡಿದ್ದಾರೆ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಭಾಷೆಯಲ್ಲಿ ಹಾಡಿರುವ ಆಯ್ದ 35 ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಇತ್ತೀಚೆಗೆ ಖಾಸಗಿ ವಾಹಿನಿಯ ಸರಿಗಮಪ ಸಂಗೀತ ಶೋನಲ್ಲಿ ಭಾಗವಹಿಸಿ ಅಂತಿಮ ಹಂತ ತಲುಪಿದ ಮೈಸೂರಿನ ಗಾಯಕಿ ಅಮೂಲ್ಯ ಮತ್ತು ದೂರದರ್ಶನದ ಖ್ಯಾತ ಗಾಯಕ ಸುದರ್ಶನ್ ಅವರನ್ನು ಅಭಿನಂದಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಜಯರಾಜ್, ಶ್ರೀಧರ್, ಡಾ.ರೇಖಾ, ಗುರುರಾಜ್ ಉಪಸ್ಥಿತರಿದ್ದರು.




ಮೈಸೂರಿನ ಮೆಸರ್ಸ್ ಫೌಂಡೇಶನ್‌ನ ಪಾಲುದಾರ ಸ್ವಾಮಿ ಅವರನ್ನು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಇತ್ತೀಚೆಗೆ ರೋಟರಿ ಮಿಡ್‌ಟೌನ್ ಮಾನಸ ಕುಟೀರ ಕಟ್ಟಡದ ಲೋಕಾರ್ಪಣೆ ಸಂದರ್ಭದಲ್ಲಿ ಅಭಿನಂದಿಸಿದರು.



ಮೈಸೂರು ಮಹಾರಾಜ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಸಮಿತಿ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ 'ಡಾ.ರಾಜಕುಮಾರ್ ಸ್ಮಾರಕ ಅಂತರ ಕಾಲೇಜು ಗೀತ ಗಾಯನ ಸ್ಪರ್ಧೆ'ಯನ್ನು ಮಹಾರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಸಿ.ಎ.ಶ್ರೀಧರ್ ಉದ್ಘಾಟಿಸಿದರು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಹೆಚ್.ಸೋಮಶೇಖರಪ್ಪ, ಹಿರಿಯ ಸಾಹಿತಿ ಕಾ.ತ.ಚಿಕ್ಕಣ್ಣ, ಕಾಲೇಜಿನ ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ, ಕಾರ್ಯಕ್ರಮದ ಸಂಚಾಲಕ ಪ್ರೊ.ಲೋಕೇಶ್ ಇತರರಿದ್ದರು.

'ಹಿಂದೂ ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಕೃತಿ ಬಿಡುಗಡೆ

ಹಿಂದೂ ರಾಷ್ಟ್ರ ಕಲ್ಪನೆಯಲ್ಲಿ ಬಿಜೆಪಿ-ಕಾಂಗ್ರೆಸ್ ನಿಲುವು ಒಂದೇ ಆಗಿದೆ



ಲೇಖಕಿ ಲತಾಮಾಲ ರಚಿತ 'ಹಿಂದೂ ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಕೃತಿಯನ್ನು ಔಟ್‌ಲುಕ್ ಮಾಜಿ ಸಂಪಾದಕ ಕೃಷ್ಣಪ್ರಸಾದ್ ಬಿಡುಗಡೆಗೊಳಿಸಿದರು.

ಮೈಸೂರು,ಏ.4(ಎಸ್‌ಪಿಎನ್)–ಹಿಂದೂ ರಾಷ್ಟ್ರ ಕಲ್ಪನೆಯಲ್ಲಿ ಬಿಜೆಪಿ–ಕಾಂಗ್ರೆಸ್ ಎರಡು ರಾಷ್ಟ್ರೀಯ ಪಕ್ಷಗಳ ನಿಲುವು ಪ್ರತ್ಯಕ್ಷ–ಪರೋಕ್ಷ ಒಂದೇ ಆಗಿದೆ ಎಂದು ಔಟ್‌ಲುಕ್ ಮಾಜಿ ಸಂಪಾದಕ ಕೃಷ್ಣಪ್ರಸಾದ್ ಅಭಿಪ್ರಾಯಪಟ್ಟರು.

ಮೈಸೂರು ನೃಪತುಂಗ ಶಾಲಾ ಆವರಣದಲ್ಲಿ ಅಭಿರುಚಿ ಪ್ರಕಾಶನದ ವತಿಯಿಂದ ಲೇಖಕಿ ಲತಾಮಾಲ ರಚಿತ 'ಹಿಂದೂ ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಲೇಖಕಿ ಲತಾಮಾಲ ರಚಿಸಿರುವ 'ಹಿಂದೂ ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಶೀರ್ಷಿಕೆ ನನ್ನಲ್ಲಿ ಈ ಘಳಿಗೆಗೆ ಹಲವು ಪ್ರಶ್ನೆಗಳು ಉದ್ಭವಿಸುವಂತೆ ಮಾಡಿವೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ದ ಸರಸಂಘ ಚಾಲಕ ಮೋಹನ ಭಾಗವತ್ ಅವರು, ಶಾಂತಿ, ಕರುಣೆ, ಸಹಬಾಳ್ವೆಯಿಂದ ಜೀವನ ನಡೆಸುವ ಅಂಶಗಳು ಹಿಂದೂ ಧರ್ಮದಲ್ಲಿದೆ ಎನ್ನುತ್ತಾರೆ ಎಂದರು.

ಬಿಜೆಪಿ ಅಧಿಕಾರಾವಧಿಯಲ್ಲಿ ದೇಶದ ವಿವಿಧ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರದಲ್ಲಿ ಏಳು ವರ್ಷದ ಬಾಲಕಿ ಮೇಲೆ ನಡೆದ ರೇಪ್ ಅಂಡ್ ಮರ್ಡರ್ ಪ್ರಕರಣ, ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಪ್ರಕರಣ ಹಾಗೂ ಕರ್ನಾಟಕದ ಮಂಗಳೂರಿನಲ್ಲಿ ನಡೆದ ದಾಂಧಲೆ ಪ್ರಕರಣಗಳನ್ನು ಯಾವುದೇ ಸಾಧು–ಸಂತರು ಖಂಡಿಸಲಿಲ್ಲ. ಈ ಹೆಜ್ಜೆಗಳನ್ನು ಗಮನಿಸಿದರೆ, ಲೇಖಕಿ ಲತಾಮಾಲ ರಚಿತ 'ಹಿಂದೂ ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಶೀರ್ಷಿಕೆಗೆ ನಾವು ಹತ್ತಿರವಾಗುತ್ತಿದ್ದೇವೆ ಎನಿಸುತ್ತಿದೆ ಎಂದರು.

ಅಲ್ಲದೆ, ಸಂವಿಧಾನ ಜಾರಿಗೊಳಿಸುವ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬರು, ಸ್ವಾಮೀಜಿಯೊಬ್ಬರನ್ನು ಭೇಟಿ ಮಾಡಿದ್ದ ಭಾವಚಿತ್ರ ಇಂದಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಭಾವಚಿತ್ರವನ್ನು ನೋಡಿದರೆ, ಸಂವಿಧಾನ ಜಾರಿಗೊಳಿಸುವ ವ್ಯಕ್ತಿ, ಸ್ವಾಮೀಜಿ ಅವರ ಮುಂದೆ ಕುಳಿತ್ತಿದ್ದ ಪೀಠದ ವ್ಯವಸ್ಥೆ ನೋಡಿದರೆ, ಈ ದೇಶದಲ್ಲಿ ಅಂಬೇಡ್ಕರ್ ಜಾರಿಗೊಳಿಸಿದ ಸಂವಿಧಾನ ಆಶಯಗಳು ಎತ್ತ ಸಾಗುತ್ತಿವೆ ಎಂಬುದು ಎಲ್ಲರಿಗೂ ಅರ್ಥವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಲ್ಪಸಂಖ್ಯಾತರಿಗೆ ಯಾವುದೇ ಲೋಕಸಭಾ ಕ್ಷೇತ್ರದಲ್ಲಿ ಟಿಕೆಟ್ ನೀಡಿಲ್ಲ. ಉತ್ತರ ಪ್ರದೇಶದಲ್ಲಿ ಅಂದಾಜು 25 ಕ್ಷೇತ್ರದಲ್ಲಿ ಮುಸ್ಲಿಂ ಬಾಹುಳ್ಯದ ಕ್ಷೇತ್ರಗಳಿವೆ. ಇಲ್ಲಿ ಬಿಜೆಪಿಯಿಂದ ಒಂದು ಕ್ಷೇತ್ರಕ್ಕೂ ಅಲ್ಪಸಂಖ್ಯಾತರಿಗೆ ಟಿಕೆಟ್ ಘೋಷಣೆ ಮಾಡಿಲ್ಲ. ಇವೆಲ್ಲಾ ಘಟನೆಗಳನ್ನು ಗಮನಿಸಿದಾಗ ಆರ್‌ಎಸ್‌ಎಸ್‌ನ ಹಿಂದೂ ರಾಷ್ಟ್ರದ ಪರಿಕಲ್ಪನೆ ಆಗಲೇ ಜಾರಿಗೆ ಬಂದಿದೆ ಅನಿಸುತ್ತಿದೆ ಎಂದು ಅಂಕಿ–ಅಂಶಗಳ ಸಮೇತ ವಿವರಿಸಿದರಲ್ಲದೆ, ಸದ್ಯದ ಬೆಳವಣಿಗೆ ಕುರಿತು ವಿದೇಶಿ ವಿದ್ವಾಂಸರೂ ದನಿಯೆತ್ತಿದ್ದಾರೆ ಎಂದರು.

ಪ್ರಕಾಶಕ ಪ್ರೊ.ಬಿ.ಎನ್.ಶ್ರೀರಾಮು, ಹಿರಿಯ ಲೇಖಕ ಜಿ.ಪಿ.ಬಸವರಾಜು, ಲೇಖಕಿ ಲತಾಮಾಲ, ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.

ಏ.7, ವಿದುಷಿ ಎಸ್.ಪಿ.ಸೌಂದರ್ಯ ಭರತನಾಟ್ಯ ರಂಗಪ್ರವೇಶ



ಮೈಸೂರು,ಏ.4– ಮೈಸೂರಿನ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಡಾ. ವಸುಂಧರಾ ದೊರೆಸ್ವಾಮಿ ಅವರ ಶಿಷ್ಯೆ ವಿದುಷಿ ಎಸ್.ಪಿ. ಸೌಂದರ್ಯ ಅವರ ಭರತನಾಟ್ಯ ರಂಗಪ್ರವೇಶವನ್ನು ಏ. 7 ರಂದು ಸಂಜೆ 5.30ಕ್ಕೆ ಜಗನ್ಮೋಹನ ಅರಮನೆಯಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ. ಧರಣಿದೇವಿ ಮಾಲಗತ್ತಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಮಕ್ಕಳ ತಜ್ಞರಾದ ಡಾ.ಯು.ಜಿ. ಶೆಣೈ, ನೃತ್ಯಗಿರಿ ಪ್ರದರ್ಶಕ ಕಲೆಗಳ ಅಕಾಡೆಮಿ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ. ಕೃಪಾ ಫಡ್ಕೆ ಭಾಗವಹಿಸುವರು. ವಿಪಿಎಸಿ ಮತ್ತು ಸಿ ಅಧ್ಯಕ್ಷರು ಮತ್ತು ಕೇನ್ಸ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಛೇರ್‌ಮನ್ ಶ್ರೀಮತಿ ಸವಿತಾ ರಮೇಶ್ ಅಧ್ಯಕ್ಷತೆ ವಹಿಸುವರು. ವಿಪಿಎಸಿ ಮತ್ತು ಸಿ ನಿರ್ದೇಶಕರಾದ ಗುರು ಡಾ. ವಸುಂಧರಾ ದೊರೆಸ್ವಾಮಿ ಅವರಿಗೆ ಗುರುವಂದನೆ ಸಲ್ಲಿಸಲಾಗುವುದು.

ನಿಧನ

ಅಮ್ಮಟಂಡ ಡಿ. ಶಾರದಾ



ಮೈಸೂರು, ಏ. 4– ಮೈಸೂರಿನ ಹೆಬ್ಬಾಳು 2ನೇ ಹಂತದ ನಿವಾಸಿ ದಿವಂಗತ ಎ.ಜಿ. ದೇವಯ್ಯ (ಮಣಿ) ಅವರ ಪತ್ನಿ ಅಮ್ಮಟಂಡ ಡಿ. ಶಾರದಾ (ನೆಲ್ಲಮಾಡ) ಬುಧವಾರ ಬೆಳಗ್ಗೆ ನಿಧನರಾದರು. ಅವರಿಗೆ 74 ವರ್ಷ ವಯಸ್ಸಾಗಿತ್ತು.

ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೆಬ್ಬಾಳು ರುದ್ರಭೂಮಿಯಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ಸ್ವಾಮಿ



ನಂಜನಗೂಡು: ತಾಲೂಕಿನ ತೊರವಳ್ಳಿ ಗ್ರಾಮದ ಜಿ.ಸ್ವಾಮಿ (80) ಅನಾರೋಗ್ಯದಿಂದ ಗುರುವಾರ ಸಂಜೆ ನಿಧನ ರಾದರು. ಮೃತರು ಪತ್ನಿ ಹಾಗೂ ಪುತ್ರ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಶಿವಕುಮಾರ, ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ತೊರವಳ್ಳಿಯ ಮೃತರ ಜಮೀನಿನಲ್ಲಿ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.04.2024 ಶುಕ್ರವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು ಮತ್ತು ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು ಕುರಿತು ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್‌ಎಸ್ ಪ್ರಥಮ ದರ್ಜೆ ಕಾಲೇಜು :** ಗೀತಾ ಸಂಹಿತಾ 2024, ಮುಖ್ಯ ಅತಿಥಿಗಳು : ಜೆಎಸ್‌ಎಸ್‌ಎಸ್ ಪ್ರಿನ್ಸಿಪಾಲ್ ಡಾ. ಎಂ. ಶಿವಕುಮಾರ್, ಅಧ್ಯಕ್ಷತೆ : ಜೆಎಸ್‌ಎಸ್‌ಎಸ್ ಕಾರ್ಯದರ್ಶಿ ಶ್ರೀಮತಿ ವನಜಾ ಬಿ. ಪಂಡಿತ್, ಸ್ಥಳ: ಜೆಎಸ್‌ಎಸ್‌ಎಸ್ ಕಾಲೇಜು ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** ಸಮಾಜ ವಿಜ್ಞಾನ ಸಂಶೋಧನಾ ವಿಧಾನಗಳು: ಪ್ರಸ್ತುತ ಪ್ರವೃತ್ತಗಳು ಮತ್ತು ಮುಂದಿನ ದಾರಿ ಕುರಿತು ಆರು ದಿನಗಳ ಕಾರ್ಯಾಗಾರ, ಬೆಳಗ್ಗೆ 8 ರಿಂದ ಕ್ಷೇತ್ರ ಭೇಟಿ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ.

■ **ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ :** ಮೈಸೂರು ವಿವಿ ವ್ಯಾಪ್ತಿಯ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ 'ಪ್ರಭಿಗ್ಯಾನ್' ಪ್ರತಿಭಾ ಸ್ಪರ್ಧೆ, ಉದ್ಘಾಟನೆ : ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಸ್ಥಳ: ಮಹಾವಿದ್ಯಾಲಯ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಬಿ.ಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರು ನರ (ವೆರಿಕೋಸ್ ವೈನ್), ಬೆನ್ನು ನೋವು, ಸಯಾಟಿಕ್, ಸಂಧಿವಾತ, ಥೈರಾಯಿಡ್, ಮೊಣಕಾಲು ನೋವು ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸತ್ಯನಾರಾಯಣ ಸನ್ನಿಧಿ, ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ರಿಂದ

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯಿ ಶಾರದಾ ಪೀಠ, ಶೃಂಗೇರಿ:** ಮೈಸೂರು ಅಭಿನವ ಶಂಕರಾಲಯದ ಶತಮಾನೋತ್ಸವ, ಬೆಳಗ್ಗೆ 8.30 ರಿಂದ ಶ್ರೀ ಶಾರದಾಂಬಾ ಹಾಗೂ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಕುಂಭಾಭಿಷೇಕ ಮತ್ತು ಶಿಖರ ಕುಂಭಾಭಿಷೇಕ, ಬೆಳಗ್ಗೆ 11ಕ್ಕೆ ಸಾರ್ವಜನಿಕ ದರ್ಶನ ಪಾದಪೂಜೆ ಮತ್ತು ಭಿಕ್ಷಾವಂದನೆ, ಸಂಜೆ 5.30 ರಿಂದ ಮೈಸೂರು ಭಕ್ತಮಹಾಜನಗಳಿಂದ ಗುರುವಂದನಾ ಕಾರ್ಯಕ್ರಮ, ಸಂಜೆ 7 ರಿಂದ ವಿದುಷಿ ಅದಿತಿ ನಡುತೋಟ ಮತ್ತು ವಿದುಷಿ ಪಿ.ಬಿ. ಕೀರ್ತನ ಅವರಿಂದ ದ್ವಂದ್ವ ಗಾಯನ, ವಿದ್ವಾನ್ ರೂಪನಗುಡಿ ರತ್ನ ತೇಜ –ವಯೋಲಿನ್, ವಿದ್ವಾನ್ ಪ್ರಣವ್ ಸುಬ್ರಮಣ್ಯ–ಮೃದಂಗ, ಸ್ಥಳ:ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ –ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ. ಸಂತೋಶ್ ನಾಯಕ್ ಆರ್., ನಿರ್ದೇಶಕರು, ಪ್ರಸಾರಾಂಗ, ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಜ್ಯೋತಿ ರವಿಪ್ರಕಾಶ್, ಅಂಜಲಿ ಹಳಿಯಾಳ್, ಆಕಾಂಕ್ಷ ಬಾದಾಮಿ, 10.00 ಬಾಲಾಜಿ ಶಂಕರ್–ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ–ಸಿ.ಎಸ್.ಲಕ್ಷ್ಮಿ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಕಾರ್ಯಕ್ರಮ, 1.20 ಭಾವಗೀತೆ–ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಕದ್ರಿ ಗೋಪಾಲನಾಥ್–ಸ್ಯಾಕ್ಸೋಫೋನ್ ವಾದನ, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ, 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ ಸಂತೋಶ್ ನಾಯಕ್ ಆರ್., ನಿರ್ದೇಶಕರು, ಪ್ರಸಾರಾಂಗ, ಪ್ರಸ್ತುತಿ–ಎನ್.ಕೇಶವಮೂರ್ತಿ, 6.55 ಕೃಷಿರಂಗ–ನಾಟಕ 'ಗಡಿ ದಾಟಿದಾಗ', ರಚನೆ–ಡಾ.ಹೆಚ್.ರಾಚಪ್ಪ, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ್, ಕೃಷಿಲೋಕ–ಪ್ರಸ್ತುತಿ ಆರ್.ಲೋಕೇಶ್ವರಿ, 8.00 ವಿಜ್ಞಾನ ಭಾರತಿ–ವೈದ್ಯಕೀಯ ಕ್ಷೇತ್ರದಲ್ಲಿ ಭೌತ ವಿಜ್ಞಾನದ ಅನ್ವಯಗಳು ಕುರಿತು ಅಭಿಷೇಖ್ ಎ.ಎಸ್. ಅವರಿಂದ ಭಾಷಣ, ಕ್ಯಾನ್ಸರ್‌ಕಾರಕಗಳು–ಕರುಳಿನಲ್ಲಿನ ಬ್ಯಾಕ್ಟೀರಿಯಾಗಳು ಕುರಿತು ಸುತ್ತೂರು ಮಾಲಿನಿ ಅವರಿಂದ ಮಾಹಿತಿ, 9.30 ಲೋಕ್ ಪ್ರಸಾರಕ್ ಕೆ ಸಾಥ್, 10.30 ಸವಿನೆನಪು

■ **ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕ :** ಡಾ. ಬಾಬು ಜಗಜೀವನರಾಮ್ ಅವರ 117ನೇ ವರ್ಷದ ಜನ್ಮ ದಿನಾಚರಣೆ ಹಾಗೂ ವಿಶೇಷ ಉಪನ್ಯಾಸ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ವಿಷಯ ತಜ್ಞ ಎನ್.ಸಿ.ಮುನಿಯಪ್ಪ, ವಿಶೇಷ ಉಪನ್ಯಾಸ: ಸಮಾಜ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಮುನಿರಾಜು ಅವರಿಂದ ಕರ್ನಾಟಕ ದಲಿತ ಚಳುವಳಿಯ ಮೇಲೆ ಬಾಬು ಜಗಜೀವನರಾಮ್ ಅವರ ಪ್ರಭಾವ ಕುರಿತು ಉಪನ್ಯಾಸ, ಅಧ್ಯಕ್ಷತೆ : ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಆರ್. ತಿಮ್ಮರಾಯಪ್ಪ, ಉಪಸ್ಥಿತರು: ಮೈಸೂರು ವಿವಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ಉಪಕುಲಸಚಿವ ಎನ್.ಎಸ್.ಚಿದಾನಂದಮೂರ್ತಿ, ಸ್ಥಳ: ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ :** 29ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ : ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಘಟಿಕೋತ್ಸವ ಭಾಷಣ : ಟಿವರ್‌ಕೆನ್ ಇಂಡಿಯಾ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಕೌಲ್, ಸ್ಥಳ: ಇನ್‌ಸ್ಟಿಟ್ಯೂಟ್ ಆವರಣ, ಮಧ್ಯಾಹ್ನ 3ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ಶ್ರೀರಾಘವೇಂದ್ರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

44

ಏಪ್ರಿಲ್ 5 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 347 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಂಡ್ಯದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ

ಬಿಎಸ್‌ವೈ, ಗೋವಾ ಸಿಎಂ ಪ್ರಮೋದ್ ಸಾವಂತ್, ಯದುವೀರ್ ಸಾಥ್



ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ಚುನಾವಣಾಧಿಕಾರಿ ಡಾ.ಕುಮಾರ್ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮೈಸೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉಪಸ್ಥಿತರಿದ್ದರು.

ಮಂಡ್ಯ,ಏ.4– ಮಂಡ್ಯ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಗುರುವಾರ ಮಂಡ್ಯ ಡಿಸಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ಬೆಳಿಗ್ಗೆ 11.15ಕ್ಕೆ ನಾಮಪತ್ರ ಸಲ್ಲಿಸಿದ ಹೆಚ್ಡಿಕೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಮೈಸೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಾಥ್ ನೀಡಿದರು. ರಾಜ್ಯ ನಾಯಕರ ಜೊತೆಗೆ ಒಂದು ಬಾರಿ, ಮಾಜಿ ಶಾಸಕರಾದ ಡಾ.ಕೆ. ಅನ್ನದಾನಿ, ಕೆ.ಸುರೇಶ್‌ಗೌಡ, ಕೆ.ಸಿ.ನಾರಾಯಣ ಗೌಡ ಹಾಗೂ ರವೀಂದ್ರ ಶ್ರೀಕಂಠಯ್ಯ ಹಾಗೂ ನಿಖಿಲ್ ಕುಮಾರಸ್ವಾಮಿ, ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ಸಾ.ರಾ. ಮಹೇಶ್ ಮತ್ತು ಮುಖಂಡ ಬಿ.ಆರ್. ರಾಮಚಂದ್ರ ಜೊತೆಗೆ ಹೀಗೆ ಒಟ್ಟು ಮೂರು ಸೆಟ್ ನಾಮಪತ್ರ ಸಲ್ಲಿಸಿದರು.

ಟೆಂಪಲ್ ರನ್: ಇದಕ್ಕೂ ಮುನ್ನ ಮಂಡ್ಯ ನಗರದ ● 6ನೇ ಪುಟಕ್ಕೆ

ಸಂಸದನಾದರೆ ಕಾವೇರಿ, ಮೇಕೆದಾಟು ಸೇರಿ ಎಲ್ಲಾ ನೀರಾವರಿ ಯೋಜನೆಗೆ ಶಾಶ್ವತ ಪರಿಹಾರ; ಮಾತು ತಪ್ಪಿದರೆ ರಾಜಕೀಯದಲ್ಲಿ ಮುಂದುವರೆಯಲ್ಲ

ಸಮಾವೇಶದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಭರವಸೆ



ಮಂಡ್ಯ,ಏ.4– ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸಂಸದನಾಗಿ ದೆಹಲಿಗೆ ಹೋದರೆ ದಶಕಗಳ ಸಮಸ್ಯೆಯಾದ ಕಾವೇರಿ, ಮೇಕೆದಾಟು, ಭದ್ರ ಮೇಲ್ದಂಡೆ, ಮಹದಾಯಿ, ಕೃಷ್ಣಾ ನದಿ ನೀರು ಹಂಚಿಕೆ ಸೇರಿದಂತೆ ರಾಜ್ಯದ ನೀರಾವರಿ ಸಮಸ್ಯೆಗೆ ಕೇಂದ್ರ ಸರ್ಕಾರದ ಜೊತೆಗೆ ಮಾತುಕತೆ ನಡೆಸಿ ಶಾಶ್ವತ ಪರಿಹಾರ ಒದಗಿಸುತ್ತೇನೆ. ಒಂದು ವೇಳೆ ಸಮಸ್ಯೆ ಪರಿಹರಿಸದಿದ್ದರೆ ಒಂದು ಕ್ಷಣವೂ ರಾಜಕೀಯದಲ್ಲಿ ಮುಂದುವರೆಯುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ ಶಪಥ ಮಾಡಿದರು.

ಗುರುವಾರ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಮಂಡ್ಯ ಜನರು ನನ್ನ ಮೇಲೆ ವಿಶ್ವಾಸ ವಿಡಬೇಕು. ಕೊಟ್ಟ ಭರವಸೆಯನ್ನು ಖಂಡಿತಾ ಈಡೇರಿಸುವೆ ನಾನು ಯಾವುದೇ ಕಾರಣಕ್ಕೂ ನಿಮಗೆ ದ್ರೋಹ ಮಾಡುವುದಿಲ್ಲ ನಿಮಗೆ ದ್ರೋಹವಾದರೆ ದೇವರಿಗೆ ದ್ರೋಹ ಬಗೆದಂತೆ. ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯ ಜನರು ನನಗೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದರು.

ವೈಯಕ್ತಿಕ ಸ್ವಾರ್ಥಕ್ಕೆ ನಾನು ಇಲ್ಲಿಗೆ ಬಂದಿಲ್ಲ. ನೀರಾವರಿ ವಿಚಾರದಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ತಡೆಯಲು ಇಲ್ಲಿಗೆ ಬಂದಿದ್ದು, ದೇವೇಗೌಡರ ಹೋರಾಟದಿಂದ ಹೇಮಾವತಿ ನೀರು ಇಂದು ಜಿಲ್ಲೆಯ ಕೆ.ಆರ್.ಪೇಟೆ, ನಾಗಮಂಗಲ, ಬಸರಾಳಿಗೆ ಸಿಗುತ್ತಿದೆ. ಮಂಡ್ಯ ಜಿಲ್ಲೆಗೆ ದೇವೇಗೌಡರ ಕೊಡುಗೆ ಏನೆಂದು ಪ್ರಶ್ನಿಸುವ ಕಾಂಗ್ರೆಸ್ಸಿಗರಿಗೆ ನೀರಾವರಿ ವಿಚಾರದಲ್ಲಿ ಗೌಡರು ಕೊಟ್ಟಿರುವ ಅನೇಕ ಕೊಡುಗೆಗಳು ನಮ್ಮ ಕಣ್ಮುಂದೆ ಇದೆ ಎಂದರು. ಸಿದ್ದರಾಮಯ್ಯ ಎರಡು ಬಾರಿ ಮುಖ್ಯಮಂತ್ರಿಯಾಗಿ ಮಂಡ್ಯ ಜಿಲ್ಲೆಗೆ ಯಾವ ಕೊಡುಗೆ ಕೊಟ್ಟಿದ್ದಾರೆ. ಮೇಕೆದಾಟಿಗಾಗಿ ಪಾದಯಾತ್ರೆ ನಡೆಸಿದ ಡಿಕೆಶಿ, ಇದೀಗ ಸರ್ಕಾರ ಬಂದ ಮೇಲೆ ಯೋಜನೆ ಕಾರ್ಯಗತ ಮಾಡಲು ಏಕೆ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಪ್ರಶ್ನಿಸಿದ ಅವರು, ಜನರು ಬೆಳೆ ಪರಿಹಾರ ಕೇಳಿದರೆ ಕೇವಲ ಎರಡು ಸಾವಿರ ಹಣವನ್ನು ಭಿಕ್ಷೆ ರೀತಿ ಕೊಡುತ್ತಿದ್ದಾರೆ. ಗ್ಯಾರಂಟಿ ಯೋಜನೆಗಾಗಿ ● 6ನೇ ಪುಟಕ್ಕೆ

ಮೈಸೂರು–ಕೊಡಗು ಕ್ಷೇತ್ರಕ್ಕೆ ಸಾಮಾನ್ಯ ವೀಕ್ಷಕರ ನೇಮಕ

ಮೈಸೂರು, ಏ.4(ಎಸ್‌ಬಿಡಿ)– ಕೇಂದ್ರ ಚುನಾವಣಾ ಆಯೋಗದಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಸಾಮಾನ್ಯ ವೀಕ್ಷಕ, ವೆಚ್ಚ ವೀಕ್ಷಕ ಹಾಗೂ ಪೊಲೀಸ್ ವೀಕ್ಷಕರನ್ನು ನೇಮಕ ಮಾಡಿದೆ.

ಸಾಮಾನ್ಯ ವೀಕ್ಷಕರಾಗಿ ಶಾಹಿದ್ ಇಕ್ಬಾಲ್ ಚೌಧ್ರಿ(9482042877), ವೆಚ್ಚ ವೀಕ್ಷಕರಾಗಿ ಎ.ಸುರೇಶ್ (9482051577) ಹಾಗೂ ಯೋಗೀಶ್ ಮಿಶ್ರ (9482058477) ಮತ್ತು ಪೊಲೀಸ್ ವೀಕ್ಷಕರಾಗಿ ಮನೋಜ್ ತಿವಾರಿ (9482209477) ಅವರನ್ನು ನೇಮಕ ಮಾಡಲಾಗಿದ್ದು, ಸಾರ್ವಜನಿಕರು ಯಾವುದೇ ಮನವಿ ಇಲ್ಲವೇ ನೇರವಾಗಿ ಅಥವಾ ಅಹವಾಲುಗಳನ್ನು ದೂರವಾಣಿ ಮೂಲಕ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಡಾ.ಎಂ.ರಾಜೇಂದ್ರ ತಿಳಿಸಿದ್ದಾರೆ.

ರಾಜ್ಯದಲ್ಲಿ ಮೊದಲ ಹಂತದ ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ತೆರೆ; ಮೈಸೂರು–ಕೊಡಗು, ಚಾ.ನಗರ, ಮಂಡ್ಯ, ಹಾಸನ ಸೇರಿ 14 ಕ್ಷೇತ್ರಗಳಲ್ಲಿ


358 ಮಂದಿ ನಾಮಪತ್ರ ಸಲ್ಲಿಕೆ

- ಇಂದು ನಾಮಪತ್ರ ಪರಿಶೀಲನೆ; ಏ.8 ನಾಮಪತ್ರ ಹಿಂಪಡೆಯಲು ಕಡೇ ದಿನ
- ಏ.26ರಂದು ಈ ಕ್ಷೇತ್ರಗಳಲ್ಲಿ ಮತದಾನ
- ಕಡೇ ದಿನ ಮಾಜಿ ಸಿಎಂ ಕುಮಾರಸ್ವಾಮಿ, ಪ್ರಜ್ವಲ್‌ರೇವಣ್ಣ ಸೇರಿ ಹಲವರಿಂದ ನಾಮಪತ್ರ ಸಲ್ಲಿಕೆ

ಬೆಂಗಳೂರು, ಏ.4(ಕೆಎಂಶಿ)– ಲೋಕಸಭಾ ಚುನಾವಣೆಯ ರಾಜ್ಯದ ಮೊದಲ ಹಂತದ 14 ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಗುರುವಾರ ಮುಕ್ತಾಯವಾಗಿದ್ದು, ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಸೇರಿದಂತೆ 358 ಮಂದಿ ನಾಮಪತ್ರ ಸಲ್ಲಿಸಿದ್ದಾರೆ.

ಇವರಲ್ಲಿ 333 ಮಂದಿ ಪುರುಷರು ಹಾಗೂ 25 ಮಂದಿ ಮಹಿಳೆಯರು ಸೇರಿದ್ದಾರೆ. ನಾಮಪತ್ರ ಹಿಂಪಡೆಯಲು ಏ.8 ಕೊನೆ ದಿನ. ನಾಮಪತ್ರ ಸಲ್ಲಿಕೆಗೆ ಕಡೆಯ ದಿನದಂದು 14 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದರೆ, ಬಿಜೆಪಿಯ 11, ಜೆಡಿಎಸ್‌ನ ಮೂವರು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ (ಮಂಡ್ಯ), ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ್ (ಚಿತ್ರದುರ್ಗ), ಮಾಜಿ ಸಚಿವ ಡಾ.ಕೆ. ಸುಧಾಕರ್ (ಚಿಕ್ಕಬಳ್ಳಾಪುರ) ಸೇರಿದಂತೆ ಇಂದು ನೂರಕ್ಕೂ ಹೆಚ್ಚು ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ. ಮೊದಲ ಹಂತದಲ್ಲಿ ಮೈಸೂರು–ಕೊಡಗು (28), ಚಾಮರಾಜನಗರ(25), ಮಂಡ್ಯ (27), ಹಾಸನ(21), ತುಮಕೂರು(22), ● 6ನೇ ಪುಟಕ್ಕೆ



ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ಡಾ.ಸಿ.ಎನ್.ಮಂಜುನಾಥ್ ಗುರುವಾರ ನಾಮಪತ್ರ ಸಲ್ಲಿಸಿದರು.

ಮೈಸೂರು–ಕೊಡಗು 28, ಚಾ.ನಗರ 25, ಮಂಡ್ಯದಲ್ಲಿ 27 ಮಂದಿ ನಾಮಪತ್ರ ಸಲ್ಲಿಕೆ

ಮೈಸೂರು,ಏ.4(ಆರ್‌ಕೆ)– ಏಪ್ರಿಲ್ 26ರಂದು ನಡೆಯಲಿರುವ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ 28 ಮಂದಿ, ಚಾಮರಾಜನಗರದಿಂದ 25 ಹಾಗೂ ಮಂಡ್ಯದಿಂದ 27 ಮಂದಿ ನಾಮಪತ್ರ ಸಲ್ಲಿಸಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಗ್ರೆಸ್‌ನಿಂದ ಎಂ.ಲಕ್ಷ್ಮಣ, ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್)ದಿಂದ ಟಿ.ಆರ್.ಸುನಿಲ್, ಕರ್ನಾಟಕ ರಾಷ್ಟ್ರ ಸಮಿತಿಯಿಂದ ಎಂ.ಎಸ್.ಪ್ರವೀಣ್, ಅಖಿಲ ಭಾರತ ಹಿಂದೂ ಮಹಾಸಭಾದಿಂದ ಎ.ಎಸ್.ಸತೀಶ್, ಕರುನಾಡು ಪಾರ್ಟಿಯಿಂದ ಹೆಚ್.ಕೆ.ಕೃಷ್ಣ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಜೆ.ಎಸ್. ಲೀಲಾವತಿ, ಸೋಷಿಯಲಿಸ್ಟ್ ಪಾರ್ಟಿ (ಇಂಡಿಯಾ)ಯ ಎನ್.ಹರೀಶ್, ಇಂಡಿಯನ್ ಮೂವ್‌ಮೆಂಟ್ ಪಾರ್ಟಿಯ ಕ್ರಿಸ್ಟೋಫರ್ ರಾಜಕುಮಾರ್, ಸಮಾಜವಾದಿ ಜನತಾ ಪಾರ್ಟಿಯಿಂದ ಹೆಚ್.ಎನ್. ನಂಜುಂಡಸ್ವಾಮಿ, ಕರ್ನಾಟಕ ಜನತಾ ಪಕ್ಷದಿಂದ ಎನ್.ಅಂಬರೀಶ್, ಜಾತ್ಯಾತೀತ ಪ್ರಜಾಪ್ರಭುತ್ವ ಕಾಂಗ್ರೆಸ್‌ನಿಂದ ಎ.ಜಿ.ರಾಮಚಂದ್ರ, ಸಮಾಜವಾದಿ ಪಕ್ಷದ ರೇವತಿರಾಜ್, ಪಕ್ಷೇತರ ಅಭ್ಯರ್ಥಿಗಳಾಗಿ ಪಿ.ಎಸ್.ಯಡೂರಪ್ಪ, ಎಸ್. ದೊರೆಸ್ವಾಮಿ, ಶಿವನಂಜಯ್ಯ, ರಂಗಸ್ವಾಮಿ, ಎಂ.ರಾಮಮೂರ್ತಿ, ಎಂ.ಶ್ರೀನಿವಾಸ್, ಪಿ.ಕೆ.ದರ್ಶನ್ ಶೌರಿ, ರಾಜು, ಹೆಚ್.ಎಂ. ನಂಜುಂಡಸ್ವಾಮಿ, ಎನ್.ಅಂಬರೀಶ್, ಸಣ್ಣನಾಯಕ, ಸಿ.ಜೆ.ಅಂಬೇಡ್ಕರ್, ರಾಜಣ್ಣ, ಡಿ.ರಾಮಯ್ಯ, ಆರ್.ಮಹೇಶ, ಡಿ.ಎನ್. ನವೀನ್‌ಕುಮಾರ್ ಹಾಗೂ ಜೆ.ಶಿವಕುಮಾರ್ ನಾಮಪತ್ರ ಸಲ್ಲಿಸಿದ್ದಾರೆ.

ಭಾರತೀಯ ಜನತಾ ಪಕ್ಷ(ಬಿಜೆಪಿ)ದ ಅಭ್ಯರ್ಥಿಯಾಗಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಏಪ್ರಿಲ್ 1 ರಂದು 2 ಸೆಟ್ ಹಾಗೂ ಏಪ್ರಿಲ್ 3 ರಂದು 2 ಸೆಟ್ ನಾಮಪತ್ರ ಸಲ್ಲಿಸಿದರೆ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಐಎನ್‌ಸಿ) ಪಕ್ಷದ ಅಭ್ಯರ್ಥಿಯಾಗಿ ಎಂ.ಲಕ್ಷ್ಮಣ ಏಪ್ರಿಲ್ 3ರಂದು 4 ಸೆಟ್ ಉಮೇದುವಾರಿಕೆ ಪತ್ರಗಳನ್ನು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ಸಲ್ಲಿಸಿದ್ದಾರೆ.

ಚಾಮರಾಜನಗರ ವರದಿ: ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಒಟ್ಟು 25 ಅಭ್ಯರ್ಥಿಗಳಿಂದ 36 ನಾಮಪತ್ರಗಳು ಸಲ್ಲಿಕೆಯಾಗಿವೆ. ಬಿಜೆಪಿಯಿಂದ ಎಸ್.ಬಾಲರಾಜು, ● 6ನೇ ಪುಟಕ್ಕೆ

ಸುಮಲತಾ ಇಂದು ಬಿಜೆಪಿ ಸೇರ್ಪಡೆ



ಮಂಡ್ಯ: ಬೆಂಗಳೂರಿನ ಭಾರತೀಯ ಜನತಾ ಪಕ್ಷದ ಕಚೇರಿಯಲ್ಲಿ ನಾಳೆ (ಶುಕ್ರವಾರ) ಬೆಳಿಗ್ಗೆ 11.30ಕ್ಕೆ ಮಂಡ್ಯ ಪಕ್ಷೇತರ ಸಂಸದೆ ಸುಮಲತಾ ಅಂಬರೀಷ್ ಬಿಜೆಪಿ ಸೇರ್ಪಡೆಯಾಗಲಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಂಡ್ಯದ ಅಭಿವೃದ್ಧಿಯೇ ನನ್ನ ಮೂಲಮಂತ್ರವಾಗಿಸಿಕೊಂಡು ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬ ಆಶಯದೊಂದಿಗೆ ಭಾರತೀಯ ಜನತಾ ಪಕ್ಷವನ್ನು ಬೆಂಬಲಿಸುವುದಾಗಿ ಘೋಷಿಸಿದ್ದೆ. ಇದೀಗ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದು, ಮಂಡ್ಯದ ನನ್ನ ಸ್ವಾಭಿಮಾನಿ ಬಂಧುಗಳ, ಡಾ.ಅಂಬರೀಶ್ ಅಭಿಮಾನಿಗಳು, ನನ್ನ ಹಿತೈಷಿಗಳ ಹಾರೈಕೆ ಮತ್ತು ಆಶೀರ್ವಾದ ಎಂದಿನಂತೆ ಇರಲಿ ಎಂದು ಕೋರಿದ್ದಾರೆ.

ರಾಜ್ಯ ನಾಯಕರ ಸಮ್ಮುಖದಲ್ಲಿ ಬಿಜೆಪಿ ಸೇರಲಿರುವ ಸುಮಲತಾ ಅವರು ಬುಧವಾರ ಮಂಡ್ಯದಲ್ಲಿ ನಡೆದ ಬೆಂಬಲಿಗರ ಸಭೆಯಲ್ಲಿ ನಾನು ಪಕ್ಷೇತರ ಅಭ್ಯರ್ಥಿ ಎಂದು ಕಡೆಗಣಿಸದೆ ಜಿಲ್ಲೆಯ ಅಭಿವೃದ್ಧಿಗೆ ಸಹಕಾರ ನೀಡಿದ ಬಿಜೆಪಿಯನ್ನು ಸೇರುವುದಾಗಿ ಘೋಷಿಸಿದ್ದರು.

ಮೈಸೂರಲ್ಲಿ ಕಾಲರಾ; ಮಹಿಳೆ ಗುಣಮುಖ

- ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಡಿಸ್ಚಾರ್ಜ್
- ಸಂಪೂರ್ಣ ನಿರ್ಮೂಲನೆಯಾಗಿದ್ದ ಕಾಲರಾ ಸೋಂಕು ಹಲವು ವರ್ಷಗಳ ನಂತರ ಪತ್ತೆ
- ಬಿಸಿಲಿನ ತೀವ್ರತೆ ಜಾಸ್ತಿಯಾಗಿರುವುದರಿಂದ ಸಾಂಕ್ರಾಮಿಕ ರೋಗ ಹರಡದಂತೆ ಆರೋಗ್ಯ ಇಲಾಖೆ ಎಚ್ಚರಿಕೆ

ಮೈಸೂರು, ಏ.4(ಆರ್‌ಕೆ)–ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಸಂಪೂರ್ಣವಾಗಿ ನಿರ್ಮೂಲನೆಯಾಗಿದ್ದ ಕಾಲರಾ ಸಾಂಕ್ರಾಮಿಕ ರೋಗ ಹಲವು ವರ್ಷಗಳ ನಂತರ ಇದೀಗ ಕಾಣಿಸಿಕೊಂಡಿದೆ.

ಮೈಸೂರು ನಗರದ ಎನ್‌ಆರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಳೇ ಬಡಾವಣೆ ಮಹಿಳೆಯೊಬ್ಬರಿಗೆ ಕಾಲರಾ ದೃಢಪಟ್ಟಿದ್ದು, ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದು ಗುಣಮುಖರಾಗಿ ಎರಡು ದಿನಗಳ ಹಿಂದಷ್ಟೇ ಡಿಸ್ಚಾರ್ಜ್ ಆಗಿದ್ದಾರೆ. ತೀವ್ರ ಹೊಟ್ಟೆನೋವು, ವಾಂತಿ–ಭೇದಿ ಕಾಣಿಸಿಕೊಂಡ ಕಾರಣ ಮಹಿಳೆ ಕೆ.ಆರ್.ಆಸ್ಪತ್ರೆಗೆ ತೆರಳಿ ತಪಾಸಣೆ ಮಾಡಿಸಿಕೊಂಡಾಗ ಸಾಂಕ್ರಾಮಿಕ ರೋಗ ಲಕ್ಷಣ ಕಂಡು ಬಂದ ಹಿನ್ನೆಲೆಯಲ್ಲಿ ಅವರನ್ನು ಒಳರೋಗಿಯಾಗಿ ದಾಖಲಿಸಿಕೊಳ್ಳಲಾಗಿತ್ತು. ಸುಮಾರು 52 ವರ್ಷ ವಯಸ್ಸಿನ ಮಹಿಳೆ ತೀವ್ರ ನಿತ್ರಾಣಗೊಂಡಿದ್ದರಿಂದ ಅಪೌಷ್ಟಿಕತೆ ಬಾಧಿಸದಂತೆ ಚಿಕಿತ್ಸೆ ನೀಡಲಾಗಿತ್ತು. ಪ್ರಯೋಗಾಲಯದಲ್ಲಿ ಮಲ ಪರೀಕ್ಷೆ ಮಾಡಿಸಿದಾಗ ರೋಗಿಗೆ ಕಾಲರಾ ದೃಢಪಟ್ಟ ಕಾರಣ ಪ್ರತ್ಯೇಕ ಹಾಸಿಗೆಯಲ್ಲಿರಿಸಿ ಒಂದು ವಾರ ಕಾಲ ಚಿಕಿತ್ಸೆ ನೀಡಿದ ಬಳಿಕ ಮತ್ತೊಮ್ಮೆ ಪರೀಕ್ಷೆ ನಡೆಸಿ ಕಾಲರಾ ಸಂಪೂರ್ಣ ಗುಣ ಮುಖವಾದ ಹಿನ್ನೆಲೆಯಲ್ಲಿ ಆ



ಮಹಿಳೆಯನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಯಿತು ಎಂದು ವೈದ್ಯರು ತಿಳಿಸಿದ್ದಾರೆ. ಬಿಸಿಲಿನ ತೀವ್ರತೆ, ಅಶುಚಿತ್ವ, ಕಲುಷಿತ ನೀರು, ಆಹಾರ ಸೇವನೆಯಿಂದ ಸಾಂಕ್ರಾಮಿಕ ರೋಗ ಹರಡಲು ಕಾರಣವಾಗಿದ್ದು, ಹಲವು ವರ್ಷಗಳ ಬಳಿಕ ಮೈಸೂರಲ್ಲಿ ಇದೇ ಮೊದಲು ಕಾಲರಾ ದೃಢಪಟ್ಟಿದ್ದು. ಅವರನ್ನು ದಾಖಲಿಸಿಕೊಂಡು ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ ಎಂದು ಕೆ.ಆರ್.ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳ ಗಮನಕ್ಕೂ ತರಲಾಗಿದೆ. ಅದೇ ರೀತಿ ಎಂಟು ಮಂದಿ ವಾಂತಿ–ಭೇದಿ ಸಮಸ್ಯೆ ಯಿಂದ ಆಸ್ಪತ್ರೆಗೆ ದಾಖಲಾಗಿದ್ದರಾದರೂ, ಅವರಲ್ಲಿ ಕಾಲರಾ ಲಕ್ಷಣ ಕಂಡು ಬಂದಿಲ್ಲ. ಅವರೂ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ರಾಜ್ಯದಲ್ಲಿ ತಾಪಮಾನ ದಿನೇ ದಿನೆ ತಾರಕಕ್ಕೆ! ಜನ–ಜಾನುವಾರುಗಳ ಆರೋಗ್ಯಕ್ಕೆ ಕಂಟಕ ಭೀತಿ

- ಸ್ವಯಂ ಎಚ್ಚರಿಕಾ ಕ್ರಮ ಕೈಗೊಳ್ಳದೇ ಇದ್ದರೆ ಗಂಭೀರ ಸಮಸ್ಯೆ
- ಅನಿವಾರ್ಯವಾದರೆ ಕೂಡಲೇ ವೈದ್ಯರ ಭೇಟಿ ಒಳ್ಳೆಯದು

ಮೈಸೂರು, ಏ.4(ಎಸ್‌ಬಿಡಿ)– ರಾಜ್ಯದ ಉತ್ತರ ಒಳನಾಡು, ದಕ್ಷಿಣ ಒಳನಾಡು ಮತ್ತು ಕರಾವಳಿ ಪ್ರದೇಶಗಳ ಕೆಲವು ಭಾಗಗಳಲ್ಲಿ ಸಾಮಾನ್ಯಕ್ಕಿಂತ 2–3 ಡಿಗ್ರಿ ಅಧಿಕ ತಾಪಮಾನ ದಾಖಲಾಗುತ್ತಿದ್ದು ಜನ–ಜಾನುವಾರುಗಳ ಆರೋಗ್ಯಕ್ಕೆ ಕಂಟಕಪ್ರಾಯವಾಗಿದೆ.

ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿದ ಹವಾಮಾನ ಮುನ್ಸೂಚನೆ ಆಧರಿಸಿ, ಕರ್ನಾಟಕದಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ತಾಪಮಾನ ಇರಲಿದೆ. ಈಗಾಗಲೇ ರಾಜ್ಯದ 223 ತಾಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಿದ್ದು, ಇದೀಗ ಅತೀ ಹೆಚ್ಚು ತಾಪಮಾನದಿಂದ ಪ್ರತಿಕೂಲ ಪರಿಣಾಮ ಉಂಟಾಗಬಹುದು. ಇದನ್ನು ತಡೆಗಟ್ಟುವ ಅಥವಾ ನಿಯಂತ್ರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸಲಹೆ–ಸೂಚನೆಗಳನ್ನು ನೀಡಿ, ಅನುಸರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಆರೋಗ್ಯದ ಮೇಲೆ ಪರಿಣಾಮ: ಅತೀ ಹೆಚ್ಚು ತಾಪಮಾನದಿಂದ ಸಾಮಾನ್ಯವಾಗಿ ನಿರ್ಜಲೀಕರಣ, ಶಾಖ ಸೆಳೆತ, ಬಳಲಿಕೆ, ಶಾಖದ ಆಘಾತ(ಸನ್‌ಸ್ಟ್ರೋಕ್) ಉಂಟಾಗುವ ಸಾಧ್ಯತೆ ಇರುತ್ತದೆ. ಊತ(ಎಡೆರ್ನಾ), ಮೂರ್ಛೆ, ಸಾಮಾನ್ಯವಾಗಿ 39 ಡಿಗ್ರಿ ಸೆಲ್ಸಿಯಸ್‌ಕ್ಕಿಂತ ಕಡಿಮೆ ಜ್ವರವಿದ್ದರೆ ಶಾಖ ಸೆಳೆತವಿರ ಬಹುದು. ಆಯಾಸ, ದೌರ್ಬಲ್ಯ, ತಲೆ ತಿರುಗುವಿಕೆ, ತಲೆ ನೋವು, ವಾಕರಿಕೆ, ವಾಂತಿ, ಸ್ನಾಯು ಸೆಳೆತ ಮತ್ತು ಬೆವರು ವುದು ಶಾಖದ ಬಳಲಿಕೆ ಲಕ್ಷಣಗಳಿ ರಬಹುದು. ದೇಹದ ಉಷ್ಣತೆ 40 ಡಿಗ್ರಿ ಸೆ. ಅಂದರೆ 104 ಡಿಗ್ರಿ 'ಎಫ್' ಅಥವಾ ಅದಕ್ಕಿಂತ ಹೆಚ್ಚಾಗುವುದು, ಉಸಿರಾಟದಲ್ಲಿ ವ್ಯತ್ಯಯವಾಗುವುದು ಹಾಗೂ ಪ್ರಜ್ಞೆ ತಪ್ಪಿದರೆ ಶಾಖದ ಆಘಾತವಿರಬಹುದು. ಈ ಲಕ್ಷಣಗಳನ್ನು ನಿರ್ಲಕ್ಷ್ಯ ಮಾಡಬಾರದು.



ಪ್ರಥಮ ಚಿಕಿತ್ಸೆ: ಅತೀ ಹೆಚ್ಚು ತಾಪಮಾನಕ್ಕೆ ತುತ್ತಾದ ವ್ಯಕ್ತಿಯನ್ನು ನೆರಳು ಹಾಗೂ ತಂಪಾದ ಸ್ಥಳಕ್ಕೆ ಕರೆದೊಯ್ಯಬೇಕು. ಒದ್ದೆಯಾದ ಬಟ್ಟೆಯಿಂದ ಅವರ ಮೈ ಒರೆಸುವುದು, ಒದ್ದೆ ಬಟ್ಟೆಯನ್ನು ಹಾಕುವುದು, ತಲೆಯ ಮೇಲೆ ನೀರು ಹಾಕುವುದು ಒಳ್ಳೆಯದು. ಪ್ರಜ್ಞೆ ಇದ್ದರೆ ಮಾತ್ರ ನೀರು ಅಥವಾ ಪುನರ್ಜಲೀಕರಣ ಪಾನೀಯಗಳಾದ ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ತರುಣಿ : (ಮೇಕಪ್ ಮಾಡಿಕೊಂಡು ಬರ್ತಾ ಇದ್ದ ತರುಣಿ) ನಡ್ಕೊಂಡು ಬರ್ತಿದೀನಿ ನನಗ್ಯಾಕೇ ಫೈನು?

ಪೋಲೀಸ್ : ಈ ಥರಾ ಮೇಕಪ್ ಮಾಡ್ಕೊಂಡ್ರೆ ಮುಖ ತೊಳೆಯೋಕೇ ಸಿಕ್ಕಾಪಟ್ಟೆ ನೀರು ಖರ್ಚಾಗುತ್ತೇ... ಅದಕ್ಕೆ...!

ಮೈಸೂರು ಮಿತ್ರ

ಶುಕ್ರವಾರ, 5 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮಿತವಾಗಿಯೂ ಹಾಗೂ ಸತ್ವಯುತವಾಗಿಯೂ ಇರುವ ಮಾತೇ ಮಾತುಗಾರಿಕೆಯ ಲಕ್ಷಣ –ವೈಷಧೀಯ ಚರಿತ್ರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಠಕ್ಕೆ ಗುರು ಭೂಷಣ, ಮನೆಗೆ ಹಿರಿಯರು ಭೂಷಣ

ನಿಮ್ಮ ಪತ್ರಗಳು

ಕೊಳವೆ ಬಾವಿ ದುರಂತಗಳನ್ನು ಗಂಭೀರವಾಗಿ ಪರಿಗಣಿಸಬೇಕು

ಮಾನ್ಯರೆ,

ಪ್ರಸ್ತುತ ಮಳೆಯ ಅಭಾವದಿಂದಾಗಿ ನೀರಿನ ಸಮಸ್ಯೆ ಎದುರಾಗಿದ್ದು, ಕೃಷಿ ಕಾರ್ಯಗಳಿಗೆ ನೀರಿನ ಅಗತ್ಯತೆಗಾಗಿ ಕೊಳವೆ ಬಾವಿಗಳನ್ನು ಕೊರೆಸುವುದು ಸಾಮಾನ್ಯವಾಗಿದೆ. ಯಂತ್ರದ ಸಹಾಯದಿಂದ ಭೂಮಿಯನ್ನು ಕೊರೆದು ನೀರನ್ನು ಪಡೆಯುವುದಕ್ಕೆ ಕೊಳವೆ ಬಾವಿ ಎಂದು ಕರೆಯುತ್ತಾರೆ.

ಕೊಳವೆ ಬಾವಿಗಳನ್ನು ನೂರು, ಸಾವಿರ ಅಡಿಗಳ ಆಳದವರೆಗೆ ಕೊರೆಯಲಾಗುತ್ತದೆ. ಆದರೆ ಕೊರೆದ ಕೊಳವೆ ಬಾವಿಗಳನ್ನು ಮುಚ್ಚದೆ ತೆರೆದಿಡುವ ಪರಿಣಾಮ ಸಣ್ಣ ಮಕ್ಕಳು ಅದರಲ್ಲಿ ಬಿದ್ದು ಮೃತರಾದ ಘಟನೆಗಳು ನಮ್ಮ ಕಣ್ಣ ಮುಂದಿದೆ. ಕೆಲವು ಮಕ್ಕಳು ಅದೃಷ್ಟದಿಂದ ಬದುಕಿದ ಉದಾಹರಣೆಗಳು ಇವೆ.

ಕಳೆದ 17 ವರ್ಷಗಳಲ್ಲಿ ರಾಜ್ಯದಲ್ಲಿ 9 ಕೊಳವೆ ಬಾವಿಗೆ ಮಕ್ಕಳು ಬಿದ್ದ ಪ್ರಕರಣಗಳು ನಡೆದಿದ್ದರೂ ಜಮೀನು ಮಾಲೀಕರು ಎಚ್ಚರಗೊಳ್ಳದೆ ಇರುವುದು ದುರದೃಷ್ಟಕರವಾಗಿದೆ. ಬೋರ್‌ವೆಲ್ ತೆಗೆದ ಬಳಿಕ ಅವುಗಳನ್ನು ಮುಚ್ಚುವ ಬಗ್ಗೆ 2010ರಲ್ಲೇ ಸುಪ್ರೀಂಕೋರ್ಟ್ ಮಾರ್ಗಸೂಚಿಗಳನ್ನು ನೀಡಿದೆ.

ಆದರೆ 2014ರಲ್ಲಿ ಬಾಗಲಕೋಟೆಯ ತಿಮ್ಮಣ್ಣ ಎಂಬ ಬಾಲಕ ಕೊಳವೆ ಬಾವಿಗೆ ಬಿದ್ದು ಮೃತಪಟ್ಟ ನಂತರ ಹೈಕೋರ್ಟ್ ಸರ್ಕಾರಕ್ಕೆ ಇಂತಹ ದುರಂತಗಳನ್ನು ಕ್ರಿಮಿನಲ್ ಮೊಕದ್ದಮೆಗಳಾಗಿ ಪರಿಗಣಿಸುವಂತೆ ಆದೇಶ ನೀಡಿ ದಂಡ ವಸೂಲಿ ಮಾಡಲು ಸೂಚಿಸಿರುವುದು ಇದರ ಗಂಭೀರತೆಯನ್ನು ತಿಳಿಸಿಕೊಡುತ್ತದೆ. ಈಗ ಸಾತ್ವಿಕ್ ಮುಜಗೊಂಡ ಎಂಬ ಎರಡು ವರ್ಷದ ಬಾಲಕ ಆಟವಾಡಲು ಹೋಗಿದ್ದ ವೇಳೆ 500 ಅಡಿ ಆಳದ ಕೊಳವೆ ಬಾವಿಯಲ್ಲಿ ಬಿದ್ದಿದ್ದಾನೆ. ಈ ಬಾಲಕ ಸತೀಶ್ ಮತ್ತು ಪೂಜಾ ದಂಪತಿಯ ಮಗನಾಗಿದ್ದಾನೆ. ಸಾತ್ವಿಕ್ 20 ಅಡಿ ಆಳದಲ್ಲಿ ಸಿಲುಕಿ ಕೊಂಡಿರುವ ನಿಖರ ಮಾಹಿತಿಯಿದ್ದು ರಕ್ಷಣಾ ಕಾರ್ಯಪಡೆಯ 20 ಗಂಟೆಗಳ ಯಶಸ್ವಿ ಕಾರ್ಯಾಚರಣೆ ನಂತರ ಮಗುವನ್ನು ರಕ್ಷಿಸಿ ದೇಶದ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಸರ್ಕಾರ ರಾಜ್ಯದಲ್ಲಿನ ಕೊಳವೆ ಬಾವಿಗಳನ್ನು ಮುಚ್ಚುವಂತೆ ಆದೇಶ ಹೊರಡಿಸಬೇಕು. ಇಲ್ಲವಾದರೆ ಇಂತಹ ಅಪರಾಧಗಳನ್ನು ಕ್ರಿಮಿನಲ್ ಮೊಕದ್ದಮೆ ಅಡಿಯಲ್ಲಿ ಬಂಧಿಸಬೇಕು ಮತ್ತು ಇವರಿಗೆ ಜೈಲು ಶಿಕ್ಷೆಯ ಜೊತೆಗೆ ದೊಡ್ಡ ಮೊತ್ತದ ದಂಡ ವಿಧಿಸಿದರೆ ಇಂತಹ ಪ್ರಕರಣಗಳಿಗೆ ಕಡಿವಾಣ ಬೀಳುತ್ತದೆ ಮತ್ತು ಸಣ್ಣ ಮಕ್ಕಳ ಜೀವ ಉಳಿಯುತ್ತದೆ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಉಳಿದ ಶೇ.2.31 ನೋಟು ಏನಾಯಿತು?

ಮಾನ್ಯರೆ,

2 ಸಾವಿರ ರೂ. ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19 ರಂದು ಆರ್‌ಬಿಐ ಘೋಷಿಸಿದಾಗಿನಿಂದ ವಿನಿಮಯಕ್ಕೆ ನೀಡಲಾಗಿದ್ದ 7 ಅಕ್ಟೋಬರ್ 2023 ರವರೆಗೆ ಶೇ.97.69 ರಷ್ಟು 2 ಸಾವಿರ ಮುಖಬೆಲೆಯ ನೋಟುಗಳು ಬ್ಯಾಂಕ್‌ಗಳಿಗೆ ಮರಳಿದ್ದು, ಇನ್ನೂ 8,202 ಕೋಟಿ ಮೌಲ್ಯದ ನೋಟುಗಳು ಸಾರ್ವಜನಿಕರ ಬಳಿ ಇವೆ ಎಂದು ಆರ್‌ಬಿಐ ಪ್ರಕಟಣೆ ತಿಳಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ.

ಆದರೆ 8202 ಕೋಟಿ ಏನು ಕಡೆಗಣಿಸುವ ಮೊತ್ತವಲ್ಲ. (2 ಸಾವಿರ ಮುಖ ಬೆಲೆಯ ಇನ್ನೂ ಸುಮಾರು 4 ಕೋಟಿ 10 ಲಕ್ಷದ 10 ಸಾವಿರ ನೋಟುಗಳು ಆರ್‌ಬಿಐ ಪ್ರಕಾರ ಜನರ ಬಳಿಯೇ ಇವೆ!)

ಹಾಗಾದರೆ ಈ ನೋಟುಗಳು ಮರಳದಿರಲು ಕಾರಣವೇನು? ಎಲ್ಲಾ ಜನರಿಗೂ ಈ ಮಾಹಿತಿ ತಿಳಿದಿರಲಿಲ್ಲವೇ? ಇವು ಹೊರ ಬರದಿರಲು ಕಾರಣವೇನು? ಎನ್ನುವ ಮಾಹಿತಿಯನ್ನು ಸಾರ್ವಜನಿಕರಿಗೆ, ಸಾರ್ವಜನಿಕ ಹಿತದೃಷ್ಟಿಯಿಂದ ತಿಳಿಯಪಡಿಸುವುದು ಆರ್‌ಬಿಐನ ಕರ್ತವ್ಯವಾಗಿದೆ.

ಅಂದ ಹಾಗೆ ಇನ್ನೂ ಖುದ್ದಾಗಿ ಆರ್‌ಬಿಐ ಕಚೇರಿಗೇ ತೆರಳಿ ನೋಟು ವಿನಿಮಯ ಮಾಡಿಕೊಳ್ಳಬಹುದು ಎಂದೂ ಹಾಗೂ 2 ಸಾವಿರ ಮುಖಬೆಲೆಯ ನೋಟುಗಳ ಮೌಲ್ಯ ರದ್ದಾಗಿಲ್ಲ ಎಂದು ಕೂಡ ಗೂಗಲ್ ಮಾಹಿತಿ ತಿಳಿಸುತ್ತದೆ.

–ಮುಳ್ಳೂರು ಪ್ರಕಾಶ್, ಮೈಸೂರು.

ಆಸ್ತಿ ತೆರಿಗೆ ಶೇ. 15 ರಿಂದ 20 ಹೆಚ್ಚಳ ಅವೈಜ್ಞಾನಿಕ

ಮಾನ್ಯರೆ,

ಮೈಸೂರು ನಗರಪಾಲಿಕೆಯು 2024–25ರ ಸಾಲಿನ ಮನೆ ಕಂದಾಯ ಸೇರಿದಂತೆ ಎಲ್ಲಾ ಆಸ್ತಿಗಳ ತೆರಿಗೆಯನ್ನು ಶೇ. 15 ರಿಂದ 20 ರಷ್ಟು ಹೆಚ್ಚಿಸುವ ಮೂಲಕ ಒಂದು ರೀತಿಯಲ್ಲಿ ಹಗಲುದರೋಡೆಗೆ ಇಳಿದಿದೆ.

ಸರ್ಕಾರದ ನಿಯಮದಂತೆ ಪ್ರತಿ ವರ್ಷ ಶೇ.5 ರಷ್ಟು ಮಾತ್ರ ಹೆಚ್ಚು ಮಾಡಲು ಅವಕಾಶವಿದೆ. ಆದರೆ ಈ ವರ್ಷ ಏಕಾಏಕಿ ಶೇ.15 ರಿಂದ 20 ರಷ್ಟು ಹೆಚ್ಚಿಸಲು ಕಾರಣವೇನು? ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ತೆರಿಗೆ ಪಾವತಿ ಮಾಡುವವರಿಗೆ ಶೇ.5 ರಷ್ಟು ರಿಯಾಯಿತಿ ನೀಡುತ್ತಿದ್ದರಿಂದ, ಪ್ರತಿ ವರ್ಷ ಶೇ.5 ರಷ್ಟು ಹೆಚ್ಚು ಮಾಡುತ್ತಿದ್ದರೂ ಅದು ಕಂಡು ಬರುತ್ತಿರಲಿಲ್ಲ. ಈಗ ಶೇ.15 ರಿಂದ 20 ರಷ್ಟು ಹೆಚ್ಚಿಸಿರುವುದು ಅವೈಜ್ಞಾನಿಕ ತೀರ್ಮಾನ ಎನಿಸುತ್ತದೆ. ಇದೊಂದು ರೀತಿಯಲ್ಲಿ ಬಡವರ ಹೊಟ್ಟೆಯ ಮೇಲೆ ಹೊಡೆದಂತೆ. ಮಹಾನಗರಪಾಲಿಕೆ ಆಯುಕ್ತರು ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಗ್ರಾಮ ಆಡಳಿತ ಅಧಿಕಾರಿ ಹುದ್ದೆಗೆ ಅರ್ಜಿ ಹಾಕಲು ಅವಕಾಶ ಕಲ್ಪಿಸಿ

ಮಾನ್ಯರೆ,

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಳೆದ ಮಾರ್ಚ್ ತಿಂಗಳಲ್ಲಿ ಒಂದು ಸಾವಿರ (1000) ಗ್ರಾಮ ಆಡಳಿತ ಅಧಿಕಾರಿ ಹುದ್ದೆಗೆ 2024ರ ಫೆಬ್ರವರಿ 20 ರಂದು ಅಧಿಸೂಚನೆ ಹೊರಡಿಸಿರುವ ಪ್ರಕಾರ ಮಾರ್ಚ್ ತಿಂಗಳ 4ನೇ ತಾರೀಖಿನಿಂದಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಬೇಕಿತ್ತು. ಆದರೆ ಏಪ್ರಿಲ್ ತಿಂಗಳು ಬಂದರು ಸಹ ಅರ್ಜಿ ಸಲ್ಲಿಸಲು ಆನ್‌ಲೈನ್‌ನಲ್ಲಿ ಅವಕಾಶ ಕಲ್ಪಿಸದೆ ಇರುವುದರಿಂದ ಈ ಹುದ್ದೆಗಾಗಿ ಸುಮಾರು ವರ್ಷಗಳಿಂದ ತಯಾರಿ ನಡೆಸಿರುವ ನಿರುದ್ಯೋಗಿಗಳಿಗೆ ಆತಂಕ ಎದುರಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸರಿಯಾದ ತಯಾರಿ ಮಾಡದೆ ಅಧಿಸೂಚನೆ ಹೊರಡಿಸಿರುವುದು ಎಷ್ಟರ ಮಟ್ಟಿಗೆ ಸರಿ...? ಇಲ್ಲಿನ ಅಧಿಕಾರಿಗಳು ಈ ಹುದ್ದೆಯ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆ ಸಾರ್ವಜನಿಕವಾಗಿ ಉದ್ಯೋಗಾಕಾಂಕ್ಷಿಗಳು ಪ್ರಶ್ನೆ ಮಾಡಿದರೆ ಕಾರಣಗಳನ್ನು ನೀಡಿ, ಕೆಲವು ತೊಂದರೆಗಳಾಗಿದೆ. ಅರ್ಜಿ ಹಾಕಲು ಪ್ರಾರಂಭಿಸಲಾಗುವುದು ಎಂದು ಜಾರಿಕೊಳ್ಳಲಾಗುತ್ತಿದೆ. ಆದ್ದರಿಂದ ಈ ಕೊಡಲೇ ಈ ವಿಷಯಕ್ಕೆ ಸಂಬಂಧಿಸಿದ ಅಧಿಕಾರಿಗಳು ಈ ಹುದ್ದೆಗೆ ಅರ್ಜಿ ಹಾಕಲು ಸರಿಯಾಗಿ ತಯಾರಿ ಮಾಡಿ ಆನಂತರ ಅರ್ಜಿ ಹಾಕಲು ಅವಕಾಶ ಕಲ್ಪಿಸಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಬೇಕು... ಬೇಕು... ಬೇಕು... ಸಾಕು!; ಇದು ಪ್ರತಿಯೊಬ್ಬರ ಜೀವನ ಸೂತ್ರವಾಗಲಿ!!


ಅದೇಕೋ ನಮಗೆ ಈ ಆಮಿಷಗಳ ಫಲವಾಗಿ ನಾವು ತೃಪ್ತರಾಗುವ ಎಲ್ಲ ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎನಿಸುತ್ತದೆ. ನಮಗೆ ಯಾವುದರಲ್ಲಿ ತೃಪ್ತಿ ಸಿಗುತ್ತದೆ ಎಂಬುದೇ ಗೊತ್ತಾಗುತ್ತಿಲ್ಲ. ಎಷ್ಟಿದ್ದರೂ ಇನ್ನಷ್ಟು, ಮತ್ತಷ್ಟು ಬೇಕು ಎಂಬ ಧಾವಂತದಿಂದ ಇರುವುದನ್ನೂ ಅನುಭವಿಸಲಾಗದೇ ತೊಳಲಾಡುವಂತಾಗಿರುವುದು ವಿಪರ್ಯಾಸ. ಈ ಮನೋಭಾವದಿಂದಾಗಿ ನಾವು ಪರಸ್ಪರ ಸಂಬಂಧಗಳನ್ನೂ ಕಡಿತಗೊಳಿಸಿಕೊಳ್ಳುತ್ತಿದ್ದೇವೆ. ಹಣ, ಆಸ್ತಿಯ ಮುಂದೆ ಬಾಕಿಯದ್ದೆಲ್ಲಾ ನಗಣ್ಯ ಎಂಬಂತಾಗಿ ಬಿಡುತ್ತಿರುವುದು ಬೇಸರದ ಸಂಗತಿ.

ಮುಖ್ಯವಾಗಿ ನಮಗೆ ಯಾವುದು ಎಷ್ಟು ಬೇಕು ಎಂಬುದೇ ಅರಿವಿಲ್ಲ. ಬೇಕು... ಬೇಕು... ಬೇಕು... ಎಂಬ ಮನೋಭಾವದಿಂದಾಗಿ ನಮಗೆ ಸಾಕು... ಸಾಕು... ಸಾಕು... ಎಂಬ ಮನೋಭಾವವೇ ಇಲ್ಲವಾಗುತ್ತಿರುವುದು ಒಳ್ಳೆಯ ಸಂಗತಿ ಎನಿಸುವುದಿಲ್ಲ. ಹಣ ಹಾಗೂ ಅಧಿಕಾರದ ಹಪಾಹಪಿಯಲ್ಲಿ ನಮ್ಮ ಆತ್ಮೀಯರನ್ನೇ ದೂರ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತಿದೆ.

ಹಣ, ಆಸ್ತಿ ಆಸೆಗಾಗಿ ಜನ್ಮ ಕೊಟ್ಟಂತಹ ತಂದೆ, ತಾಯಿಯರನ್ನೇ ಕೊಲ್ಲುವಷ್ಟರ ಮಟ್ಟಿಗೆ ಕೆಲವರ ಮನೋಭಾವ ಬೆಳೆದುಬಿಟ್ಟಿದೆ. ಇನ್ನು ದಾಯಾದಿ ಕಲಹವಂತೂ ಮತ್ತಷ್ಟು ಎಲ್ಲೆ ಮೀರಿ ವ್ಯಾಪಕವಾಗಿ ಮುಂದುವರೆದಿದೆ. ಇದರ ಜೊತೆಗೆ ನಮಗೆ ಆತ್ಮೀಯರು ಎನಿಸಿಕೊಂಡಿರುವ ಸ್ನೇಹಿತರನ್ನೂ ಈ ವ್ಯಾಮೋಹದಿಂದಾಗಿ ಕಳೆದುಕೊಳ್ಳುವಂತಾಗಿದೆ. ಬಂಧು–ಬಾಂಧವರನ್ನೇ ಈ ಹಣದ ವ್ಯಾಮೋಹ ದೂರ ಮಾಡುತ್ತಿದೆ.

ಇತ್ತೀಚೆಗೆ ವೃದ್ಧಾಶ್ರಮಗಳ ಬಗ್ಗೆ ಒಂದು ಅವಲೋಕನ ಮಾಡಿದಾಗ, ಅವು ದಿನೇದಿನೆ ಹೆಚ್ಚಾಗುತ್ತಿರುವುದು ಸರಿಯೋ, ತಪ್ಪೋ ಎಂಬ ವಿಮರ್ಶೆ ಮಾಡಲಾಯಿತು. ಮನೆಯ ಹಿರಿಯರಿಗೆ ವಯಸ್ಸಾಯಿತು ಎಂಬ ಕಾರಣಕ್ಕೆ ಹಾಗೂ ಅವರಿಂದ ಮುಂದೆ ನಮಗೆ ಯಾವ ಪ್ರಯೋಜನವೂ ಇಲ್ಲ ಎಂದಾದಾಗ, ಅವರನ್ನು ಮನೆಯಿಂದ ಹೊರಹಾಕುವ ಮನೋ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿದೆ. ಇದು ನಮ್ಮ ಭಾರತೀಯ ಸಂಸ್ಕೃತಿಯಲ್ಲ. ಹಾಗೆ ನೋಡಿದರೆ ಮೊದಲಿನಿಂದಲೂ ಮನೆಯ ಹಿರಿಯರನ್ನು ಗೌರವದಿಂದ ನೋಡಿಕೊಳ್ಳಬೇಕೆಂಬುದು ನಮ್ಮ ಸಂಸ್ಕಾರ–ಸಂಸ್ಕೃತಿ ಪದ್ಧತಿಯಾಗಿದೆ. ಆದರೆ ಇತ್ತೀಚೆಗೆ ಈ ಬೇಕುಗಳ ವ್ಯಾಮೋಹದಿಂದ ನಮಗೆ ಅನವಶ್ಯ ಎನಿಸಿದ್ದನ್ನು(?) ಹಾಗೂ ಯಾವುದರಿಂದ ಪ್ರಯೋಜನವಿಲ್ಲವೋ ಅದನ್ನು ಪೋಷಿಸುವುದರಿಂದ, ಸಂರಕ್ಷಿಸುವುದರಿಂದ ಹಣ ಹಾಳು ಎಂಬ ಮನೋಭಾವವು ಹಿರಿಯರನ್ನು ದೂರ ಮಾಡುತ್ತಿದೆ. ಎಷ್ಟೋ ಪ್ರಸಂಗಗಳಲ್ಲಿ ಹಿರಿಯರು, ನಮಗೆ ವಯಸ್ಸಾಗಿದೆ, ಇನ್ನು ಮುಂದೆ ನಮ್ಮ ಆಸ್ತಿಪಾಸ್ತಿಗಳನ್ನು ಮಕ್ಕಳು ನೋಡಿಕೊಳ್ಳಲಿ ಎಂದು ಎಲ್ಲವನ್ನೂ ಅವರ ಹೆಸರಿಗೆ ವರ್ಗಾಯಿಸಿ, ಇನ್ನು ನಾವು ಹಾಯಾಗಿರಬಹುದು ಎಂದು ಭಾವಿಸಿದವರಿಗೆ ಕೆಲವೇ ಸಮಯದಲ್ಲಿ ತಮ್ಮ ನಿರ್ಧಾರ ತಪ್ಪಾಯಿತು, ಎಲ್ಲವನ್ನೂ ಕೊಟ್ಟುಬಿಡಬಾರದಿತ್ತು ಎನಿಸುವಂತಹ ಉತ್ತಮ ಮನೋಭಾವ ಮೂಡಲಾರಂಭಿಸಿದೆ.

ಸಾಂದರ್ಭಿಕವಾಗಿ, ಬದುಕಿನ ಬುದ್ಧಿವಂತಿಕೆ ಮೆರೆಯುವಂತಹ ಒಂದು ಸನ್ನಿವೇಶ; ವಯಸ್ಸಾದ ತಾಯಿಯನ್ನು ಮಗ ಹಾಗೂ ಸೊಸೆ ಬೇರೆ ಮನೆಗೆ ಸಾಗಹಾಕಲು ಬಯಸುತ್ತಾರೆ. ಕಾರಣ ಅವರಿಂದ ನಮಗೆ ಯಾವುದೇ ಪ್ರಯೋಜನವಾಗುತ್ತಿಲ್ಲ ಹಾಗೂ ಅವರ ಔಷಧಿ, ಇತರೆ ಖರ್ಚುಗಳಿಗೆ ಹಣ ಹೊಂದಿಸುವುದು ಕಷ್ಟವಾಗುತ್ತದೆ ಎಂಬುದೇ ಆಗಿದೆ. ಅದರಂತೆ ತಾಯಿಯನ್ನು ಬೇರೆ ಮನೆಗೆ ಕಳುಹಿಸುವ ಬಗ್ಗೆ ವಾದ ಮಾಡುತ್ತಾರೆ. ಆ ತಾಯಿಯಾದರೋ ಕೂಡಲೇ ಮೊಬೈಲ್ ತೆಗೆದುಕೊಂಡು ಯಾರಿಗೋ ಕರೆ ಮಾಡಿ ಒಂದು ಪುಟ್ಟ ಮನೆ ಬಾಡಿಗೆಗೆ ಬೇಕು ಎಂದು ಕೇಳುತ್ತಾರೆ. ಸಿಕ್ಕಂತಹ ಆ ಪುಟ್ಟ ಮನೆಯಲ್ಲಿ ಶೌಚಾಲಯವಿಲ್ಲ. ಇರುವುದು ಸಾಮೂಹಿಕ ಶೌಚ. ಮಾತಿನ ನಡುವೆ ನಿಮಗೆ ಆ ಮನೆ ಸರಿಯಾಗಬಹುದೇ ಎಂದು ಮಗ ಹಾಗೂ ಸೊಸೆಯನ್ನು ಕೇಳುತ್ತಾಳೆ. ಅವರಿಬ್ಬರಿಗೂ ಆಶ್ಚರ್ಯ, ಬೇರೆ ಮನೆ ನೋಡಿಕೊಳ್ಳಬೇಕಾಗಿರುವುದು ತಾಯಿ. ಆದರೆ ಅದೇಕೆ ನಮ್ಮನ್ನು ಕೇಳುತ್ತಿದ್ದಾಳೆ ... ಮತ್ತೆ ತಾಯಿ ಹೇಳುತ್ತಾಳೆ, ನಿಮಗಾಗಿ ಆ ಮನೆಯ ಬಗ್ಗೆ ಮಾತನಾಡಿದ್ದೇನೆ. ನೀವು ಅಲ್ಲಿಗೆ ಹೋಗಿ ಆರಾಮವಾಗಿರಬಹುದು!. ಆಗ ಮಗ ಹಾಗೂ ಸೊಸೆ ನಾವೇಕೆ ಅಲ್ಲಿಗೆ ಹೋಗಬೇಕು, ಅಲ್ಲಿಗೆ ನೀವು ಹೋಗಿ ಎಂದಾಗ ಆ ತಾಯಿ, ನಾನೇಕೆ ಹೋಗಬೇಕು ಇದು ನನ್ನ ಮನೆ, ಈ ಮನೆ ನನ್ನ ಹೆಸರಿನಲ್ಲಿದೆ. ನನ್ನ ಅಗತ್ಯ ನಿಮಗಿಲ್ಲದಿರುವುದರಿಂದ ನೀವೇ ಬೇರೆ ಹೋಗಿ ಹಾಯಾಗಿರಿ. ನನ್ನ ಈ ಮನೆಯಲ್ಲಿಯೇ ನಾನು ಇರುತ್ತೇನೆ ಎನ್ನುತ್ತಾಳೆ. ಇದನ್ನು ಕೇಳಿದ ಮಗ, ಸೊಸೆಗೆ ದಿಗ್ಭ್ರಮೆಯಾಗುತ್ತದೆ. ಕೂಡಲೇ ತಮ್ಮ ಮಾತಿನ ಧಾಟಿಯನ್ನೇ ಬದಲಿಸಿ, ಈವರೆವಿಗೆ ನಾವು ಹೇಳಿದ್ದೆಲ್ಲಾ ತಮಾಷೆಗಾಗಿ, ನಾವು ನಿಮ್ಮೊಡನೆಯೇ ಇರುತ್ತೇವೆ ಎನ್ನುತ್ತಾರೆ. ಇದು ಸಣ್ಣ ಪ್ರಸಂಗ ಎನಿಸಿದರೂ ಒಂದು ಸಂದೇಶವನ್ನಂತೂ ನೀಡುತ್ತದೆ. ತಂದೆ ತಾಯಿ ಮಾಡಿಟ್ಟ ಆಸ್ತಿ, ಹಣ ಎಲ್ಲವೂ ಬೇಕು, ಆದರೆ ಅವರ ಪೋಷಣೆಯ ಜವಾಬ್ದಾರಿ ಮಾತ್ರ ಬೇಡ ಎಂಬುದು. ಇಲ್ಲಿ ತಾಯಿ ಇತರರಂತೆ ಆಸ್ತಿಯನ್ನು ಮಗನ ಹೆಸರಿಗೆ ಬರೆಯದೇ ಇರುವುದರಿಂದ ಮಗ–ಸೊಸೆ ತಲೆ ಬಾಗಬೇಕಾಗುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು.



> ಹಣ, ಆಸ್ತಿ ಆಸೆಗಾಗಿ ಜನ್ಮ ಕೊಟ್ಟಂತಹ ತಂದೆ, ತಾಯಿಯರನ್ನೇ ಕೊಲ್ಲುವಷ್ಟರ ಮಟ್ಟಿಗೆ ಕೆಲವರ ಮನೋಭಾವ ಬೆಳೆದುಬಿಟ್ಟಿದೆ. ಇನ್ನು ದಾಯಾದಿ ಕಲಹವಂತೂ ಮತ್ತಷ್ಟು ಎಲ್ಲೆ ಮೀರಿ ವ್ಯಾಪಕವಾಗಿ ಮುಂದುವರೆದಿದೆ. ಇದರ ಜೊತೆಗೆ ನಮಗೆ ಆತ್ಮೀಯರು ಎನಿಸಿಕೊಂಡಿರುವ ಸ್ನೇಹಿತರನ್ನೂ ಈ ವ್ಯಾಮೋಹದಿಂದಾಗಿ ಕಳೆದುಕೊಳ್ಳುವಂತಾಗಿದೆ. ಬಂಧು-ಬಾಂಧವರನ್ನೇ ಈ ಹಣದ ವ್ಯಾಮೋಹ ದೂರ ಮಾಡುತ್ತಿದೆ.

ಹಣದ ದೃಷ್ಟಿಯಲ್ಲಿಯೇ ಎಲ್ಲವನ್ನೂ ನೋಡುವುದು ಸೂಕ್ತವಾಗಿರುವುದಿಲ್ಲ. ಒಮ್ಮೆ ಕಳೆದುಕೊಂಡಿದ್ದು ಮತ್ತೆ ಸಿಗುವುದಿಲ್ಲ ಎಂಬುದು ನಮಗೆ ತಿಳಿದಿರಬೇಕು. ವೃದ್ಧಾಶ್ರಮದ ಬಗ್ಗೆ ಮಾತನಾಡುವಾಗ ಅದು ವರವೋ, ಶಾಪವೋ ಎಂಬ ಜಿಜ್ಞಾಸೆ ಮೂಡುತ್ತದೆ. ಮಕ್ಕಳು ಹಿರಿಯರನ್ನು ನೋಡಿಕೊಳ್ಳದಿರುವಾಗ ವೃದ್ಧಾಶ್ರಮವೇ ವಾಸಿ ಎಂಬುದು ಒಂದು ವಾದವಾದರೆ, ಅದಕ್ಕೆ ಇಂಬು ನೀಡುವಂತೆ ಮನೆಯಲ್ಲಿ ಮಗ, ಸೊಸೆ ಇತರರು ಪ್ರತಿದಿನ ನಮ್ಮನ್ನು ಮೂದಲಿಸಿ ಊಟ ಹಾಕುವಾಗ ನಮಗೆ ಆಹಾರ ಗಂಟಲಲ್ಲಿಯೇ ಸಿಕ್ಕಿಕೊಳ್ಳುತ್ತದೆ. ಇದರ ಬದಲು ವೃದ್ಧಾಶ್ರಮದಲ್ಲಿ ಕನಿಷ್ಠ ಊಟ–ನಿದ್ರೆ ಮಾಡಿ ನೆಮ್ಮದಿಯಾಗಿರಬಹುದಲ್ಲವೇ. ಹಾಗಾಗಿ ಅದು ವರ ಎಂಬುದು ಒಂದು ವಾದ. ಆದರೆ ಹಿರಿಯ ಜೀವಗಳು ನಮ್ಮ ಬಾಲ್ಯ, ಯೌವನಾವಸ್ಥೆಯಲ್ಲಿ ನಮಗಾಗಿ ಹೇಗೆಲ್ಲಾ ಪರಿಶ್ರಮಪಟ್ಟಿರುತ್ತಾರೆ ಎಂಬುದನ್ನು ನೆನಪಿಸಿಕೊಳ್ಳದೇ ಅವರನ್ನು ದೂರ ಮಾಡುವುದು ಸೂಕ್ತವಾದುದಲ್ಲ. ಮತ್ತೊಂದು ಘಟನೆಯಲ್ಲಿ ತಾತನ ಬಗ್ಗೆ ಒಲವುಳ್ಳ ಮೊಮ್ಮಗ, ತಂದೆ ತಾಯಿ, ಯಾವುದೋ ಉಪಯೋಗಕ್ಕೆ ಬಾರದ ಹಳೆಯ ಕಾಲದ ತಟ್ಟೆಯಲ್ಲಿ ತಾತನಿಗೆ ಊಟ ಬಡಿಸುವುದನ್ನು ಕಂಡು, ತಾನೂ ಹುಡುಕಿ ಅಂತಹುದೇ ಎರಡು ಹಳೇ ತಟ್ಟೆಗಳ ಸಂಪಾದಿಸುತ್ತಾನೆ. ಅದು ಏಕೆಂದು ತಂದೆತಾಯಿ ಅವರ ಪ್ರಶ್ನಿಸಿದಾಗ ನೀವು ತಾತನಿಗೆ ಊಟ ಹಾಕುತ್ತಿರುವುದು ಇಂತಹ ತಟ್ಟೆಯಲ್ಲೇ ಅಲ್ಲವೆ. ನಾಳೆ ನಿಮಗೂ ವಯಸ್ಸಾದಾಗ ನಾನೂ ಇಂತಹುದೇ ತಟ್ಟೆಯಲ್ಲಿ ಊಟ ಹಾಕಬೇಕಲ್ಲವೇ? ಅದಕ್ಕಾಗಿ ಈಗಲೇ ತಟ್ಟೆ ಹೊಂದಿಸುತ್ತಿದ್ದೇನೆ ಎಂದಾಗ ಅವನ ತಂದೆತಾಯಿಗೆ ಜ್ಞಾನೋದಯವಾಗಿ ಮುಂದೆ ತಮ್ಮ ವರ್ತನೆ ಬದಲಿಸಿಕೊಳ್ಳುತ್ತಾರೆ.

ಹೀಗೆ ನಮ್ಮ ಮನೋಭಾವ ಏತಕ್ಕೆ ಬದಲಾಗುತ್ತಿದೆ ಎಂದರೆ ನಾವು ಹಣಕ್ಕೆ ಹೆಚ್ಚಿನ ಮೌಲ್ಯ, ಮಹತ್ವ ನೀಡುತ್ತಿರುವುದರಿಂದ ಎಂಬುದು ಇದರಿಂದ ಗೊತ್ತಾಗುತ್ತದೆ. ಹಾಗೆ ನೋಡಿದರೆ ಇಂತಹ ಮನೋಭಾವದವರಿಗೆ ದುಡ್ಡಿನ ಕೊರತೆ ಇರುವುದಿಲ್ಲ. ಮತ್ತೆ ನಾಲ್ಕಾರು ಜನರಿಗೆ ಆಹಾರ ನೀಡುವ ಸಾಮರ್ಥ್ಯವೂ ಅವರಿಗೆ ಇರುತ್ತದೆ. ಆದರೆ ದುಡ್ಡಿನ ಲೆಕ್ಕಾಚಾರ ಅವರನ್ನು ಬಡವರನ್ನಾಗಿ ಮಾಡಿಬಿಟ್ಟಿರುತ್ತದೆ. ದುರಾಸೆ ಇದಕ್ಕೆ ಕಾರಣ. ತಮ್ಮಲ್ಲಿ ಸಾಕಷ್ಟು ಇದ್ದರೂ, ಇನ್ನಷ್ಟು, ಮತ್ತಷ್ಟು ಬೇಕು, ಇರುವುದೆಲ್ಲಾ ನಮಗೆ. ಅದು ಇತರರಿಗೆ ಅಲ್ಲ ಎಂಬ ಮನೋಭಾವ ಹೀಗೆ ಮಾಡಿಸುತ್ತದೆ. ಇದು ನಮ್ಮತನವನ್ನೂ ಅಳಿಸಿಹಾಕಿಬಿಡುತ್ತದೆ.

ಇದಕ್ಕಾಗಿಯೇ ತಿಳಿದವರು ಹೇಳುವ ಮಾತು; 'ಬೇಕು... ಬೇಕು... ಬೇಕು... ಎಂಬುದು ಸಾಕು ಹಾಗೂ ಸಾಕು... ಸಾಕು... ಸಾಕು... ಎನ್ನುವುದು ಬೇಕು' ಎಂಬಂತಾಗಬೇಕು ಎಂದು. ಇದು ಒಳ್ಳೆಯ ಸಂದೇಶ. ಬೇಕು, ಬೇಕು ಎನ್ನುವಾಗ ನಮ್ಮ ಮನಸಲ್ಲಿ ಸಾಕು ಸಾಕು ಎಂಬ ಸುಳಿವೇ ಬರುವುದಿಲ್ಲ. ಬದಲಾಗಿ ಸಾಕು, ಸಾಕು ಎಂದಾಗ ಮತ್ತೆ ಬೇಕೆನಿಸದೆ ಒಂದು ರೀತಿಯ ಸಂತೃಪ್ತಿ ಮೂಡುತ್ತದೆ ಎಂಬುದು.


ನಾವು ಹೆಚ್ಚು ಹಣವಿರುವ, ಹೆಚ್ಚಾಗಿ ಆಸ್ತಿ ಮಾಡಿದವರನ್ನು ಗಮನಿಸಿದಾಗ ಅವರಲ್ಲಿ ಸಂತೃಪ್ತಿಯೇ ಕಂಡುಬರುವುದಿಲ್ಲ. ಅವರು ಬೇಕು ಬೇಕೆಂಬ ಹಪಾಹಪಿಯಲ್ಲಿ, ಇರುವುದನ್ನು ಅನುಭವಿಸಲಾಗದಂತಹ ಪರಿಸ್ಥಿತಿಯಲ್ಲಿರುತ್ತಾರೆ. ಇದನ್ನೇ ಮತ್ತೊಂದು ರೀತಿಯಲ್ಲಿ 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ' ಎಂದು ದಾಸರ ಪದದಲ್ಲಿ ನಾವು ಕೇಳುತ್ತೇವೆ. ಎಷ್ಟೇ ಸಂಪಾದಿಸಿದರೂ ತಿನ್ನುವುದು ಹಿಡಿಯಷ್ಟು, ಕೊನೆಗೆ ಸತ್ತಾಗ ಮಲಗುವುದೂ ಅಂಗೈಯಗಲದ ಜಾಗದಲ್ಲಿ ಎಂದು ಹೇಳುವುದೂ ಇದಕ್ಕಾಗಿಯೇ. ನಮಗೆ ಸಾರ್ಥಕತೆ ದೊರಕುವುದು ಕೊಟ್ಟಾಗ ಮಾತ್ರ. ಆ ಮನೋಭಾವ ಬರಬೇಕೆಂದರೆ ಬೇಕು, ಬೇಕು ಎಂಬುದಕ್ಕಿಂತ ಸಾಕು, ಸಾಕು ಎನ್ನುವ ಮನೋಭಾವ ಬೆಳೆದಾಗ. ಕೊಡುವುದು ಎಂದರೆ ಕಳೆದುಕೊಂಡಂತೆ ಎಂದಲ್ಲ, ಬದಲಾಗಿ ಅದೊಂದು ರೀತಿಯ ಬಂಡವಾಳ ಹೂಡಿದಂತೆ. ಮುಂದೆ ನಮಗೆ ಯಾವುದೇ ಸಮಸ್ಯೆ ಬಂದರೂ ಈ ರೀತಿ ನಮ್ಮಿಂದ ಸಹಾಯ ಪಡೆದವರು ಖಂಡಿತಾ ಯಾವುದಾದರೂ ರೀತಿಯಲ್ಲಿ ನಮ್ಮ ಸಹಾಯಕ್ಕಾಗಿ ಬರುತ್ತಾರೆ. ಆದ್ದರಿಂದಲೇ ಹೇಳುವುದು, ಹಣ ಸಂಪಾದನೆಗಿಂತ ಜನರನ್ನು ಸಂಪಾದನೆ ಮಾಡಬೇಕು ಎಂದು. ಜನರ ಸಂಪಾದನೆ ಎಂದರೆ ಅವರ ಕಷ್ಟಸುಖಗಳಲ್ಲಿ ಭಾಗಿಯಾದರೆ, ಅವರು ನಮ್ಮ ಸಂಕಷ್ಟ ಸಂದರ್ಭದಲ್ಲಿ ಆಗುತ್ತಾರೆ ಎಂದರ್ಥ.

'ಹಸಿರು ಕ್ರಾಂತಿ' ಹರಿಕಾರರು ಡಾ.ಬಾಬು ಜಗಜೀವನ್ ರಾಮ್



ಕೆ.ವಿ.ವಾಸು
ವಕೀಲರು,
ನೋಟರಿ
9341731661

ಇಂದು, ಭಾರತದ ಉಪ ಪ್ರಧಾನಮಂತ್ರಿಯಾಗಿದ್ದ ಹಿರಿಯ ರಾಜಕೀಯ ಮುತ್ಸದ್ದಿ; ಕಾರ್ಮಿಕ ನಾಯಕ; ದಲಿತ ಮುಖಂಡ; ಹಸಿರು ಕ್ರಾಂತಿಯ ಹರಿಕಾರ; ಸ್ವಾತಂತ್ರ್ಯ ಹೋರಾಟಗಾರ ಡಾ.ಬಾಬು ಜಗಜೀವನ್ ರಾಂರವರ ಜನ್ಮದಿನ. ಅವರು ದೇಶಕ್ಕೆ ಸಲ್ಲಿಸಿರುವ ಸೇವೆಯನ್ನು ದೇಶದ ಜನತೆ ಸ್ಮರಿಸುವುದು ಪ್ರಸ್ತುತ. ತಮ್ಮ ಆರು ದಶಕಗಳ ಸಾರ್ವಜನಿಕ ಬದುಕಿನಲ್ಲಿ ಹಲವಾರು ಮಹತ್ತರವಾದ ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಜಗ ಜೀವನ್ ರಾಮ್, ಜನರ ಪ್ರೀತಿಯ 'ಬಾಬೂಜಿ'.



ಜಗಜೀವನ್ ರಾಂ ಬಿಹಾರ ಜಿಲ್ಲೆಯ ಚಾಂದ್ವ ಎಂಬ ಗ್ರಾಮದಲ್ಲಿ ಸೋಬಿ ರಾಮ್ ಮತ್ತು ವಾಸಂತಿ ದೇವಿಯವರ ಸುಪುತ್ರರಾಗಿ 05.04.1908 ರಂದು ಜನಿಸಿದರು. ಮದನ ಮೋಹನ ಮಾಳವೀಯ ಅವರಿಂದ ಪ್ರಭಾವಿತರಾಗಿದ್ದರು. ಕಲ್ಕತ್ತಾ ವಿಶ್ವವಿದ್ಯಾನಿಲಯದಿಂದ 1931 ರಲ್ಲಿ ಬಿ.ಎಸ್.ಸಿ ಪದವಿ ಪಡೆದರು. ತಮ್ಮ ಶಾಲಾ ಮತ್ತು ಕಾಲೇಜು ದಿನಗಳಲ್ಲಿ ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಜಗಜೀವನ್ ರಾಂ, ಜಾತಿಯ ಹೆಸರಿನಲ್ಲಿ ನಡೆಯುತ್ತಿದ್ದ ಕಂದಾಚಾರಗಳನ್ನು ತೀವ್ರವಾಗಿ ಖಂಡಿಸುತ್ತಿದ್ದರು. ಒಮ್ಮೆ ಹೀಗಾಯ್ತು: ಜಗಜೀವನ್ ರಾಂ ಓದುತ್ತಿದ್ದ ಶಾಲೆಯಲ್ಲಿ ಮುಸ್ಲಿಮರು, ಹಿಂದುಗಳಿಗೆ ನೀರು ಕುಡಿಯಲು ಪ್ರತ್ಯೇಕ ಮಡಿಕೆಗಳಲ್ಲಿ ನೀರಿಡಲಾಗುತ್ತಿತ್ತು. ಒಮ್ಮೆ ಬಾಲಕ ಜಗಜೀವನ್ ರಾಂ ಹಿಂದುಗಳಿಗಾಗಿ ಇಟ್ಟಿದ್ದ ಮಡಿಕೆಯ ನೀರನ್ನು ಕುಡಿದುಬಿಟ್ಟರಂತೆ ಇದರಿಂದ ಕೋಪಗೊಂಡ ಶಾಲೆಯ ಆಡಳಿತ ಮಂಡಳಿ ಅಂದಿನಿಂದ ಅಸ್ಪೃಶ್ಯರಿಗಾಗಿ ಮೂರನೇ ಮಡಿಕೆಯನ್ನು ಇಟ್ಟರಂತೆ. ಇದರಿಂದ ಕೆರಳಿ ಕೆಂಡವಾದ ಬಾಲಕ ಆ ಮೂರನೇ ಮಡಿಕೆಯನ್ನು ಒಡೆದು ಹಾಕಿದನಂತೆ.

ಶಾಲೆಯ ವ್ಯವಸ್ಥಾಪಕರು ಪ್ರತಿದಿನ ಒಂದೊಂದು ಹೊಸ ಮಡಿಕೆ ತಂದಿಟ್ಟಾಗಲೂ ಜಗಜೀವನ್ ರಾಂ ಆ ಮಡಿಕೆಯನ್ನು ಒಡೆದು ಹಾಕುತ್ತಿದ್ದರಂತೆ. ಕೊನೆಗೆ ಶಾಲೆಯ ಮುಖ್ಯಸ್ಥರು 3ನೇ ಮಡಿಕೆ ಇಡುವುದನ್ನು ನಿಲ್ಲಿಸಿದರಂತೆ. ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ತಾಂಡವವಾಡುತ್ತಿದ್ದ ಜಾತೀಯತೆಯೆಂಬ ಪಿಡುಗಿನ ವಿರುದ್ಧ ನಿರಂತರವಾಗಿ ಹೋರಾಡಿದ ಜಗಜೀವನ್ ರಾಂ 'ಸಾಮಾಜಿಕ ಪರಿವರ್ತನೆಯ ಹರಿಕಾರ' ಆದರು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ನಂತರ ದಲಿತರ ಅತಿ ದೊಡ್ಡ ನಾಯಕರೆನಿಸಿದ ಶ್ರೀಯುತರು ಸ್ವಾತಂತ್ರ್ಯ ಚಳವಳಿಯಲ್ಲಿ ಕೂಡ ಸಕ್ರಿಯವಾಗಿ ಪಾಲ್ಗೊಂಡರು.

1935ರಲ್ಲಿ ಬಿಹಾರ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದ ಜಗಜೀವನ್ ರಾಂ ಅಲ್ಲಿಂದ ಹಿಂದಿರುಗಿ ನೋಡಲೇ ಇಲ್ಲ. ದೇಶದಲ್ಲಿ ಪ್ರಪ್ರಥಮವಾಗಿ 1946ರ ಸೆಪ್ಟೆಂಬರ್ 2 ರಂದು ಪ್ರಧಾನ ಮಂತ್ರಿ ಜವಹರಲಾಲ್ ನೆಹರು ನೇತೃತ್ವದಲ್ಲಿ ರಚನೆಯಾದ ತಾತ್ಕಾಲಿಕ ಸರ್ಕಾರದಲ್ಲಿ ಅತ್ಯಂತ ಕಿರಿಯ ವಯಸ್ಸಿನ ಸಚಿವರಾಗಿ ನೇಮಕಗೊಂಡ ಜಗಜೀವನ್ ರಾಂ, ಅದೇ ಅವಧಿಯಲ್ಲಿ ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿ ಕೂಡ ಕಾರ್ಯನಿರ್ವಹಿಸಿದರು. ಮುಂದೆ ಕೇಂದ್ರ ಸಚಿವ ಸಂಪುಟದಲ್ಲಿ ಪ್ರಮುಖ ಖಾತೆಗಳನ್ನು ನಿರ್ವಹಿಸಿದ ಅವರು ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧ ನಡೆದಾಗ (1971) ಅತ್ಯಂತ ಪ್ರಮುಖ ರಕ್ಷಣಾ ಖಾತೆಯ ಸಚಿವರಾಗಿದ್ದರು. 1974ರಲ್ಲಿ ಕೃಷಿ ಮಂತ್ರಿಗಳಾಗಿದ್ದ ಜಗಜೀವನ್ ರಾಂ, ದೇಶದಲ್ಲಿ **'ಹಸಿರು ಕ್ರಾಂತಿ'** ಯ ರೂವಾರಿ ಎನಿಸಿದರು. ರೈಲ್ವೆ; ಸಂಪರ್ಕ; ಕಾರ್ಮಿಕ ಮುಂತಾದ ಮಹತ್ವದ ಖಾತೆಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಜಗಜೀವನ್ ರಾಂ, ಕೇಂದ್ರ ಸರ್ಕಾರದಲ್ಲಿ ಅತ್ಯಂತ ಹೆಚ್ಚಿನ ಅವಧಿಗೆ ಸೇವೆ ಸಲ್ಲಿಸಿ ದಾಖಲೆ ಬರೆದಿದ್ದಾರೆ. ದಿವಂಗತ ಪ್ರಧಾನಿ ಜವಹರಲಾಲ್ ನೆಹರು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಅತ್ಯಂತ ನಿಷ್ಠರಾಗಿದ್ದ ಬಾಬೂಜಿ 1977 ರಲ್ಲಿ ಕಾಂಗ್ರೆಸ್ ಪಕ್ಷ ತ್ಯಜಿಸಿ; 'ಕಾಂಗ್ರೆಸ್ ಫಾರ್ ಡೆಮೊಕ್ರಾಸಿ' ಪಕ್ಷ ಸ್ಥಾಪಿಸಿದರಾದರೂ ಮುಂದೆ ಆ ಪಕ್ಷವನ್ನು ಜನತಾ ಪಕ್ಷದಲ್ಲಿ ವಿಲೀನಗೊಳಿಸಿದರು.

ಅಂದಿನ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿಯವರ ಸಂಪುಟದಲ್ಲಿ ಉಪ ಪ್ರಧಾನಿಯಾಗಿ ನೇಮಕಗೊಂಡರು. 24.3.1977 ರಿಂದ 28.7.1979 ರವರೆಗೆ ದೇಶದ ಉಪ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ ಬಾಬೂಜಿ; ಜನತಾ ಪಕ್ಷದ ಒಳ ಜಗಳದಿಂದ ಬೇಸತ್ತು ಅಲ್ಲಿಂದ ನಿರ್ಗಮಿಸಿ ಕಾಂಗ್ರೆಸ್ (ಜೆ) ಪಕ್ಷವನ್ನು ಸ್ಥಾಪಿಸಿದರಾದರೂ ಅದು ಹೆಚ್ಚು ಕಾಲ ಉಳಿಯಲಿಲ್ಲ.


1985ರ ಲೋಕಸಭಾ ಚುನಾವಣೆಯಲ್ಲಿ ಬಿಹಾರದ ಸಸರಾಂ ಕ್ಷೇತ್ರದಿಂದ ಲೋಕಸಭೆಗೆ ಕಡೆಯದಾಗಿ ಆಯ್ಕೆಯಾದ ಬಾಬೂಜಿ ಅಂದಿನ ಲೋಕಸಭೆಯ ಅತ್ಯಂತ ಹಿರಿಯ ಸದಸ್ಯರಾಗಿದ್ದರಿಂದ 'ಹಂಗಾಮಿ' ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಿ; ರಾಜೀವ್ ಗಾಂಧಿ ಸೇರಿದಂತೆ ಎಲ್ಲಾ ಲೋಕಸಭಾ ಸದಸ್ಯರಿಗೂ ಪ್ರಮಾಣ ವಚನ ಬೋಧಿಸಿದರು. ಅದರ ಮುಂದಿನ ವರ್ಷವೇ ಅಂದರೆ 06.07.1986 ರಂದು ಅವರು ಇಹಲೋಕ ತ್ಯಜಿಸಿದರು.

ಅಲ್ಲಿಗೆ ಜಗಜೀವನ್ ರಾಂ ಎಂಬ ದಲಿತ ಜ್ಯೋತಿ ನಂದಿ ಹೋಯಿತು. ಅವರ ಪುತ್ರಿ ಶ್ರೀಮತಿ ಮೀರಾ ಕುಮಾರ್ ಐದು ಬಾರಿ ಅವರ ತಂದೆಯ ಸ್ವಕ್ಷೇತ್ರ ಬಿಹಾರದ ಸಸಾರಾಂನಿಂದ ಆಯ್ಕೆಯಾಗಿರುವುದಲ್ಲದೇ 2009ರಲ್ಲಿ ಲೋಕಸಭೆಯ ಪ್ರಪ್ರಥಮ ಮಹಿಳಾ ಸ್ಪೀಕರ್ ಆಗಿ ಕಾರ್ಯನಿರ್ವಹಿಸಿ ದಾಖಲೆ ಬರೆದಿದ್ದಾರೆ.

ಜಗಜೀವನ್ ರಾಂರವರಿಗೆ ಪ್ರಧಾನ ಮಂತ್ರಿಗಳಾಗುವ ಎಲ್ಲಾ ಅರ್ಹತೆಗಳಿದ್ದರೂ ಅವರಿಗೆ ಅದು ದಕ್ಕಲಿಲ್ಲ. ಇದು ಅವರನ್ನು ಆಗಾಗ ಕಾಡುತ್ತಿದ್ದವು. ಈ ದೇಶದಲ್ಲಿ ದಲಿತರೊಬ್ಬರಿಗೆ ಪ್ರಧಾನಿಯಾಗುವ ಅವಕಾಶ ಇದುವರೆಗೂ ದೊರಕದಿರುವುದು ದುರದೃಷ್ಟಕರ ಸಂಗತಿ.

ಅದೇನೇ ಇರಲಿ; ಓರ್ವ ದಲಿತ ಮುಖಂಡರಾಗಿ; ಕಾರ್ಮಿಕ ನಾಯಕರಾಗಿ; ಸ್ವಾತಂತ್ರ್ಯ ಹೋರಾಟಗಾರರಾಗಿ; ಕೇಂದ್ರ ಸಚಿವ ಹಾಗೂ ಉಪ ಪ್ರಧಾನಿಯಾಗಿ ಅವರ ಕೊಡುಗೆ ಗಮನಾರ್ಹ ಹಾಗೂ ಅನುಪಮ. ಅವರ ಜನ್ಮದಿನವಾದ ಇಂದು ಅವರಿಗೆ ಗೌರವಪೂರ್ವಕ ನಮನಗಳು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com




ಯದುವೀರರ ಅವಿರೋಧವಾಗಿ ಆಯ್ಕೆ ಮಾಡಿ; ಎಂಎಲ್ಸಿ ವಿಶ್ವನಾಥರ ಹೇಳಿಕೆಗೆ ಕಾಂಗ್ರೆಸ್ಸಿನಲ್ಲಿ ಇರಿಸು-ಮುರಿಸು

ಮೊದಲು ವಿಶ್ವನಾಥ್ ಯಾವ ಪಕ್ಷದಲ್ಲಿದ್ದಾರೆಂದು ಸ್ಪಷ್ಟಪಡಿಸಲಿ: ಶಾಸಕ ತನ್ವೀರ್ ಸೇಠ್ ಆಗ್ರಹ



ಮೈಸೂರು,ಏ.4(ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ಹೇಳಿಕೆ ನೀಡಿರುವ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅವರು ತಾವು ಯಾವ ಪಕ್ಷದಲ್ಲಿದ್ದಾರೆ ಎಂದು ಮೊದಲು ಸ್ಪಷ್ಟಪಡಿಸಬೇಕು ಎಂದು ಶಾಸಕ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಆಗ್ರಹಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎ.ಹೆಚ್.ವಿಶ್ವನಾಥ್ ಅವರು ಇತ್ತೀಚೆಗೆ ನೀಡುತ್ತಿರುವ ಹೇಳಿಕೆಗಳನ್ನು ಗಮನಿಸಿದರೆ, ಅವರು ತಾವು ಆಡುವ ಮಾತಿನ ಮೇಲೆ ಹಿಡಿತ ಕಳೆದುಕೊಂಡಿರುವಂತೆ ಕಾಣಿಸು ತ್ತದೆ. ವಾರದ ಹಿಂದಷ್ಟೇ ಬಿಜೆಪಿ, ಬಿಜೆಪಿ ನಾಯಕರನ್ನು ಟೀಕಿಸಿದ್ದರು. ಇದೀಗ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಅವಿರೋಧವಾಗಿ ಆಯ್ಕೆ ಮಾಡಬೇಕು ಎಂದಿದ್ದಾರೆ. ಯಾರನ್ನೋ ಓಲೈಕೆ ಮಾಡಿಕೊಳ್ಳಲು ಇಂತಹ ಹೇಳಿಕೆ ನೀಡಿದ್ದಾರೋ ತಿಳಿಯುತ್ತಿಲ್ಲ. ಹಲವು ವರ್ಷಗಳಿಂದ ರಾಜಕಾರಣದಲ್ಲಿರುವ ವಿಶ್ವನಾಥ್ ಅವರು ಇದೀಗ ಯಾರ ಪರ ಇದ್ದೀರಿ ಎಂದು ಸ್ಪಷ್ಟಪಡಿಸಬೇಕು. ರಾಜವಂಶಸ್ಥರ ಬಗ್ಗೆ ನಮಗೆ ಗೌರವವಿದೆ. ಆದರೆ, ಇಂದು ಯದುವೀರ್ ಅವರು ಪ್ರತಿಸ್ಪರ್ಧಿ. ಮೌಲ್ಯಾಧಾರಿತ ರಾಜಕಾರಣ ಮಾಡಬೇಕಾಗಿರುವುದರಿಂದ, ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಆಶಯ ಎತ್ತಿ ಹಿಡಿಯ ಬೇಕಾಗಿರುವುದರಿಂದ ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರಿಗೆ ಬೆಂಬಲ ಕೋರುತ್ತೇವೆ ಎಂದರು.



ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಒಕ್ಕಲಿಗರಲ್ಲ ಎನ್ನುವ ಹೇಳಿಕೆ ಖಂಡನೀಯ. ಇದಕ್ಕೆ ಲಕ್ಷ್ಮಣ ಸ್ಪಷ್ಟನೆ ನೀಡಿದ್ದಾರೆ. ಆದರೂ, ನಮಗೆ ಅವರು ಯಾವ ಜಾತಿಯಲ್ಲಿ ಹುಟ್ಟಿದ್ದಾರೆ ಎನ್ನುವುದು ಮುಖ್ಯವಲ್ಲ. ಜನರಿಗಾಗಿ ಎಷ್ಟು ಕೆಲಸ ಮಾಡುತ್ತಾರೆ, ಹೇಗೆ ಸ್ಪಂದಿಸುತ್ತಾರೆ ಎನ್ನುವುದು ಮುಖ್ಯ. ಆ ಕಾರಣದಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಜನರಿಗೆ ಸುಲಭವಾಗಿ ಸಿಗುವ, ಕೆಲಸ ಕಾರ್ಯ ಮಾಡಿಕೊಡುವ ಸಾಮರ್ಥ್ಯವಿರುವ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದ್ದೇವೆ. ಕ್ಷೇತ್ರದಲ್ಲಿ ಪೂರಕವಾದ ವಾತಾವರಣವಿದೆ. ಜನರು ಕಾಂಗ್ರೆಸ್ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದಾರೆ ಎಂದರು.

ದೇಶದಾದ್ಯಂತ ಬಿಜೆಪಿ ವಿರುದ್ಧದ ಅಲೆ ಕಂಡು ಬರುತ್ತಿದೆ. ಇಂಡಿಯಾ ಒಕ್ಕೂಟಕ್ಕೆ ಉತ್ತಮ ಬೆಂಬಲ ದೊರಕುತ್ತಿದೆ. ಪ್ರಧಾನಿ ಅಭ್ಯರ್ಥಿ ಯಾರು ಎಂದು ಒಕ್ಕೂಟ ನಿರ್ಧರಿಸಿಲ್ಲ. ನಮ್ಮ ಗುರಿ ದೇಶದಲ್ಲಿ ಬಡವರು, ರೈತರು, ಶೋಷಿತ ಸಮುದಾಯಕ್ಕೆ ನ್ಯಾಯ ಒದಗಿಸುವ ಆಡಳಿತ ನೀಡಬೇಕೆಂಬುದೇ ಆಗಿದೆ. ಆ ನಂತರ ಹಿರಿಯ ನಾಯಕರು ಕುಳಿತು ಚರ್ಚಿಸಿ ಪ್ರಧಾನಿ ಅಭ್ಯರ್ಥಿ ಬಗ್ಗೆ ನಿರ್ಧರಿಸಲಿದ್ದಾರೆ ಎಂದು ಉತ್ತರಿಸಿದರು.

ಅವರು ಬಿಜೆಪಿ ಎಂಎಲ್ಸಿ; ಹಾಗಾಗಿ ಪಕ್ಷದ ಅಭ್ಯರ್ಥಿ ಪರ ಮಾತಾಡಿದ್ದಾರೆ: ಲಕ್ಷ್ಮಣ

ಮೈಸೂರು,ಏ.4(ಎಂಟಿವೈ)–ಬಿಜೆಪಿಯಿಂದಲೇ ವಿಧಾನ ಪರಿಷತ್ ಸದಸ್ಯರಾಗಿರುವ ಎ.ಹೆಚ್.ವಿಶ್ವನಾಥ್ ಸಹಜವಾಗಿಯೇ ಲೋಕಸಭಾ ಚುನಾವಣೆಯಲ್ಲಿ ಅವರ ಪಕ್ಷದ ಅಭ್ಯರ್ಥಿ ಪರ ಹೇಳಿಕೆ ನೀಡಿದ್ದಾರೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ತಿರುಗೇಟು ನೀಡಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನು ಅವಿರೋಧವಾಗಿ ಆಯ್ಕೆ ಮಾಡಬೇಕು ಎಂದಿದ್ದಾರೆ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಮಹತ್ವದ್ದಾಗಿದೆ ಎಂದು ಅವರೇ ಈ ಹಿಂದೆ ಹೇಳಿಕೆ ನೀಡಿದ್ದರು. ಈಗ ಎಲ್ಲಿ ಹೋಯಿತು ಆ ಮಾತು ಎಂದು ಪ್ರಶ್ನಿಸಿದ ಅವರು, ಬಿಜೆಪಿಯಿಂದ ಎಂಎಲ್‌ಸಿ ಆಗಿದ್ದಾರೆ. ಅವರ ಪಕ್ಷದ ಅಭ್ಯರ್ಥಿ ಪರ ನಿಲ್ಲುವುದು ಸಹಜ. ಅವರು ನಮ್ಮ ಪಕ್ಷದವರಲ್ಲ. ಹಾಗಾಗಿ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ. ನನ್ನ ಪರವಾಗಿ ಸಿಎಂ, ಡಿಸಿಎಂ ನಮ್ಮ ನಾಯಕರು, ಕಾರ್ಯಕರ್ತರು ಹಗಲಿರುಳು ಎನ್ನದೆ ಶ್ರಮಿಸುತ್ತಿದ್ದಾರೆ. ನಮ್ಮ ಸರ್ಕಾರದ ಯೋಜನೆಗಳು, ಜನಪರ ಆಡಳಿತ ನನ್ನ ಕೈಹಿಡಿಯಲಿವೆ ಎಂಬ ನಂಬಿಕೆ ಇದೆ ಎಂದರು.

ಈ ಹಿಂದೆ ವಿಶ್ವನಾಥ್ ಅವರ ಎರಡು ಚುನಾವಣೆಯನ್ನು ನಾನು ಮಾಡಿದ್ದೇನೆ. ಅವರಿಗಾಗಿ 85 ಲಕ್ಷ ರೂ. ಸಾಲ ಮಾಡಿ ಖರ್ಚು ಮಾಡಿದ್ದೇನೆ. ಟಿಕೆಟ್ ಘೋಷಿಸಿದ ಬಳಿಕ ವಿಶ್ವನಾಥ್ ಅವರ ಮನೆಗೆ ಹೋಗಿ ಆಶೀರ್ವಾದ ಪಡೆದಿದ್ದೇನೆ. ನೇರವಾಗಿ ಪ್ರಚಾರ ಮಾಡಲು ಸಾಧ್ಯವಿಲ್ಲ. ಪರೋಕ್ಷವಾಗಿ ಬೆಂಬಲ ನೀಡುತ್ತೇನೆ ಎಂದಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸಂಸದ ಪ್ರತಾಪ ಸಿಂಹ ನನ್ನ ಸ್ನೇಹಿತ, ಸೈದ್ಧಾಂತಿಕವಾಗಿ ನಮ್ಮ ನಡುವೆ ಭಿನ್ನಾಭಿಪ್ರಾಯ ಇರಬಹುದು. ನಾವು ಹೊರಗಡೆ ಬಂದರೆ ಜೊತೆಗೆ ಕುಳಿತು ಕಾಫಿ ಕುಡಿಯುತ್ತೇವೆ. ಫೋನಿನಲ್ಲಿ ಮಾತಾಡುತ್ತೇವೆ. ಬೇಕಾದರೆ ಈಗಲೇ ಫೋನ್ ಮಾಡಲಾ. ಪ್ರತಾಪ ಸಿಂಹ ಸುಮ್ಮನೆ ರಾಜಕೀಯವಾಗಿ ನನ್ನನ್ನ ಟೀಕೆ ಮಾಡ್ತಾರೆ ಅಷ್ಟೇ. ಅವರು, ನಾನು ಒಕ್ಕಲಿಗ ಅಲ್ಲಾ ಅನ್ನೋದಾದರೆ ಅದನ್ನ ಸಾಬೀತುಪಡಿಸಲಿ, ಜೊತೆಗೆ ನನ್ನ ಜೈಲಿಗೆ ಕಳುಹಿಸುತ್ತೇನೆ ಎಂದಿದ್ದಾರೆ ಆದಷ್ಟು ಬೇಗ ಕಳುಹಿಸಲಿ. ನನ್ನ ಬಗ್ಗೆ ಮಾತನಾಡುವ ಬದಲು ನಿಮಗೆ ಟಿಕೆಟ್ ಮಿಸ್ ಮಾಡಿದ್ದು ಯಾರು ಅಂತ ಹೇಳಿ ಎಂದು ಸವಾಲೆಸೆದರು.

'ಚುನಾವಣೆ ಪರ್ವ ದೇಶದ ಗರ್ವ ಏ.26, 2024ರಂದು ತಪ್ಪದೇ ಮತದಾನ ಮಾಡೋಣ'

ಕೆಎಂಎಫ್‌ನಿಂದ ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯ

ಮೈಸೂರು, ಏ.4(ಜಿಎ)–ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಮತದಾರರನ್ನು ಮತಗಟ್ಟೆಗೆ ಸೆಳೆಯುವ ಸಲುವಾಗಿ ನಿತ್ಯ ಜನ ಬಳಸುವ ನಂದಿನಿ ಹಾಲಿನ ಪ್ಯಾಕೆಟ್ ಮೇಲೆ ಏಪ್ರಿಲ್ 26 ರಂದು ಚುನಾವಣೆ ತಪ್ಪದೇ ಮತ ಚಲಾಯಿಸಿ ಎಂದು ಮುದ್ರಿಸಿ ಜಾಗೃತಿ ಮೂಡಿಸಲಾಗುತ್ತಿದೆ.



ಮತದಾನ ಹೆಚ್ಚಿಸಲು ಮತ್ತು ಮತದಾರರಲ್ಲಿ ಜಾಗೃತಿ ಮೂಡಿಸಲು ಮುಂದಾಗಿರುವ ಕೆಎಂಎಫ್ ಕಳೆದ 10 ದಿನಗಳಿಂದ ನಂದಿನಿ ಹಾಲು, ಮೊಸರು, ಮಜ್ಜಿಗೆ, ಲಸ್ಸಿ ಪ್ಯಾಕೇಟ್‌ಗಳ ಮೇಲೆ 'ಚುನಾವಣೆ ಪರ್ವ ದೇಶದ ಗರ್ವ ಏಪ್ರಿಲ್ 26 ರಂದು ತಪ್ಪದೇ ಮತದಾನ ಮಾಡೋಣ' ಎಂದು ಮುದ್ರಿಸಿ ಮಾರಾಟ ಮಾಡುತ್ತಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಮತದಾನ ಮಾಡಬೇಕು. ಸುಭದ್ರ ಸರ್ಕಾರ ಬರಬೇಕು ಎಂಬ ಉದ್ದೇಶದಿಂದ ಚುನಾವಣೆ ಘೋಷಣೆಯಾದ ದಿನದಿಂದ ಚುನಾವಣೆ ಆಯೋಗದ ಸ್ವೀಪ್ ಸಮಿತಿ ಬೀದಿ ನಾಟಕ, ಬೈಕ್ ಜಾಥಾ, ವಿವಿಪ್ಯಾಟ್ ಬಗ್ಗೆ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ನೀಡುವ ಮೂಲಕ ಒಂದಲ್ಲ ಒಂದು ಜನಜಾಗೃತಿ ಕಾರ್ಯಕ್ರಮ ನಡೆಸುತ್ತಾ ಬರುತ್ತಿದೆ. ಆಶಾ, ಅಂಗನವಾಡಿ ಕಾರ್ಯಕರ್ತರು, ನರ್ಸಿಂಗ್, ಶಾಲಾ, ಕಾಲೇಜು ವಿದ್ಯಾರ್ಥಿಗಳು ನಗರ ಮತ್ತು ಗ್ರಾಮಾಂತರ ಪ್ರದೇಶದ ಕೇಂದ್ರ ಭಾಗದಲ್ಲಿ ಸಾಮೂಹಿಕವಾಗಿ ಒಗ್ಗೂಡಿ ಚುನಾವಣೆ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದ್ದನ್ನು ಕಂಡಿದ್ದೇವೆ.

ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿಯೂ ಕೆಎಂಎಫ್ ಮತದಾನ ಜಾಗೃತಿಯಲ್ಲಿ ಭಾಗಿಯಾಗಿ ಹಾಲಿನ ಪ್ಯಾಕೇಟ್‌ಗಳ ಮೇಲೆ ಮತದಾನ ಮಾಡುವಂತೆ ಜಾಗೃತಿ ಮೂಡಿಸಿತು. ಅದರಂತೆ ಈ ಬಾರಿಯೂ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ಮತ್ತು ವಿದ್ಯುತ್ ಬಿಲ್‌ಗಳಲ್ಲಿ ತಪ್ಪದೇ ಮತ ಚಲಾಯಿಸಿ ಎಂದು ಅಚ್ಚು ಹಾಕಿಸಿ ವಿವಿಧ ಸಂಸ್ಥೆಗಳು ಜಾಗೃತಿ ಮೂಡಿಸುತ್ತಿವೆ. ಚುನಾವಣೆ ಆಯೋಗದ ಸ್ವೀಪ್ ಸಮಿತಿಯೂ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಬೃಹತ್ ಹೋರ್ಡಿಂಗ್ಸ್‌ಗಳ ಮೂಲಕ ಮತದಾನ ಮಾಡಿದವನೇ ಮಹಾಶೂರ, ನೋಟ್‌ಗೆ ನೋ, ಓಟ್‌ಗೆ ಎಸ್ ಎಂಬ ಕಾರ್ಟೂನ್ ಇರುವ ಭಾವಚಿತ್ರಗಳನ್ನು ಪ್ರದರ್ಶಿಸಿ ಭ್ರಷ್ಟಾಚಾರ ಮುಕ್ತ ಚುನಾವಣೆ ನಡೆಸುವ ಬಗ್ಗೆ ತಿಳುವಳಿಕೆ ನೀಡಿತ್ತು. ಹೀಗೆ ಮತ ಚಲಾಯಿಸಿ ಎಂದು ಪ್ರಚಾರ ಮಾಡುವ ಮೂಲಕ ಮತದಾನದ ಶೇಕಡವಾರು ಪ್ರಮಾಣ ಹೆಚ್ಚಿಸುವ ಪ್ರಯತ್ನವನ್ನು ಚುನಾವಣೆ ಆಯೋಗದೊಂದಿಗೆ ವಿವಿಧ ಸಂಸ್ಥೆಗಳು ಕೈ ಜೋಡಿಸಿವೆ.



ಮೈಸೂರಿನ ವಾರ್ಡ್ ನಂ.57ರ ಕುವೆಂಪುನಗರದ 3ನೇ ಹಂತದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್ ನೇತೃತ್ವದಲ್ಲಿ ಮತಯಾಚಿಸಲಾಯಿತು. ಶ್ರೀಧರ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಎಂ.ಪ್ರದೀಪ್‌ಕುಮಾರ್, ಮುಖಂಡರಾದ ಕುಮಾರ್‌ಗೌಡ, ಪ್ರಧಾನ ಕಾರ್ಯದರ್ಶಿ ಭಾಸ್ಕರ್‌ಎಲ್.ಗೌಡ, ವಾರ್ಡ್ ಅಧ್ಯಕ್ಷ ರಾಮನ್, ಉಪಾಧ್ಯಕ್ಷ ಅವಿನಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಇಂದ್ರಮ್ಮ, ನಗರ ಸಂಘಟನಾ ಕಾರ್ಯದರ್ಶಿ ಮಲ್ಲಾಜಮ್ಮ, ಜ್ಯೋತಿ, ಲಕ್ಷ್ಮಿ, ಸರಸ್ವತಿ, ಆನಂದ್, ಶ್ರೀನಿವಾಸ್, ಉಮಾಪತಿ, ದಾಸಪ್ಪ, ಮಹದೇವು, ಬಸವಣ್ಣ, ರೋಹನ್ ಇತರರಿದ್ದರು.

ಸರ್ವಜನಾಂಗದ ಹಿತಸಾಧನೆಗೆ 'ಮತ್ತೊಮ್ಮೆ ಮೋದಿ' ಬೆಂಬಲಿಸಿ: ಯದುವೀರ್ ಮನವಿ



ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ, ಸಭಾಭವನದಲ್ಲಿ ನಡೆದ ವರ್ತಕರ ಸಭೆಯಲ್ಲಿ ಭಾಗವಹಿಸಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತಯಾಚಿಸಿದರು.

ಮೈಸೂರು ಸಿಲ್ಕ್, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಷುಗರ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿಮಾನ ನಿಲ್ದಾಣ, ಮೈಸೂರು ಪಾಕ್ ಸೇರಿದಂತೆ ನೀರಾವರಿ, ಕೃಷಿ, ಶಿಕ್ಷಣ, ಆರೋಗ್ಯ ಕೈಗಾರಿಕೆ ಹೀಗೆ ಎಲ್ಲಾ ಕ್ಷೇತ್ರದಲ್ಲೂ ಮೈಸೂರು ಬ್ರಾಂಡ್ ಪರಿಚಯಿಸಿದ್ದರು. ಇದೀಗ ಈ ಕೆಲಸವನ್ನು ಕೇಂದ್ರ ಸರ್ಕಾರ ಮುಂದುವರೆಸಿದೆ. ಅಲ್ಲದೆ, ಪ್ರತಿಯೊಂದು ಕ್ಷೇತ್ರದಲ್ಲೂ ಮೇಕಿಂಗ್ ಇಂಡಿಯಾ ಯೋಜನೆ ಪರಿಚಯಿಸುತ್ತಿರುವುದು ಸ್ವಾಗತಾರ್ಹ ಸಂಗತಿ.
–ಯದುವೀರ್ ಒಡೆಯರ್

ಮೈಸೂರು, ಏ.4(ಎಸ್‌ಪಿಎನ್)– ಮೈಸೂರು ರಾಜರ ಆಳ್ವಿಕೆಯಲ್ಲಿ ವಿವಿಧ ಉತ್ಪನ್ನಗಳು 'ಮೈಸೂರು ಬ್ರಾಂಡ್' ಹೆಸರಿನಿಂದ ಪ್ರತ್ಯೇಕ ಮಾರುಕಟ್ಟೆಗಳಲ್ಲಿ ಗ್ರಾಹಕರ ಕೈ ಸೇರುತ್ತಿದ್ದವು. ಅದೇ ರೀತಿ ಪ್ರಧಾನಿ ನರೇಂದ್ರ ಮೋದಿ ಅವರು, ವಿವಿಧ ಉತ್ಪನ್ನಗಳಿಗೆ 'ಮೇಕಿಂಗ್ ಇಂಡಿಯಾ' ಯೋಜನೆ ಮೂಲಕ ಸ್ವದೇಶಿ ಮಾರುಕಟ್ಟೆ ಬಲಿಷ್ಠಗೊಳಿಸಲು ಮುಂದಾಗಿರುವುದು ಸಂತೋಷದ ಸಂಗತಿ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರಿನ ಅಶೋಕ ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿದ ನಂತರ ಸಭಾ ಭವನದಲ್ಲಿ ಜೈನ್ ಹಾಗೂ ಇತರೆ ಸಮುದಾಯದ ವರ್ತಕರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ನಮ್ಮ ಪೂರ್ವಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್, 10ನೇ ಚಾಮರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ಸೇರಿದಂತೆ ಇತರೆ ರಾಜರ ಆಳ್ವಿಕೆಯಲ್ಲಿ ಎಲ್ಲಾ ವರ್ಗದ ಏಳ್ಗೆಗೆ ರೂಪಿಸಿದ್ದ ಸುಗಮ ವ್ಯಾಪಾರ–ವಹಿವಾಟು ನಡೆಸಲು ಹಾಗೂ ಮಾರುಕಟ್ಟೆಯಲ್ಲಿ ದೇಶಿ ಬ್ರಾಂಡ್ ಕಲ್ಪನೆಯನ್ನು ಪರಿಚಯಿಸಿದ್ದ ಕೀರ್ತಿ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ ಎಂದರು.

ರಾಜರ ಆಳ್ವಿಕೆಯಲ್ಲಿ ಪಾರದರ್ಶಕ ಹಾಗೂ ಎಲ್ಲಾ ವರ್ಗದವರಿಗೂ ಅರಮನೆ ಹುದ್ದೆಗಳ ನೇಮಕಾತಿಯಲ್ಲಿ ಮೊಟ್ಟ ಮೊದಲ ಬಾರಿಗೆ ಮೀಸಲಾತಿ ಜಾರಿಗೊಳಿಸಿದ ಕೀರ್ತಿ ನಮ್ಮ ಪೂರ್ವಜರಿಗೆ ಸಲ್ಲುತ್ತದೆ. ಅಭಿವೃದ್ಧಿಯ ಜೊತೆಗೆ ಸಮಾಜ ಸುಧಾರಣೆಗೂ ಹೆಚ್ಚಿನ ಆದ್ಯತೆ ನೀಡಿದ್ದರು. ಮಹಿಳೆಯರಿಗೆ ಶಿಕ್ಷಣ, ಅಂಗವಿಕಲರಿಗೆ ಶಿಕ್ಷಣ, ಉದ್ಯೋಗ ಸೃಷ್ಟಿಗೆ ಕೌಶಲ್ಯ ತರಬೇತಿ ಕೋರ್ಸ್‌ಗಳನ್ನು ಆರಂಭಿಸಿ, ಸಮುದಾಯ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ಉದಾಹರಣೆ ಸಹಿತ ವಿವರಿಸಿದರು.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಲ್ಲಿ 'ಮತ್ತೊಮ್ಮೆ ಮೋದಿ' ಅಧಿಕಾರಕ್ಕೆ ಬರಲು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದ ನನ್ನನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಲಿಂಗಾಂಬುದಿ ಪಾಳ್ಯದಲ್ಲಿ ಮತಬೇಟೆ: ಇದಕ್ಕೂ ಮುನ್ನ ಯದುವೀರ್, ಲಿಂಗಾಂಬುದಿ ಪಾಳ್ಯದಲ್ಲಿ ಶ್ರೀ ಸಿದ್ದಪ್ಪಾಜಿ ಕಂಡಾಯೋತ್ಸವ ಹಾಗೂ ಧಾಳು ಹಬ್ಬದಲ್ಲಿ ಪಾಲ್ಗೊಂಡು ಭಕ್ತಿ ಮೆರೆದಿದ್ದಲ್ಲದೆ, ಅಭಿವೃದ್ಧಿಗಾಗಿ ಮೈಸೂರಿನ ಜನತೆ ನನ್ನನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಗುಜರಾತಿ ಸಮಾಜ: ನಂತರ ಯಾದವಗಿರಿಯ ಗುಜರಾತಿ ಸಂಘದ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಯದುವೀರ್ ಪಾಲ್ಗೊಂಡು, ಭಾರತದ ಅಭಿವೃದ್ಧಿಗೆ ಬಿಜೆಪಿ ಬೆಂಬಲಿಸಿ ಎಂದು ಮನವಿ ಮಾಡಿದರು. ನ್ಯೂ ಸಯ್ಯಾಜಿ ರಾವ್ ರಸ್ತೆಯ ಸುಭಾಷ್ ಚಂದ್ರ ಬೋಸ್ ವೃತ್ತದ ಬಳಿ ಕೈಲಾಸಪುರಂನ ಮಹಿಳೆಯರು ಯದುವೀರ್ ಅವರಿಗೆ ಆರತಿ ಬೆಳಗಿ, ಸ್ವಾಗತ ಕೋರಿದರು. ನಂತರ ಕಾಲ್ನಡಿಗೆ ಮೂಲಕ ಕೈಲಾಸಪುರಂ, ಮಂಡಿಮೊಹಲ್ಲಾ, ತಿಲಕನಗರ ಪ್ರಮುಖ ರಸ್ತೆಗಳಲ್ಲಿ ಬೆಂಬಲಿಗರೊಂದಿಗೆ ಮತಯಾಚನೆ ಮಾಡಿದರಲ್ಲದೆ, ದೇವರಾಜ ಮಾರುಕಟ್ಟೆಗೆ ಭೇಟಿ ನೀಡಿ, ಮತಯಾಚನೆ ಮಾಡಿದರು.

ವಿಶೇಷಚೇತನರಿಂದ ಮತದಾನ ಜಾಗೃತಿಯ ವಿಶೇಷ ರ್‍ಯಾಲಿ

ಮೈಸೂರು,ಏ.4–ಮತದಾನದ ಪ್ರಮಾಣವನ್ನು ಹೆಚ್ಚಿಸುವ ಹಾಗೂ ಸಮಾಜದ ವಿವಿಧ ವರ್ಗಗಳಲ್ಲಿ ವ್ಯಾಪಕವಾಗಿ ಮತದಾನ ಜಾಗೃತಿ ಮೂಡಿಸುವ ಸಲುವಾಗಿ ನಂಜನಗೂಡು ತಾಲೂಕು ಪಂಚಾಯಿತಿ ಸ್ವೀಪ್ ಸಮಿತಿ ವತಿಯಿಂದ ವಿಶೇಷ ಚೇತನರಿಂದ ಮತದಾನ ಜಾಗೃತಿಯ ವಿಶೇಷ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು.



ತಾಲೂಕು ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಮತದಾನಕ್ಕೆ ವಿಶೇಷವಾದ ಶಕ್ತಿಯಿದೆ. ಸಂವಿಧಾನವು 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ಮತದಾನ ಮಾಡುವ ಹಕ್ಕನ್ನು ನೀಡಿದೆ. ಪ್ರತಿಯೊಬ್ಬ ಅರ್ಹ ಮತದಾರರು ಮತ ಚಲಾವಣೆ ಮಾಡುವ ಮೂಲಕ ತಮ್ಮ ಕರ್ತವ್ಯ ಪಾಲನೆ ಮಾಡಬೇಕು. ವಿಶೇಷಚೇತನರು, ಹಿರಿಯ ನಾಗರಿಕರಿಗಾಗಿಯೇ ಮತಗಟ್ಟೆಗಳಲ್ಲಿ ರ್‍ಯಾಂಪ್, ವ್ಹೀಲ್‌ಚೇರ್, ನೆರಳು, ನೀರಿನ ವ್ಯವಸ್ಥೆ ಸೇರಿ ಇತರೆ ಅನುಕೂಲಗಳು ಇರಲಿದ್ದು, ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡುವಂತೆ ಕರೆ ನೀಡಿದರು.


ಎಲ್ಲಾ ವಿಶೇಷಚೇತನರಿಂದ ಕಡ್ಡಾಯ ಮತದಾನದ ಸಹಿ ಸಂಗ್ರಹಣೆ ಮಾಡಲಾಯಿತು. ಬಳಿಕ ತಾಲೂಕು ಪಂಚಾಯಿತಿ ಕಚೇರಿಯಿಂದ ಹುಲ್ಲಹಳ್ಳಿ ಸರ್ಕಲ್ ಮಾರ್ಗದ ಪ್ರಮುಖ ರಸ್ತೆಗಳಲ್ಲಿ ಸಾಗಿ ಮತದಾನ ಜಾಗೃತಿ ಮೂಡಿಸಲಾಯಿತು. ನರೇಗಾ ಸಹಾಯಕ ನಿರ್ದೇಶಕ ಶಿವಕುಮಾರ್, ತಾಲೂಕು ಯೋಜನಾಧಿಕಾರಿ ಚಿತ್ರ, ಮಹದೇವನಾಯಕ, ರಂಗಸ್ವಾಮಿ ಇದ್ದರು.

ಮೈಸೂರು ವಕೀಲರ ಸಂಘಕ್ಕೆ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಭೇಟಿ; ಬೆಂಬಲ ಕೋರಿಕೆ

ನಾನು ಕನ್ನೇಗೌಡನ ಕೊಪ್ಪಲು ಅಳಿಯ: ಲಕ್ಷ್ಮಣ

ಮೈಸೂರು,ಏ.4(ಎಂಟಿವೈ)– ಮೈಸೂರಿನ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘಕ್ಕೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಗುರುವಾರ ಶಾಸಕ ತನ್ವೀರ್ ಸೇಠ್ ಹಾಗೂ ಮುಖಂಡರೊಂದಿಗೆ ಭೇಟಿ ನೀಡಿ, ಮತಯಾಚಿಸಿದರು.

ಬುಧವಾರ ನಾಮಪತ್ರ ಸಲ್ಲಿಸಿದ್ದ ಎಂ.ಲಕ್ಷ್ಮಣ ಇಂದು ಬೆಂಬಲಿಗರೊಂದಿಗೆ ಬಿರುಸಿನ ಮತಯಾಚನೆ ಮಾಡಿದರು. ಗುರುವಾರ ಬೆಳಗ್ಗೆ ನ್ಯಾಯಾಲಯದ ಆವರಣಕ್ಕೆ ಆಗಮಿಸಿದ ಎಂ.ಲಕ್ಷ್ಮಣ ಹಾಗೂ ಶಾಸಕ ತನ್ವೀರ್ ಸೇಠ್ ಸೇರಿದಂತೆ ಕಾಂಗ್ರೆಸ್ ಮುಖಂಡರನ್ನು ಹಿರಿಯ ವಕೀಲರು ಆತ್ಮೀಯವಾಗಿ ಬರಮಾಡಿಕೊಂಡರು. ಈ ಬಾರಿ ಕಾಂಗ್ರೆಸ್ ಬೆಂಬಲಿಸುವಂತೆ ವಕೀಲರಲ್ಲಿ ಮನವಿ ಮಾಡಿದರು.



ಮೈಸೂರು ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘಕ್ಕೆ ಮತ ಯಾಚಿಸಲು ಬಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಹಾಗೂ ಶಾಸಕ ತನ್ವೀರ್ ಅವರನ್ನು ವಕೀಲರ ಸಂಘದ ಪದಾಧಿಕಾರಿಗಳು ಸನ್ಮಾನಿಸಿದರು.

ಶಾಸಕ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಮಾತನಾಡಿ, ಕಾಂಗ್ರೆಸ್ ಪಕ್ಷ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಈ ಹಿಂದಿನಿಂದಲೂ ಸೇವೆ ಸಲ್ಲಿಸುತ್ತಾ ಬಂದಿದೆ. ಚುನಾವಣೆ ಸಂದರ್ಭದಲ್ಲಿ ನಾವು ಜನರಿಗೆ ನೀಡಿದ ಭರವಸೆಗಳನ್ನು ಅನುಷ್ಠಾನಗೊಳಿಸಿ ನುಡಿದಂತೆ ನಡೆದುಕೊಂಡಿದ್ದೇವೆ. ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ. ಕೇವಲ ಘೋಷಣೆಗೆ ಮಾತ್ರ ಸೀಮಿತವಾಗದೆ ಕಟ್ಟ ಕಡೇ ಜನರಿಗೂ ನಮ್ಮ ಸರ್ಕಾರದ ಕಾರ್ಯಕ್ರಮಗಳು ತಲುಪಿವೆ. ನಮ್ಮ ಸರ್ಕಾರದ ಜನಪ್ರಿಯ ಕಾರ್ಯಕ್ರಮಗಳು ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಹಸಿವು ಮುಕ್ತ ರಾಜ್ಯ ನಿರ್ಮಾಣ, ಎಲ್ಲರಿಗೂ ಶಿಕ್ಷಣ ಸೌಲಭ್ಯ ಸಿಗಬೇಕು ಎನ್ನುವುದು ನಮ್ಮ ಆಶಯ. ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ನಾನು ಹೋರಾಟದಿಂದ ಬಂದ ವ್ಯಕ್ತಿಯಾಗಿದ್ದೇನೆ. ಮೈಸೂರು–ಕೊಡಗು ಜಿಲ್ಲೆಯನ್ನು ಪ್ರಪಂಚದಲ್ಲಿ ಅತ್ಯುತ್ತಮ ಪ್ರವಾಸಿ ತಾಣವಾಗಿ ಮಾಡಬಹುದಾಗಿತ್ತು. ಒಂದು ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿಸಬಹುದಾಗಿತ್ತು. ಮೈಸೂರು ಸೇರಿದಂತೆ ವಿವಿಧ ತಾಲೂಕಿನಲ್ಲಿ ಕೈಗಾರಿಕಾ ಹಬ್ ಹಾಗೂ ಐಟಿ ಸೆಕ್ಟರ್‌ಗೆ ಉತ್ತಮ ವಾತಾವರಣವಿದೆ. ಬೆಂಗಳೂರಲ್ಲಿ ಐಟಿ ಸೆಕ್ಟರ್‌ನಲ್ಲಿ ಉಸಿರುಗಟ್ಟುವ ವಾತಾವರಣವಿದೆ. ಇದನ್ನು ಸದುಪಯೋಗ ಮಾಡಿಕೊಂಡು ಮೈಸೂರಲ್ಲಿ ಐಟಿ ಸೆಕ್ಟರ್ ಸ್ಥಾಪನೆಗೆ ಒಳ್ಳೆಯ ಅವಕಾಶವಿದೆ. ಈ ಎಲ್ಲವನ್ನು ನಾನು ಎರಡೂ ಜಿಲ್ಲೆಗಳಲ್ಲಿ ಜಾರಿಗೊಳಿಸಲು ಪ್ರಯತ್ನಿಸುತ್ತೇನೆ. –ಎಂ.ಲಕ್ಷ್ಮಣ

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ನಾನು ಸಾಮಾನ್ಯರಲ್ಲಿ ಸಾಮಾನ್ಯ ಕಾರ್ಯಕರ್ತ. ಆದರೂ ನನಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇನ್ನಿತರರು ನನಗೆ ಟಿಕೆಟ್ ಕೊಡಿಸುವಲ್ಲಿ ಶ್ರಮಿಸಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ತನ್ನದೇ ಆದ ಗುರಿ ಹೊಂದಿದ್ದೇನೆ. ನೀವು ಕೊಟ್ಟ ಮತವನ್ನು ಪೋಲಾಗದಂತೆ ನೋಡಿಕೊಳ್ಳುತ್ತೇನೆ. ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಸಿದ್ದರಾಮಯ್ಯ ಅವರನ್ನು ಬಿಟ್ಟರೆ ಮೈಸೂರಿನವರು ಸಿಎಂ ಆಗಲು ಇನ್ನೆಷ್ಟು ವರ್ಷ ಬೇಕಾಗುತ್ತದೆಯೋ. ಮೊದಲ ಅವಧಿಯಲ್ಲಿ 3800 ಕೋಟಿ ರೂ. ಅನುದಾನ ನೀಡಿ, ಜಯದೇವ ಹೃದ್ರೋಗ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಪಂಚಕರ್ಮ ಆಸ್ಪತ್ರೆ ನಿರ್ಮಿಸಿದ್ದಾರೆ. ಮಹಾರಾಣಿ ವಾಣಿಜ್ಯ ಕಾಲೇಜು, ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೇರಿದಂತೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಅವಧಿಯಲ್ಲಿ ಮೈಸೂರು–ಕೊಡಗು ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಕಾರ್ಯಕ್ರಮ ಅನುಷ್ಠಾನಕ್ಕೆ ಉದ್ದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನನಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಕೆಲವು ನನ್ನ ಸ್ನೇಹಿತರು ನಾನು ಒಕ್ಕಲಿಗ ಸಮುದಾಯಕ್ಕೆ ಸೇರಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ. ನಾನು ಕನ್ನೇಗೌಡನ ಕೊಪ್ಪಲಿನ ಅಳಿಯ. ಸಾಕಷ್ಟು ಬಾರಿ ಹೇಳಿದ್ದೇನೆ. ಹುಟ್ಟುತ್ತಾ ಒಕ್ಕಲಿಗ, ಬೆಳೆಯುತ್ತಾ ವಿಶ್ವಮಾನವ ಎಂದು. ಈ ಹಿಂದೆ ಎರಡು ಬಾರಿ ಚುನಾವಣೆಯಲ್ಲಿ ಸೋಲನನುಭವಿಸಿದ್ದೇನೆ. ಈ ಬಾರಿ ಕ್ಷೇತ್ರದ ಜನತೆ ನನಗೆ ಬೆಂಬಲ ನೀಡಬೇಕು. ಯಾವುದೇ ತಾರತಮ್ಯ ಇಲ್ಲದೆ ಕ್ಷೇತ್ರದ ಜನರ ಸೇವೆ ಮಾಡಲು ಹಗಲಿರುಳು ಶ್ರಮಿಸುತ್ತೇನೆ. ಕಳೆದ 2 ತಿಂಗಳಿಂದ ನಿರಂತರವಾಗಿ ಕ್ಷೇತ್ರದಲ್ಲಿ ಪ್ರವಾಸ ಮಾಡಿ ಪ್ರಚಾರ ಮಾಡುತ್ತಿದ್ದೇನೆ ಎಂದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಎನ್.ಬಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಜಿ.ಸುಧೀರ್, ಖಜಾಂಚಿ ಹೆಚ್.ಪಿ.ಭರತ್, ಹಿರಿಯ ವಕೀಲ ಚಂದ್ರಮೌಳಿ, ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಉಮೇಶ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಜಿ.ಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಶುಕ್ರವಾರ 5 ಏಪ್ರಿಲ್ 2024

ಕಾರು ಡಿಕ್ಕಿ: ಬೈಕ್ ಸವಾರ ಸಾವು



ಹಲಗೂರು ಏ4– ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿ ಮೂವರು ಗಾಯಗೊಂಡಿರುವ ಘಟನೆ ಸಮೀಪದ ದೇವಿರ ಹಳ್ಳಿ ಗೇಟ್ ಬಳಿ ಹಲಗೂರು–ಕನಕಪುರ ರಸ್ತೆಯಲ್ಲಿ ಸಂಭವಿಸಿದೆ.

ಸಾತನೂರು ಹೋಬಳಿಯ ಹರಿಹರ ಗ್ರಾಮದ ರಾಜು (45) ಮೃತ ದುರ್ದೈವಿ.

ಗುರುವಾರ ರಾತ್ರಿ ಹಲಗೂರು ಮಾರ್ಗವಾಗಿ ವೇಗವಾಗಿ ಬರುತ್ತಿದ್ದ ಕಾರು ಬೈಕಿಗೆ ಡಿಕ್ಕಿ ಹೊಡೆದ ಪರಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು, ವಾಹನದ ಹಿಂಬದಿಯಲ್ಲಿ ಕುಳಿತಿದ್ದ ಮೂವರಿಗೆ ಗಂಭೀರವಾಗಿ ಗಾಯಗಳಾಗಿದ್ದು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕದಲ್ಲಿ ಜಾತಿ–ಧರ್ಮದ ಮೇಲೆ ಸರ್ಕಾರ ನಡೆಯುತ್ತಿದೆ

ಕಾಂಗ್ರೆಸ್ ಸರ್ಕಾರದ ವಿರುದ್ಧ ಗೋವಾ ಸಿಎಂ ಪ್ರಮೋದ್ ಸಾವಂತ್ ವಾಗ್ದಾಳಿ



ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮಾತನಾಡುತ್ತಿರುವುದು

ಮಂಡ್ಯ,ಏ.4– ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಜಾತಿ, ಧರ್ಮದ ಆಧಾರದಲ್ಲಿ ಸರ್ಕಾರ ನಡೆಸುತ್ತಿದ್ದು, ಅಭಿವೃದ್ಧಿ ಶೂನ್ಯವಾಗಿದೆ. ಕಳೆದ ಹತ್ತು ವರ್ಷದಿಂದ ಕೇಂದ್ರದಲ್ಲಿ ಅಭಿವೃದ್ಧಿಯ ಆಡಳಿತ ನೀಡುತ್ತಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರಲು ರಾಜ್ಯದ 28 ಕ್ಷೇತ್ರದಲ್ಲೂ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲಬೇಕೆಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಕರೆ ನೀಡಿದರು.

ಗುರುವಾರ ನಗರದ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆದ ಬಹಿರಂಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಾರಿಶಕ್ತಿ, ಕಿಸಾನ್ ಶಕ್ತಿ, ಯುವ ಶಕ್ತಿ, ಗರೀಬಿ ಶಕ್ತಿಯನ್ನು ಅಭಿವೃದ್ಧಿ ಮಾಡುವತ್ತ ಪಣತೊಟ್ಟಿವೆ. ಮೋದಿ ಅವರ ಸ್ಕೀಂಗಳು ಕೃಷಿ ಮತ್ತು ಮಹಿಳಾ ಸಬಲೀಕರಣವನ್ನು ಮಾಡುತ್ತಿದೆ. 50 ವರ್ಷದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಕೇಂದ್ರದಲ್ಲಿ ಮಾಡದ ಅಭಿವೃದ್ಧಿ ಕೆಲಸಗಳನ್ನು ಮೋದಿ ಕಳೆದ ಹತ್ತು ವರ್ಷದಲ್ಲಿ ಮಾಡಿದ್ದಾರೆ ಎಂದು ಬಣ್ಣಿಸಿದರು.

ರಾಹುಲ್‌ಗಾಂಧಿ ತಮ್ಮ ಕಾಂಗ್ರೆಸ್ ಪಕ್ಷ 50 ವರ್ಷ ಆಳ್ವಿಕೆ ನಡೆಸಿ ದೇಶದ ಅಭಿವೃದ್ಧಿಗೆ ಯಾವ್ಯಾವ ಕೊಡುಗೆ ಕೊಟ್ಟಿದೆ ಎಂಬುದನ್ನು ಬಹಿರಂಗವಾಗಿ ಹೇಳಲಿ. ನಾನು ಸಹ ಕಳೆದ ಹತ್ತು ವರ್ಷದಲ್ಲಿ ಮೋದಿ ಸರ್ಕಾರ ಕೊಟ್ಟಿರುವ ಅಭಿವೃದ್ಧಿ ಕಾರ್ಯಗಳನ್ನು ಪಟ್ಟಿ ಸಮೇತ ಹೇಳಲು ಸಿದ್ಧನಿದ್ದೇನೆ ಎಂದು ಸವಾಲು ಹಾಕಿದರು.

ಹಲವಾರು ವರ್ಷ ದೇಶವನ್ನಾಳಿದ ಯುಪಿಎ ಸರ್ಕಾರ ಹೊಸ ಹೊಸ ಯೋಜನೆಗಳನ್ನು ತರಲು ಸಂಪೂರ್ಣ ವಿಫಲವಾಗಿದೆ. ಆದರೆ ಇದೀಗ ಹತ್ತು ವರ್ಷ ಆಳ್ವಿಕೆ ನಡೆಸಿದ ಮೋದಿ ಸರ್ಕಾರ 700 ಮೆಡಿಕಲ್ ಕಾಲೇಜನ್ನು ದೇಶಾದ್ಯಂತ ಸ್ಥಾಪಿಸಿದೆ. ನೂರಾರು ಏರ್‌ಪೋರ್ಟ್‌ಗಳನ್ನು ನಿರ್ಮಾಣ ಮಾಡಿದೆ. ಆಧುನಿಕ ಭಾರತ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಿದೆ. ಆದರೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಶೂನ್ಯವಾಗಿತ್ತು ಎಂದು ಆರೋಪಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಹೆಚ್.ಡಿ.ಕುಮಾರಸ್ವಾಮಿ ರಾಜ್ಯದ ಯಾವುದೇ ಕ್ಷೇತ್ರದಲ್ಲಿ ನಿಂತರೂ ಗೆಲ್ಲುತ್ತಾರೆ. ಆ ಶಕ್ತಿ ಅವರಲ್ಲಿದೆ. ಆದರೆ ಮಂಡ್ಯ ಜಿಲ್ಲೆಯ ಜನರು ಅಪೇಕ್ಷೆ ಪಟ್ಟರು ಎಂಬ ಕಾರಣಕ್ಕೆ ಇಲ್ಲಿ ಸ್ಪರ್ಧೆ ಮಾಡುತ್ತಿದ್ದಾರೆ. ನನ್ನ ಹುಟ್ಟೂರು ಮಂಡ್ಯ ಜಿಲ್ಲೆಯಲ್ಲಿ ಕುಮಾರಸ್ವಾಮಿ ಸ್ಪರ್ಧೆ ನನಗೆ ಸಂತಸ ತಂದಿದ್ದು, ಕನಿಷ್ಠ 2 ಲಕ್ಷ ಮತಗಳ ಅಂತರದಲ್ಲಿ ಅವರು ಗೆಲ್ಲಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ. ರಾಜ್ಯದಲ್ಲಿ ಐದು ಮುಖ್ಯಮಂತ್ರಿಗಳು ಆಳ್ವಿಕೆ ನಡೆಸುತ್ತಿದ್ದು, ಅಧಿಕೃತ ಒಬ್ಬರು ಮುಖ್ಯಮಂತ್ರಿ ಇದ್ದರೆ, ಸೂಪರ್ ಸಿಎಂ ನಾಲ್ಕು ಮಂದಿ ಇದ್ದಾರೆ. ಇವರಿಗೆ ಬುದ್ಧಿ ಕಲಿಸಬೇಕೆಂದರೆ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ 400 ಸೀಟು ಕೊಡಬೇಕು. ಆ 400 ಸೀಟಿಗೆ ಕರ್ನಾಟಕದ 28 ಸೀಟು ಸೇರಿರಬೇಕು.
> –ಪ್ರಮೋದ್ ಸಾವಂತ್, ಗೋವಾ ಮುಖ್ಯಮಂತ್ರಿ

ಹಣ, ಹೆಂಡ, ತೋಳ್ಬಲದಿಂದ ಅಧಿಕಾರಕ್ಕೆ ಬರುವ ಭ್ರಮೆಯಲ್ಲಿರುವ ಕಾಂಗ್ರೆಸ್ಸಿಗರಿಗೆ ಪಾಠ ಕಲಿಸಬೇಕು. ಕುಮಾರಸ್ವಾಮಿ ಹಾಗೂ ಪಕ್ಕದ ಬೆಂಗಳೂರು ಗ್ರಾಮಾಂತರದಲ್ಲಿ ಸ್ಪರ್ಧಿಸಿರುವ ಡಾ.ಸಿ.ಎನ್. ಮಂಜುನಾಥ್ ಸೇರಿ ನಮ್ಮ 28 ಅಭ್ಯರ್ಥಿಗಳು ಗೆಲ್ಲುತ್ತಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲಾ ನಮ್ಮ ಜನಪ್ರಿಯ ಯೋಜನೆಗಳನ್ನು ತೆಗೆದು ಹಾಕುತ್ತಾರೆ. ನಾನು ಸಿಎಂ ಆಗಿದ್ದಾಗ ಜಾರಿಗೆ ತಂದಿದ್ದ ಕಿಸಾನ್ ಸಮ್ಮಾನ್, ಭಾಗ್ಯಲಕ್ಷ್ಮಿ ಸೇರಿದಂತೆ ಅನೇಕ ಯೋಜನೆಗಳನ್ನು ನಿಲ್ಲಿಸಿದ್ದಾರೆ. ಜನಪ್ರಿಯ ಯೋಜನೆಗಳನ್ನು ನಿಲ್ಲಿಸಿರುವ ನಿಮಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ– ಜೆಡಿಎಸ್‌ನ ಗಾಳಿ ರಾಜ್ಯದ ಉದ್ದಗಲಕ್ಕೂ ಬೀಸುತ್ತಿದ್ದು, ಪ್ರಧಾನಿ ಮೋದಿ ಹಾಗೂ ದೇವೇಗೌಡರ ಗೌರವ ಉಳಿದುಕೊಳ್ಳಬೇಕೆಂದರೆ ಕುಮಾರಸ್ವಾಮಿ ಅವರನ್ನು ಪ್ರಚಂಡ ಬಹುಮತದಿಂದ ಮಂಡ್ಯ ಜನ ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಓವರ್ ಲೋಡ್: ಲಿಫ್ಟ್‌ನಲ್ಲಿ ಸಿಲುಕಿದ ಪುಟ್ಟರಾಜು, ಯದುವೀರ್, ಗೋವಾ ಮುಖ್ಯಮಂತ್ರಿ; ಕೆಲ ಕ್ಷಣ ಆತಂಕ

ಮಂಡ್ಯ,ಏ.4– ಹೆಚ್.ಡಿ.ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಂಡ್ಯ ನಗರಕ್ಕೆ ಆಗಮಿಸಿದ್ದ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ನಗರದ ಖಾಸಗಿ ಹೋಟೆಲ್‌ನ ಲಿಫ್ಟ್‌ನಲ್ಲಿ ಸಿಲುಕಿದ ಘಟನೆಯು ನಡೆದು ಕೆಲ ಕ್ಷಣ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಗೋವಾದ ಪಣಜಿಯಿಂದ ವಿಮಾನದ ಮೂಲಕ ಬೆಂಗಳೂರಿಗೆ ಆಗಮಿಸಿದ ಸಾವಂತ್, ಬೆಂಗಳೂರಿನಿಂದ ಕಾರಿನಲ್ಲಿ ಮಂಡ್ಯಗೆ ಬಂದರು. ಮಂಡ್ಯದ ಉಮ್ಮಡಹಳ್ಳಿ ಬಳಿ ಇರುವ ಖಾಸಗಿ ಹೋಟೆಲ್‌ಗೆ ತೆರಳಿ ಕೆಲ ಹೊತ್ತು ವಿಶ್ರಾಂತಿ ಪಡೆದು, ಯಡಿಯೂರಪ್ಪ ಜೊತೆಗೆ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ, ನಂತರ ಡಿಸಿ ಕಚೇರಿಗೆ ತೆರಳಲು ಲಿಫ್ಟ್‌ಗೆ ಹತ್ತಿದರು. 6 ಜನರ ಸಾಮರ್ಥ್ಯದ ಲಿಫ್ಟ್‌ಗೆ 9 ಮಂದಿ ತೆರಳಿದಾಗ ಓವರ್ ಲೋಡ್ ಆಗಿ ಒಂದು ನಿಮಿಷ ಕಾಲ ಲಿಫ್ಟ್ ಸ್ಥಗಿತಗೊಂಡಿತು. ಬಳಿಕ ಹೋಟೆಲ್ ಸಿಬ್ಬಂದಿ, ಮುಖ್ಯಮಂತ್ರಿಗಳ ಅಂಗರಕ್ಷಕರು ಹಾಗೂ ಮುಖಂಡರು ಹರಸಾಹಸಪಟ್ಟು ಲಿಫ್ಟ್ ಓಪನ್ ಮಾಡಿದರು. ಬಳಿಕ ಸುರಕ್ಷಿತವಾಗಿ ಸಿಎಂ ಹೋಟೆಲ್‌ನಿಂದ ತೆರಳಿದರು. ಲಿಫ್ಟ್‌ನಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಗೋವಾ ಮುಖ್ಯಮಂತ್ರಿಗಳ ಇಬ್ಬರು ಆಪ್ತ ಸಹಾಯಕರು ಹಾಗೂ ಮೂವರು ಅಂಗರಕ್ಷಕರು ಸಿಲುಕಿದ್ದರು.

ಕುಮಾರಸ್ವಾಮಿಗಿಂತ ಅವರ ಪತ್ನಿ ಶ್ರೀಮಂತೆ

ಕುಮಾರಸ್ವಾಮಿ ಬಳಿ 54.65 ಕೋಟಿ ಆಸ್ತಿ ಇದ್ದರೆ ಅನಿತಾ ಅವರ ಬಳಿ 154.40 ಕೋಟಿ ಆಸ್ತಿ ಇದೆ



ಕುಮಾರಸ್ವಾಮಿ



ಅನಿತಾ

ಮಂಡ್ಯ: ಲೋಕಸಭಾ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರಿಗಿಂತ ಅವರ ಪತ್ನಿ ಅನಿತಾ ಕುಮಾರಸ್ವಾಮಿ ಶ್ರೀಮಂತರಾಗಿದ್ದಾರೆ.

ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿರುವ ಕುಮಾರಸ್ವಾಮಿ ಅವರು 10,71,26,354 ರೂ. ಮೌಲ್ಯದ ಚರಾಸ್ತಿ, 43,94,41,100 ರೂ. ಮೌಲ್ಯದ ಸ್ಥಿರಾಸ್ತಿ ಸೇರಿದಂತೆ ಒಟ್ಟು 54,65,67,454 ರೂ. ಮೌಲ್ಯದ ಆಸ್ತಿ ಹೊಂದಿದ್ದಾರೆ. 4.64 ಕೋಟಿ ರೂ. ಮೌಲ್ಯದ ಕೃಷಿ ಭೂಮಿ ಇದ್ದು, 1.43 ಕೋಟಿ ರೂ. ಮೌಲ್ಯದ ಮನೆ, ಕಟ್ಟಡ ಹೊಂದಿದ್ದಾರೆ. ಕೈಯಲ್ಲಿ 10.38 ಲಕ್ಷ ರೂ. ನಗದು ಇದ್ದು, ವಿವಿಧ ಬ್ಯಾಂಕ್‌ಗಳ ಖಾತೆಯಲ್ಲೂ ಹಣ ಇದೆ. 12.55 ಲಕ್ಷ ರೂ. ಮೌಲ್ಯದ ಟ್ರಾಕ್ಟರ್ ಇದೆ. ಯಾವುದೇ ಕಾರುಗಳನ್ನು ಹೊಂದಿಲ್ಲ. 47.06 ಲಕ್ಷ ರೂ. ಮೌಲ್ಯದ 750 ಗ್ರಾಂ ಚಿನ್ನ, 9.62 ಲಕ್ಷ ರೂ. ಮೌಲ್ಯದ 12 ಕೆಜಿ 500 ಗ್ರಾಂ ಬೆಳ್ಳಿ, 2.60 ಲಕ್ಷ ರೂ. ಮೌಲ್ಯದ 4 ಕ್ಯಾರೆಟ್ ವಜ್ರಾಭರಣವಿದೆ. 19.12 ಕೋಟಿ ರೂ. ಸಾಲ ಹೊಂದಿದ್ದಾರೆ. ಕುಮಾರಸ್ವಾಮಿ ಅವರು ಕಳೆದ ಒಂದು ವರ್ಷದ ಅವದಿಯಲ್ಲಿ 50 ಕೋಟಿಗೂ ಹೆಚ್ಚು ಆಸ್ತಿಯನ್ನು ಸಂಪಾದಿಸಿದ್ದಾರೆ

ಎಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಎರಡು ಕ್ರಿಮಿನಲ್ ಒಂದು ಎನ್‌ಸಿಆರ್ ಸೇರಿದಂತೆ ಲೋಕಾಯುಕ್ತದಲ್ಲಿ ಮೂರು ಪ್ರಕರಣಗಳಿವೆ. 65ರ ವಯಸ್ಸಿನ ಕುಮಾರಸ್ವಾಮಿ ಬಿ.ಎಸ್ಸಿ ಮುಗಿಸಿದ್ದು, ತಮ್ಮ ನಾಮಪತ್ರದ ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ.

ಕುಮಾರಸ್ವಾಮಿ ಅವರಿಗಿಂತ ಪತ್ನಿಯೇ ಶ್ರೀಮಂತೆಯಾಗಿದ್ದಾರೆ. ಅನಿತಾ ಕುಮಾರಸ್ವಾಮಿ ಅವರು 90,32,28,973 ರೂ. ಮೌಲ್ಯದ ಚರಾಸ್ತಿ, 64,07,73,530 ರೂ. ಮೌಲ್ಯದ ಸ್ಥಿರಾಸ್ತಿ ಸೇರಿದಂತೆ 154,40,02,503 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದಾರೆ. ಕೈಯಲ್ಲಿ 76 ಲಕ್ಷ ರೂ. ನಗದು ಇದ್ದು, ವಿವಿಧ ಬ್ಯಾಂಕ್ ಖಾತೆಯಲ್ಲೂ ಹಣ ಠೇವಣಿ ಇರಿಸಿದ್ದಾರೆ. 11.15 ಲಕ್ಷ ರೂ. ಮೌಲ್ಯದ ಟಯೋಟಾ ಇನೋವಾ ಕ್ರಿಸ್ಟಾ ಕಾರು ಹೊಂದಿದ್ದಾರೆ. 2.41 ಕೋಟಿ ರೂ. ಮೌಲ್ಯದ 3 ಕೆಜಿ 852 ಗ್ರಾಂ ಚಿನ್ನಾಭರಣ, 13.09 ಲಕ್ಷ ರೂ. ಮೌಲ್ಯದ 17 ಕೆಜಿ ಬೆಳ್ಳಿ, 33.09 ಲಕ್ಷ ರೂ. ಮೌಲ್ಯದ 59.2 ಕ್ಯಾರೆಟ್ ವಜ್ರಾಭರಣ ಹೊಂದಿದ್ದಾರೆ. 63.05 ಕೋಟಿ ರೂ. ಸಾಲ ತೋರಿಸಿದ್ದಾರೆ. ಇದರ ಜೊತೆಗೆ ಹಿಂದೂ ಅವಿಭಕ್ತ ಕುಟುಂಬದ ಆಸ್ತಿ 6,97,17,500 ರೂ. ಮೌಲ್ಯದ ಆಸ್ತಿ ಇದೆ.

ತೋಟದಲ್ಲಿ ಭಾರೀ ಗಾತ್ರದ ಹೆಬ್ಬಾವು ಪತ್ತೆ



ಹಲಗೂರು, ಏ.4– ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕರಲಕಟ್ಟೆಯಲ್ಲಿ ಇರುವ ಗೀತಾ ಲೋಕೇಶ್ ಎಸ್ಟೇಟ್ ನಲ್ಲಿ ಭಾರೀ ಗಾತ್ರದ ಹೆಬ್ಬಾವು ಕಾಣಿಸಿಕೊಂಡಿದ್ದು ಉರಗ ತಜ್ಞರು ಅದನ್ನು ರಕ್ಷಿಸಿ ಕಾಡಿಗೆ ಬಿಟ್ಟಿದ್ದಾರೆ.

ತೋಟವನ್ನು ನೋಡಿಕೊಳ್ಳುತ್ತಿರುವ ಬಸವರಾಜು ಹೆಬ್ಬಾವು ಕಂಡು ತಕ್ಷಣ ಅರಣ್ಯ ಇಲಾಖೆ ಹಾಗೂ ಉರಗ ಪ್ರೇಮಿ ಜಗದೀಶ್ ಅವರಿಗೆ ಕರೆ ತಿಳಿಸಿದರು.

ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಉರಗ ತಜ್ಞ ಜಗದೀಶ್ ಸ್ಥಳಕ್ಕೆ ಭೇಟಿ ನೀಡಿ ಹೆಬ್ಬಾವು ಹಿಡಿದು ಮುತ್ತತ್ತಿ ಅರಣ್ಯ ಪ್ರದೇಶಕ್ಕೆ ಬಿಟ್ಟರು. ಕಳೆದ ಮೂರು ತಿಂಗಳ ಹಿಂದೆಯೂ ಹೆಬ್ಬಾವು ಕಾಣಿಸಿಕೊಂಡಿದ್ದು ಅರಣ್ಯ ಪ್ರದೇಶಕ್ಕೆ ಬಿಡಲಾಗಿತ್ತು .ಈಗ ಮತ್ತೊಂದು ಬಾರಿ ಹೆಬ್ಬಾವು ಕಾಣಿಸಿಕೊಂಡಿದೆ.

ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಆಪ್ತ ಬರ್ಬರ ಹತ್ಯೆ

ಅಥಣಿ: ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಆಪ್ತ ಅಣ್ಣಪ್ಪ ಬಸಪ್ಪ ನಿಂಬಾಳ (58) ಎಂಬವರನ್ನು ನಡುರಸ್ತೆಯಲ್ಲೇ ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಬುಧವಾರ ನಡೆದಿದೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಖೀಳೆಗಾಂವ್ ಗ್ರಾಮದ ಹೊರವಲಯದಲ್ಲಿ ಅಣ್ಣಪ್ಪ ಬಸಪ್ಪ ನಿಂಬಾಳರನ್ನು ಕೊಲೆ ಮಾಡಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ.

ಹಣಕಾಸಿನ ವಿಚಾರವಾಗಿ ಹತ್ಯೆ ಮಾಡಿರುವ ಶಂಕೆಗಳು ವ್ಯಕ್ತವಾಗಿವೆ. ಹತ್ಯೆಗೀಡಾದ ಖೀಳೆಗಾಂವ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಜೊತೆಗೆ ಅಥಣಿ ಶಾಸಕ ಲಕ್ಷ್ಮಣ್ ಸವದಿ ಮತ್ತು ಕಾಗವಾಡ ಶಾಸಕ ರಾಜು ಕಾಗೆ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದರು. ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಡಾ॥ ಬಾಬು ಜಗಜೀವನರಾಂ ಜಯಂತಿ

ಮಂಡ್ಯ,ಏ.4– ಹಸಿರು ಹರಿಕಾರ ಡಾ॥ ಬಾಬು ಜಗಜೀವನರಾಂ ಅವರ 117ನೇ ಜನ್ಮ ದಿನಾಚರಣೆಯ ಅಂಗವಾಗಿ ಏ.5 ರಂದು ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿಯ ಮುಂಭಾಗದ ಉದ್ಯಾನವನದಲ್ಲಿರುವ ಡಾ॥ ಬಾಬು ಜಗಜೀವನರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ಬೆಳಿಗ್ಗೆ 9 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ನಂತರ ವೇದಿಕೆ ಕಾರ್ಯಕ್ರಮವನ್ನು ಬೆಳಿಗ್ಗೆ 9.30 ರಿಂದ 10.30 ರವರೆಗೆ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜಯಂತಿಗೆ ಇಲಾಖಾಧಿಕಾರಿಗಳು ಮತ್ತು ಸಾರ್ವಜನಿಕರು ಹಾಜರಾಗುವಂತೆ ಮಂಡ್ಯ ಸಮಾಜಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಚುನಾವಣೆಯಲ್ಲಿ 18 ವರ್ಷದೊಳಗಿನ ಮಕ್ಕಳ ಬಳಕೆ ನಿಷೇಧ: ಚು.ಆಯೋಗ

ಮಂಡ್ಯ,ಏ.4–2024ರ ಸಾರ್ವತ್ರಿಕ ಚುನಾವಣಾ ಸಂದರ್ಭದಲ್ಲಿ ಚುನಾವಣಾ ಕಾರ್ಯ ಹಾಗೂ ಪ್ರಚಾರ ಕಾರ್ಯಗಳಲ್ಲಿ 18 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ಬಳಸಿಕೊಳ್ಳುವುದನ್ನು ನಿಷೇಧಿಸಿದೆ. ಭಾರತ ಸರ್ಕಾರವು ವಿಶ್ವಸಂಸ್ಥೆಯ ಅನುಮೋದಿತ ಮಕ್ಕಳ ಹಕ್ಕುಗಳ ಒಡಂಬಡಿಕೆ, 1992ರ ಡಿಸೆಂಬರ್ 11 ರಂದು ಒಪ್ಪಿ ಅನುಮೋದಿಸಿದೆ. ಈ ಮಕ್ಕಳ ಹಕ್ಕುಗಳ ಒಡಂಬಡಿಕೆ ಹಾಗೂ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ ಕಾಯ್ದೆ) 2015ರ ಅನ್ವಯ 18 ವರ್ಷದೊಳಗಿನ ಎಲ್ಲರೂ ಮಕ್ಕಳು ಎಂದು ಪರಿಗಣಿತವಾಗಿದೆ.

ಮೂರನೇ ಪುಟದಿಂದ

ಹೆಚ್.ಡಿ.ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ

ವಿವಿಧ ದೇವಾಲಯಗಳಿಗೆ ಭೇಟಿ ಕೊಟ್ಟ ಹೆಚ್ಡಿಕೆ ವಿಶೇಷ ಪೂಜೆ ಸಲ್ಲಿಸಿದರು. ಮಂಡ್ಯದ ಅರ್ಕೇಶ್ವರ, ಕಾಳಿಕಾಂಬ, ಲಕ್ಷ್ಮಿ ಜನಾರ್ದನಸ್ವಾಮಿ ದೇಗುಲಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ನಂತರ ನೀರಾವರಿ ಇಲಾಖೆ ಮುಂಭಾಗದ ಕಾವೇರಿ ಪ್ರತಿಮೆ, ನಾಲ್ವಡಿ ಕೃಷ್ಣರಾಜ ಒಡೆಯರ್, ವಿಶ್ವೇಶ್ವರಯ್ಯ, ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾವ್ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದರು.

ಬೋಜೇಗೌಡ, ರಾಮಚಂದ್ರು ನಡುವೆ ಜಟಾಪಟಿ: ದೇವಾಲಯಗಳಿಗೆ ಭೇಟಿ ನೀಡುವ ವೇಳೆ ವಿಧಾನಪರಿಷತ್ ಸದಸ್ಯ ಎಸ್.ಎಲ್.ಬೋಜೇಗೌಡ ಹಾಗೂ ಮಂಡ್ಯ ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ನಡುವೆ ಜಟಾಪಟಿ ನಡೆಯಿತು. ಕುಮಾರಸ್ವಾಮಿ ಕಾರು ಹತ್ತಲು ರಾಮಚಂದ್ರರಿಗೆ ಬೋಜೇಗೌಡ ಆಕ್ಷೇಪ ವ್ಯಕ್ತಪಡಿಸಿದಾಗ ಕುಮಾರಸ್ವಾಮಿ ಮುಂದೆಯೇ ಇಬ್ಬರ ನಡುವೆ ವಾಗ್ವಾದವೆ ನಡೆಯಿತು. ಬಳಿಕ ರಾಮಚಂದ್ರ ಬೋಜೇಗೌಡ ವಿರುದ್ಧ ಸ್ಥಳದಲ್ಲೇ ಕುಮಾರಸ್ವಾಮಿಗೆ ದೂರು ಹೇಳಿದರು.

ಹೆಚ್ಡಿಕೆ ಕಾರು ತಡೆದ ಪೊಲೀಸರು: ನಾಮಪತ್ರ ಸಲ್ಲಿಸಲು ಡಿಸಿ ಕಚೇರಿಗೆ ಮಾಜಿ ಸಿಎಂ ಹೆಚ್ಡಿಕೆ ಆಗಮಿಸಿದಾಗ ಡಿಸಿ ಕಚೇರಿಯಿಂದ ಕೆಲವು ಮೀಟರ್ ದೂರದಲ್ಲೇ ಅವರ ಕಾರನ್ನು ಪೊಲೀಸರು ತಡೆದರು. ಈ ಸಂದರ್ಭದಲ್ಲಿ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿ ಪೊಲೀಸರೊಂದಿಗೆ ಕುಮಾರಸ್ವಾಮಿ ಹಾಗೂ ಜೆಡಿಎಸ್ ಮುಖಂಡರು ವಾಗ್ವಾದ ನಡೆಸಿದರು.

ಬಿಎಸ್‌ವೈ, ಸಾವಂತ್‌ಗಾಗಿ ಕಾದು ನಿಂತ ಹೆಚ್ಡಿಕೆ: ಮಂಡ್ಯ ಡಿಸಿ ಕಚೇರಿ ಹೊರಗೆ ನಾಮಪತ್ರ ಸಲ್ಲಿಕೆಗೂ ಮುನ್ನ ಕುಮಾರಸ್ವಾಮಿ ಅವರು ಯಡಿಯೂರಪ್ಪ ಹಾಗೂ ಪ್ರಮೋದ್ ಸಾವಂತ್‌ಗಾಗಿ 15 ನಿಮಿಷಗಳ ಕಾಲ ಕಾದು ನಿಂತರು. ಬಳಿಕ ಕುಮಾರಸ್ವಾಮಿ ಅವರಿಗೆ ಡಿಸಿ ಕಚೇರಿಯಿಂದ ಖುರ್ಚಿ ತಂದುಕೊಡಲಾಯಿತು.

ಮಾತು ತಪ್ಪಿದರೆ ರಾಜಕೀಯದಲ್ಲಿ ಮುಂದುವರೆಯಲ್ಲ

52000 ಕೋಟಿ ಹಣ ಎಲ್ಲಿಂದ ಬಂದಿದೆ. ಜನರ ತೆರಿಗೆ ಹಣವನ್ನು ಗ್ಯಾರಂಟಿ ರೂಪದಲ್ಲಿ ಕೊಡುತ್ತಿರುವ ನೀವು ಗ್ಯಾರಂಟಿ ಯೋಜನೆಗಾಗಿ ಸಾಲ ಮಾಡುತ್ತಿದ್ದು, ಆ ಸಾಲ ತೀರಿಸಲು ಅದನ್ನು ಜನರ ಮೇಲೆಯೇ ಹಾಕುತ್ತೀರಿ. ಈ ಬಗ್ಗೆ ಎಚ್ಚರವಿರಲಿ ಎಂದು ತಿಳಿಸಿದರು.

ಭತ್ತ ನಾಟಿ ಮಾಡಬೇಡಿ ಅಂತಾರೆ: ನೀರಾವರಿ ಕ್ಷೇತ್ರಕ್ಕೆ ಸಿದ್ದರಾಮಯ್ಯ ಯಾವ ಕೊಡುಗೆ ಕೊಟ್ಟಿದ್ದಾರೆ. ಮಂಡ್ಯ ಜಿಲ್ಲೆಯ ಹಲವು ಕಡೆ ಬರದಿಂದ ಕಬ್ಬು ಒಣಗುತ್ತಿದೆ. ಇದಕ್ಕೆ ಕಾರಣ ಇದೇ ಕಾಂಗ್ರೆಸ್ ಸರ್ಕಾರ. ಕದ್ದು ಮುಚ್ಚಿ ತಮಿಳುನಾಡಿಗೆ ನೀರು ಬಿಟ್ಟು ಇದೀಗ ಬರವನ್ನು ತಂದೊಡ್ಡಿದ್ದಾರೆ. ಭತ್ತ ನಾಟಿ ಮಾಡಬೇಡಿ ಎಂದು ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಕೃಷಿ ಸಚಿವರು ಹೇಳುತ್ತಾರೆ. ಇದು ಕಾಂಗ್ರೆಸ್ ಸರ್ಕಾರದ ರೈತಪರ ಕಾಳಜಿ ಎಂದು ಕಿಡಿಕಾರಿದರು.

ರಾಜ್ಯದಲ್ಲೇ ಭಾರಿ ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಿದರೆ ಮಂಡ್ಯ ಜಿಲ್ಲೆ ಹಾಗೂ ರಾಜ್ಯದ ಅಭಿವೃದ್ಧಿಯಾಗಲಿದೆ. ಪ್ರಧಾನಿ ಮೋದಿ ಇಡೀ ದೇಶದ ಅಭಿವೃದ್ಧಿಗೆ ಕಟಿಬದ್ಧರಾಗಿದ್ದು, ಈ ದೇಶದ ಮುಸ್ಲಿಂ ಮತ್ತು ದಲಿತರನ್ನು ರಕ್ಷಿಸುವುದು ಕಾಂಗ್ರೆಸ್ ಅಲ್ಲ. ಇದಕ್ಕೂ ನರೇಂದ್ರ ಮೋದಿ ಅವರ ಅವಶ್ಯಕತೆ ಇದೆ ಎಂದು ಹೇಳಿದರು.

358 ಮಂದಿ ನಾಮಪತ್ರ ಸಲ್ಲಿಕೆ

ಚಿತ್ರದುರ್ಗ(28), ಉಡುಪಿ–ಚಿಕ್ಕಮಗಳೂರು(13), ದಕ್ಷಿಣ ಕನ್ನಡ(11), ಕೋಲಾರ(2), ಚಿಕ್ಕಬಳ್ಳಾಪುರ(36), ಬೆಂಗಳೂರು ದಕ್ಷಿಣ(34), ಬೆಂಗಳೂರು ಕೇಂದ್ರ(32), ಬೆಂಗಳೂರು ಉತ್ತರ (25)ಹಾಗೂ ಬೆಂಗಳೂರು ಗ್ರಾಮಾಂತರ (31)ಲೋಕಸಭಾ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಸಲು ಗುರುವಾರ ಕಡೆಯ ದಿನವಾಗಿತ್ತು. ಡಿ.ಕೆ.ಸುರೇಶ್ (ಕಾಂಗ್ರೆಸ್), ಪ್ರಜ್ವಲ್ ರೇವಣ್ಣ(ಜೆಡಿಎಸ್) ಸೇರಿದಂತೆ ಹಲವು ಅಭ್ಯರ್ಥಿಗಳು ಈಗಾಗಲೇ ನಾಮಪತ್ರ ಸಲ್ಲಿಸಿದ್ದರೂ ಗುರುವಾರ ಮತ್ತೊಂದು ಜೊತೆ ನಾಮಪತ್ರ ಸಲ್ಲಿಸಿದರು. ಬಹುತೇಕ ಎಲ್ಲಾ ಅಭ್ಯರ್ಥಿಗಳು ಉಮೇದು ವಾರಿಕೆ ಸಲ್ಲಿಸುವ ಮುನ್ನ, ಸ್ಥಳೀಯ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ, ತಮ್ಮ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಬಂದು ಉಮೇದುವಾರಿಕೆ ಸಲ್ಲಿಸಿದರು.

ಇನ್ನೂ ಕೆಲವು ಮುಖಂಡರು ಉಮೇದುವಾರಿಕೆ ಸಲ್ಲಿಸಿದ ನಂತರ ಬೃಹತ್ ಸಮಾವೇಶಗಳನ್ನು ನಡೆಸಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಕುಮಾರಸ್ವಾಮಿ ಅವರು, ಮಂಡ್ಯ ಲೋಕಸಭಾ ಕ್ಷೇತ್ರದಿಂದ ಉಮೇದುವಾರಿಕೆ ಸಲ್ಲಿಸುವ ಸಂದರ್ಭದಲ್ಲಿ ಗೋವಾ ಮುಖ್ಯಮಂತ್ರಿ ಡಾ.ಪ್ರಮೋದ್ ಸಾವಂತ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ರಾಜವಂಶಜ ಯದುವೀರ್ ಹಾಗೂ ಮಾಜಿ ಸಚಿವ ಸಿ.ಎಸ್. ಪುಟ್ಟ ರಾಜು ಉಪಸ್ಥಿತರಿದ್ದರು. ನಂತರ ನಡೆದ ಬಹಿರಂಗ ಸಭೆಯಲ್ಲೂ ಯದುವೀರ್ ಅವರನ್ನು ಹೊರತುಪಡಿಸಿ ಉಳಿದ ನಾಯಕರು, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಬೆಂಗಳೂರು ಗ್ರಾಮಾಂತರದಲ್ಲಿ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ತಮ್ಮ ಬೆಂಬಲಿಗರ ಜೊತೆಗೂಡಿ ಮತ್ತೊಂದು ಜೊತೆ ನಾಮಪತ್ರ ಸಲ್ಲಿಸಿದರು.

ಬಿಜೆಪಿ ಅಭ್ಯರ್ಥಿಯಾಗಿ ಹೃದಯ ತಜ್ಞ ಡಾ.ಮಂಜುನಾಥ್, ತಮ್ಮ ಪಕ್ಷದ ಮುಖಂಡರು ಮತ್ತು ಶಾಸಕರ ಜೊತೆಗೂಡಿ ಉಮೇದುವಾರಿಕೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರ ಪತ್ನಿ ಜೊತೆಗಿದ್ದರು. ಚಿತ್ರದುರ್ಗದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಚಂದ್ರಪ್ಪ ನಾಮಪತ್ರ ಸಲ್ಲಿಸುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕ ಟಿ.ಬಿ.ಜಯಚಂದ್ರ ಸೇರಿ ದಂತೆ ಹಲವು ಮುಖಂಡರಿದ್ದರು. ತದನಂತರ ಸಿದ್ದ ರಾಮಯ್ಯ ಹಾಗೂ ಶಿವಕುಮಾರ್ ಕಾಂಗ್ರೆಸ್ ಏರ್ಪಡಿಸಿದ್ದ ಬೃಹತ್ ಸಮಾವೇಶದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಇದೇ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ್ ನಾಮಪತ್ರ ಸಲ್ಲಿ ಸುವ ವೇಳೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಸಕ ಜನಾರ್ದನ ರೆಡ್ಡಿ, ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಸೇರಿದಂತೆ ಪಕ್ಷದ ಹಲವು ಮುಖಂಡರು ಉಪಸ್ಥಿತರಿದ್ದರು. ಹಾಸನ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿರುವ ಸಂಸದ ಪ್ರಜ್ವಲ್ ರೇವಣ್ಣ, ಎರಡನೇ ಬಾರಿಗೆ ಉಮೇದುವಾರಿಕೆ ಸಲ್ಲಿಸುವ ಸಂದರ್ಭದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಚಿವ ಎಚ್.ಕೆ.ಕುಮಾರಸ್ವಾಮಿ ಮತ್ತಿತರರಿದ್ದರು. ಇನ್ನು ಮಂಗಳೂರು ಕ್ಷೇತ್ರದಿಂದ ನಿವೃತ್ತ ಯೋಧ ಬ್ರಿಜೇಶ್ ಚೌಟ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದು, ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಹಾಲಿ ಸಂಸದ ನಳಿನ್‌ಕುಮಾರ್ ಕಟೀಲ್ ಹಾಗೂ ಇತರ ಪ್ರಮುಖ ಕಾರ್ಯಕರ್ತರು ಉಪಸ್ಥಿತರಿದ್ದರು. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ತೇಜಸ್ವಿ ಸೂರ್ಯ ಬಿಜೆಪಿ ಯಿಂದ ಮರು ಆಯ್ಕೆ ಬಯಸಿ ನಾಮ ಪತ್ರ ಸಲ್ಲಿಸಿದ ಸಂದರ್ಭದಲ್ಲಿ ಕೇಂದ್ರ ಸಚಿವ ಅನುರಾಗ್ ಸಿಂಗ್ ಠಾಕೂರ್, ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಸಂಸದ ಜಗ್ಗೇಶ್ ಜೊತೆಯಲ್ಲಿದ್ದರು.

ರಾಜ್ಯದಲ್ಲಿ ಮೊದಲ ಹಂತದಲ್ಲಿ ಚುನಾವಣೆ ನಡೆಯುವ 14 ಕ್ಷೇತ್ರಗಳ ನಾಮಪತ್ರಗಳ ಪರಿಶೀಲನೆ ಶುಕ್ರವಾರ ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳಲು ಏಪ್ರಿಲ್ 8 ಕಡೆಯ ದಿನವಾಗಿದೆ, ಏಪ್ರಿಲ್ 26 ರಂದು ಮತದಾನ ನಡೆಯಲಿದೆ. ಇದರ ಮಧ್ಯೆ ರಾಜ್ಯದ ಉಳಿದ 14 ಕ್ಷೇತ್ರಗಳ ಚುನಾವಣೆಗೆ ಏಪ್ರಿಲ್ 12ರಂದು ಅಧಿಸೂಚನೆ ಹೊರಬೀಳಲಿದ್ದು, ಮೇ 7 ರಂದು ಮತದಾನ ನಡೆಯಲಿದೆ.

ಎಸ್‌ಸಿ ಪಟ್ಟಿಯಿಂದ ಕೆಲ ಜಾತಿ ಕೈಬಿಡಲು ಕೋರಿ ಅರ್ಜಿ

ಕೇಂದ್ರ, ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್



ಬೆಂಗಳೂರು, ಏ.4– ಬೋವಿ, ಕೊರಮ, ಕೊರಚ, ಲಂಬಾಣಿ (ಬಂಜಾರ) ಜಾತಿಗಳನ್ನು ಕರ್ನಾಟಕದ ಪರಿಶಿಷ್ಟ ಜಾತಿ (ಎಸ್ಸಿ)ಗಳ ಪಟ್ಟಿಯಿಂದ ಕೈಬಿಡಬೇಕೆಂದು ಕೋರಿ ಸಲ್ಲಿಸಿರುವ ಪಿಐಎಲ್ ಸಂಬಂಧ ಹೈಕೋರ್ಟ್‌ನಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರ, ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ ಮತ್ತು ಚುನಾವಣಾ ಆಯೋಗಕ್ಕೆ ನೋಟಿಸ್ ನೀಡಲಾಗಿದೆ.

ರಾಯಚೂರು ಜಿಲ್ಲೆಯ ಸಿವಿಲ್ ಎಂಜಿನಿಯರ್, ಸಾಮಾಜಿಕ ಕಾರ್ಯಕರ್ತ ಮಹೇಂದ್ರ ಕುಮಾರ್ ಮಿತ್ರಾ ಸಲ್ಲಿಸಿದ್ದ ಪಿಐಎಲ್ ಸಿಜೆ ಎನ್.ವಿ. ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠದ ಮುಂದೆ ಗುರುವಾರ ವಿಚಾರಣೆಗೆ ಬಂದಿತ್ತು. ಅರ್ಜಿದಾರರ ವಾದ ಆಲಿಸಿದ ಬಳಿಕ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಭಾರತೀಯ ಜನಗಣತಿ ಆಯುಕ್ತರು ಸೇರಿ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿತು.

ಸ್ಪೃಶ್ಯ ಜಾತಿಗಳಾಗಿರುವ ಹಾಗೂ ಪರಿಶಿಷ್ಟ ಜಾತಿಗಳಲ್ಲದ ಲಂಬಾಣಿ (ಬಂಜಾರ), ಕೊರಮ, ಕೊರಚ, ಬೋವಿ ಜಾತಿಗಳನ್ನು ಕರ್ನಾಟಕ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದು ಸಂವಿಧಾನದ ಪರಿಚ್ಛೇದ 14, 16, 17, 46, 243 (ಝಡ್), 330, 332, 341 ಮತ್ತು 366ರ ಉಲ್ಲಂಘನೆಯಾಗಿದೆ. ಈ ಜಾತಿಗಳನ್ನು ಕರ್ನಾಟಕ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಿ ಹೊರಡಿಸಲಾದ ಆದೇಶ ರದ್ದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಕುರಿತ ಮನವಿ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ಸಲ್ಲಿಸಬೇಕು. ಆಯೋಗವು ಆ ಮನವಿ ಪರಿಶೀಲಿಸಿ ಸಂಬಂಧಪಟ್ಟ ಪ್ರಾಧಿಕಾರವಾದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ವರದಿ ಸಲ್ಲಿಸಬೇಕೆಂದು 2020ರ ಫೆ.14 ರಂದು ಆದೇಶಿಸಿತ್ತು ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಕರ್ನಾಟಕ ಪ್ರಸ್ತಾವನೆ ಕಳಿಸಲಿಲ್ಲ: ಸುಪ್ರೀಂ ನಿರ್ದೇಶನದಂತೆ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದೆ. ಅದನ್ನು ಆಧರಿಸಿ 2020ರ ಮಾರ್ಚ್ 12 ರಂದು ಆಯೋಗವು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು, ಕರ್ನಾಟಕ ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ಪರಿಶಿಷ್ಟ ಜಾತಿಯೇತರ ಜಾತಿಗಳನ್ನು ಕೈ ಬಿಡುವ ಕುರಿತು ಪ್ರಸ್ತಾವನೆ ಕಳಿಸುವಂತೆ ತಿಳಿಸಿತ್ತು. ಆದರೆ, ಕರ್ನಾಟಕ ಪ್ರಸ್ತಾವನೆ ಕಳಿಸಲಿಲ್ಲ. ನಂತರ ಇದೇ ಮಾದರಿಯ ಪತ್ರವನ್ನು 2020ರ ಮೇ 14ರಂದು ಮತ್ತೆ ಆಯೋಗ ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿತ್ತು. ಆ ನಂತರ ನಾನು ಮುಖ್ಯಕಾರ್ಯದರ್ಶಿಗಳಿಗೂ ಮನವಿ ಪತ್ರ ನೀಡಿದ್ದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಅಂತಿಮವಾಗಿ 2023ರ ಫೆ1 6ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಆಯೋಗಕ್ಕೆ ಪತ್ರ ಬರೆದು, ಈ ನಾಲ್ಕು ಜಾತಿಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿಯೇ ಉಳಿಸುವುದಾಗಿ ತಿಳಿಸಿದ್ದರು. ಜತೆಗೆ ನನ್ನ ಮನವಿ ತಿರಸ್ಕರಿಸಿದ್ದರು. ನಂತರ 2023ರ ಜು.24ರಂದು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆ. ಈ ವಿಚಾರವನ್ನು ಸೂಕ್ತ ಪರಿಹಾರಕ್ಕಾಗಿ ಹೈಕೋರ್ಟ್ ಮೊರೆ ಹೋಗುವಂತೆ ನನಗೆ ಸೂಚಿಸಿತ್ತು ಎಂದು ಅರ್ಜಿದಾರರು ಕೋರಿದ್ದಾರೆ.

27 ಮಂದಿ ನಾಮಪತ್ರ ಸಲ್ಲಿಕೆ

ಕಾಂಗ್ರೆಸ್‌ನಿಂದ ಸುನೀಲ್ ಬೋಸ್, ಬಹುಜನ ಸಮಾಜ ಪಾರ್ಟಿಯಿಂದ ಎಂ.ಕೃಷ್ಣಮೂರ್ತಿ, ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿಯಿಂದ ಸಿ.ಎಂ.ಕೃಷ್ಣ, ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ)ಯಿಂದ ಬಿ.ಪ್ರಸನ್ನ ಕುಮಾರ್, ಸಮಾಜವಾದಿ ಜನತಾ ಪಾರ್ಟಿ (ಕರ್ನಾಟಕ)ಯಿಂದ ಚಾಮ ದಾಸಯ್ಯ, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ ಪಕ್ಷದಿಂದ ಎಸ್.ಸುಮಾ, ಕೆಆರ್‌ಎಸ್ ಪಕ್ಷದಿಂದ ಕಂದಹಳ್ಳಿ ಗ್ರಾಮದ ಮಹೇಶ್, ಕರ್ನಾಟಕ ಜನತಾ ಪಕ್ಷದಿಂದ ಎಸ್.ನಿಂಗ ರಾಜು, ಪಕ್ಷೇತರ ಅಭ್ಯರ್ಥಿಗಳಾಗಿ ಕೆ.ಸುಭಾಷ್‌ಚಂದ್ರ, ನಟರಾಜು, ಜಿ.ನಿಂಗರಾಜು, ಸಿ.ರಾಜು, ಜೆ.ನಿಂಗರಾಜು, ಬಲ್ಲಯ್ಯ, ಅಂಕಶೆಟ್ಟಿಪುರದ ಸಿ.ಶಂಕರ್, ಗುರುಲಿಂಗಯ್ಯ, ಕೆ.ಸುಭಾಷ್ ಚಂದ್ರ, ಹೆಚ್.ಡಿ.ಕೋಟೆಯ ಸಣ್ಣಸ್ವಾಮಿ, ಜಿ.ಡಿ.ರಾಜಗೋಪಾಲ್, ಎಚ್.ಕೆ.ಸ್ವಾಮಿ, ಸಿದ್ದಯ್ಯನಪುರ ಕೆ.ರಾಜು, ಎಂ.ನಾಗೇಂದ್ರ ಬಾಬು, ಬಿ.ಎಂ.ಮಹದೇವಸ್ವಾಮಿ, ಎಂ.ಪ್ರದೀಪ್‌ಕುಮಾರ್, ಎನ್.ಅಂಬರೀಷ್ ನಾಮಪತ್ರ ಸಲ್ಲಿಸಿದ್ದಾರೆ.

ಮಂಡ್ಯ ವರದಿ: ಮಂಡ್ಯ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ ಅಭ್ಯರ್ಥಿಯಾಗಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಸೇರಿದಂತೆ 27 ಅಭ್ಯರ್ಥಿಗಳು 37 ನಾಮಪತ್ರ ಸಲ್ಲಿಸಿದ್ದಾರೆ. ಕೆಆರ್‌ಎಸ್ ಪಕ್ಷದಿಂದ ಚಂದ್ರಶೇಖರ್, ಕರುನಾಡು ಪಾರ್ಟಿಯ ಬೂದಯ್ಯ, ಎಪಿಪಿಯಿಂದ ಲೋಕೇಶ್, ಲೋಕಶಕ್ತಿ ಪಕ್ಷದಿಂದ ಬಸವರಾಜ್, ಬಿಎಸ್‌ಪಿಯಿಂದ ಶಿವಶಂಕರ್, ಪೂರ್ವಾಂಚಲ್ ಮಹಾ ಪಂಚಾಯತ್ ಪಾರ್ಟಿಯಿಂದ ಹೆಚ್.ಡಿ. ರೇವಣ್ಣ, ಅಖಿಲ ಭಾರತ ಹಿಂದೂ ಮಹಾಸಭಾದಿಂದ ರಂಜಿತ್, ಪಕ್ಷೇತರರಾಗಿ ಯೋಗೇಶ್, ಬೀರೇಶ್, ನಾರಾಯಣ, ಚಿನ್ನಮಾಯಿಗೌಡ, ಚಿಕ್ಕನಂಜಾಚಾರಿ, ಶಂಭುಲಿಂಗೇಗೌಡ, ಸತೀಶ್ ಕುಮಾರ್, ಕೃಷ್ಣ, ಅರುಣ್ ಕುಮಾರ್, ಲೋಲ, ರಾಮಯ್ಯ, ಕೇಶವಾನಂದ, ಚಂದನ್ ಗೌಡ, ಚಿಕ್ಕಯ್ಯ, ಅರವಿಂದ್, ಇಂದು ಕುಮಾರ್ ನಾಮಪತ್ರ ಸಲ್ಲಿಸಿದ್ದಾರೆ. ನಾಳೆ (ಏ.5) ನಾಮಪತ್ರಗಳ ಪರಿಶೀಲನಾ ಕಾರ್ಯ ನಡೆಯಲಿದ್ದು, ಏ.8ರಂದು ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರ ಹಿಂಪಡೆಯಲು ಕಾಲಾವಕಾಶವಿದೆ.

ಜನ–ಜಾನುವಾರುಗಳ ಆರೋಗ್ಯಕ್ಕೆ ಕಂಟಕ ಭೀತಿ

ಓಆರ್‌ಎಸ್, ನಿಂಬೆ ಪಾನಕ ನೀಡಬೇಕು. ಬಟ್ಟೆಗಳನ್ನು ಸಡಿಲಿಸಿ, ತಂಪಾದ ಗಾಳಿಯ ವ್ಯವಸ್ಥೆ ಮಾಡಬೇಕು. ರೋಗ ಲಕ್ಷಣಗಳು ಉಲ್ಬಣಗೊಂಡರೆ, ದೀರ್ಘಕಾಲದವರೆಗೆ ಇದ್ದರೆ ಅಥವಾ ವ್ಯಕ್ತಿಯು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಮದ್ಯಪಾನ, ಕಾಫಿ, ಶೇಖರಿಸಿದ ಪಾನೀಯ ಸೇವನೆಗೆ ನೀಡಬಾರದು.

ಮುಂಜಾಗ್ರತೆ ಕ್ರಮಗಳು: ಸಾಧ್ಯವಾದಷ್ಟು ಮಟ್ಟಿಗೆ ವಿಶೇಷವಾಗಿ ಗರಿಷ್ಠ ತಾಪಮಾನ(ಮ.12ರಿಂದ 3ರವರೆಗೆ)ದ ಅವಧಿಯಲ್ಲಿ ಬಿಸಿಲಿನಲ್ಲಿ ಓಡಾಡುವುದನ್ನು ಆದಷ್ಟು ತಪ್ಪಿಸಬೇಕು. ಕಾಲಕಾಲಕ್ಕೆ ಸಾಕಷ್ಟು ನೀರು ಕುಡಿಯುತ್ತಿರಬೇಕು. ಹಗುರವಾದ ತಿಳಿ ಬಣ್ಣದ ಸಡಿಲವಾದ ಮತ್ತು ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಿಸಿಲಿನಲ್ಲಿ ಹೋಗುವಾಗ ರಕ್ಷಣೆಗೆ ಕನ್ನಡಕಗಳು, ಛತ್ರಿ, ಟೋಪಿ, ಬೂಟುಗಳು ಅಥವಾ ಚಪ್ಪಲಿಗಳನ್ನು ಬಳಸುವುದು. ಹೊರಗಿನ ಉಷ್ಣತೆಯು ಅಧಿಕವಾಗಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸುವುದು. ಪ್ರಯಾಣ ಮಾಡುವಾಗ ನೀರನ್ನು ಜೊತೆಯಲ್ಲಿ ಒಯ್ಯುವುದು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಕಾರ್ಬೋನೇಟೆಡ್ ತಂಪು ಪಾನೀಯಗಳಿಂದ ದೂರ ಉಳಿಯುವುದು. ಸಾಧ್ಯವಾದಷ್ಟು ಬಿಸಿ ಆಹಾರವನ್ನು ಸೇವಿಸುವುದು. ಮೂರ್ಛೆ ಅಥವಾ ಅನಾರೋಗ್ಯಕ್ಕೆ ತಕ್ಷಣ ವೈದ್ಯರನ್ನು ಭೇಟಿ ಮಾಡುವುದು. ನಿಲ್ಲಿಸಿದ ವಾಹನಗಳಿಗೆ ಮಕ್ಕಳನ್ನು ಅಥವಾ ಸಾಕು ಪ್ರಾಣಿಗಳನ್ನು ಬಿಡಬಾರದು. ನಿಂಬೆ ನೀರು, ಮಜ್ಜಿಗೆ ಮುಂತಾದ ಮನೆಯಲ್ಲಿ ತಯಾರಿಸಿದ ಪಾನೀಯಗಳು ಹಾಗೂ ಓಆರ್‌ಎಸ್ ಬಳಸುವುದು. ಸಾಕು ಪ್ರಾಣಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ಒದಗಿಸುವುದು. ಮನೆಯನ್ನು ತಂಪಾಗಿರಿಸಲು ಪರದೆಗಳು, ಶಟರ್‌ಗಳು ಅಥವಾ ಸನ್‌ಶೆಡ್‌ಗಳನ್ನು ಬಳಸುವುದು ಹಾಗೂ ಆಗಾಗ್ಗೆ ತಣ್ಣೀರು ಸ್ನಾನ ಮಾಡುವುದು. ಹೊರಗೆ ಹೋಗುವಾಗ ನೀರಿನ ಬಾಟಲಿ, ಛತ್ರಿ, ಟೋಪಿ, ಕ್ಯಾಪ್, ಹೆಡ್‌ಕವರ್, ಹ್ಯಾಂಡ್ ಟವೆಲ್, ಎಲೆಕ್ಟ್ರೋಲೈಟ್, ಗ್ಲೂಕೋಸ್, ಓಆರ್‌ಎಸ್ ಒಳಗೊಂಡ ಕಿಟ್ ಒಯ್ಯುವುದು ಉತ್ತಮ. ಜನ–ಜಾನುವಾರಿಗಳಿಗೆ ಸಮರ್ಪಕವಾಗಿ ಕುಡಿಯುವ ನೀರು, ಆರೋಗ್ಯ ಸೇವೆ ಕಲ್ಪಿಸುವುದರ ಜೊತೆಗೆ ಬೆಂಕಿ ಅವಘಡ ತಪ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಲು ಜಿಲ್ಲಾಡಳಿತಕ್ಕೂ ಸರ್ಕಾರ ಸೂಚನೆ ನೀಡಿದೆ.

ಇಂದಿನಿಂದ ಮೈಸೂರು–ಚೆನ್ನೈ ನಡುವೆ ಮತ್ತೊಂದು 'ವಂದೇ ಭಾರತ್' ರೈಲು ಸಂಚಾರ

ಮೈಸೂರು, ಏ.4(ಎಸ್‌ಬಿಡಿ)– ಮೈಸೂರು–ಚೆನ್ನೈ ನಡುವೆ ಶುಕ್ರವಾರ(ಏ.5)ದಿಂದ ಎರಡನೇ ಹೊಸ 'ವಂದೇ ಭಾರತ್ ಎಕ್ಸ್‌ಪ್ರೆಸ್' ಸಂಚಾರ ಆರಂಭಿಸಲಿದೆ. ಮೈಸೂರು ರೈಲು ನಿಲ್ದಾಣದಿಂದ ಬೆಳಗ್ಗೆ 6ಕ್ಕೆ ಹೊರಡುವ ಈ ರೈಲು(ಸಂಖ್ಯೆ 20663) ಮಧ್ಯಾಹ್ನ 12.25ಕ್ಕೆ ಚೆನ್ನೈ ಸೆಂಟ್ರಲ್ ತಲುಪಲಿದೆ. ಅದೇ ದಿನ ಸಂಜೆ 5ಕ್ಕೆ ಚೆನ್ನೈನಿಂದ ಹೊರಟು(20664) ರಾತ್ರಿ 11.30ಕ್ಕೆ ಮೈಸೂರು ನಿಲ್ದಾಣಕ್ಕೆ ಆಗಮಿಸಲಿದೆ. ಪ್ರಧಾನಿ ಮೋದಿ ಅವರು ಮೈಸೂರು–ಚೆನ್ನೈ ಸೇರಿದಂತೆ 10 ಮಾರ್ಗಗಳಲ್ಲಿ ಹೊಸ ವಂದೇ ಭಾರತ್ ರೈಲು ಸಂಚಾರಕ್ಕೆ ಮಾ.12ರಂದು ಚಾಲನೆ ನೀಡಿದ್ದರು. ಮಾ.14ರಿಂದ ಈವರೆಗೆ ತಮಿಳುನಾಡಿನ ಕಾಟಪಡಿಯಿಂದ ಕೆ.ಆರ್.ಪುರ ನಡುವೆ ಮಾತ್ರ ಸಂಚರಿಸುತ್ತಿದ್ದ ಈ ರೈಲು ಶುಕ್ರವಾರದಿಂದ ಮೈಸೂರು–ಚೆನ್ನೈ ನಡುವೆ ಪೂರ್ಣ ಪ್ರಮಾಣದಲ್ಲಿ ಸಂಚರಿಸಲಿದೆ. ಈ ರೈಲು ಚೆನ್ನೈನಲ್ಲಿರುವ ದಕ್ಷಿಣ ರೈಲ್ವೆಗೆ ಸೇರಿದ್ದಾಗಿದೆ.

ಜಿಟಿಟಿಸಿಯ 76 ಹುದ್ದೆ; ಬಿಎಂಟಿಸಿ 2500 ಕಂಡಕ್ಟರ್ ಹುದ್ದೆ ಭರ್ತಿಗೆ ಅಧಿಸೂಚನೆ

ಬೆಂಗಳೂರು, ಏ.4(ಕೆಎಂಶಿ)– ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ)ಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಧಿಸೂಚನೆ ಹೊರಡಿಸಿದೆ. ಜಿಟಿಟಿಸಿಯಲ್ಲಿ 76 ಹಾಗೂ ಬಿಎಂಟಿಸಿಯಲ್ಲಿ 2,500 ಕಂಡಕ್ಟರ್ ಹುದ್ದೆಗೆ ಅಧಿಸೂಚನೆ ಹೊರಡಿಸಿದ್ದು, ಅರ್ಜಿ ಸಲ್ಲಿಸಲು ಆನ್‌ಲೈನ್ ಲಿಂಕ್ ಅನ್ನು ಈ ತಿಂಗಳ 19ರಂದು ಬಿಡುಗಡೆ ಮಾಡಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಜಿ ಸಲ್ಲಿಸಲು ಮೇ 18 ಕೊನೆ ದಿನವಾಗಿರುತ್ತದೆ. ವಿವರಗಳಿಗೆ ಪ್ರಾಧಿಕಾರದ ಜಾಲತಾಣ ವೀಕ್ಷಿಸಬಹುದಾಗಿದೆ.



ಏ.7, ಮೈಸೂರಲ್ಲಿ 'ಏಳು ಸಮುದ್ರದಾಚೆ' ಮೂಡಲಪಾಯ ಯಕ್ಷಗಾನ

ಮೈಸೂರು, ಏ.4(ಜಿಎ)–ಮೈಸೂರಿನ ಯಕ್ಷರಂಗ ತಂಡದಿಂದ ಏ.7ರಂದು ಸಂಜೆ 6.30ಕ್ಕೆ ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ 'ಏಳು ಸಮುದ್ರದಾಚೆ' ಮೂಡಲ ಪಾಯ ಯಕ್ಷಗಾನ ಆಯೋಜಿಸಲಾಗಿದೆ.

ಯಕ್ಷಗಾನ ನಿರ್ದೇಶಕ ಡಿ.ತಿಪ್ಪಣ್ಣ ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಭೀಮಯ್ಯ ಅವರ ಭಾಗವತಿಗೆಯಲ್ಲಿ, ಡಿ.ಅಶ್ವತ್ಥ್ ಕದಂಬ ವಸ್ತ್ರಾಲಂಕಾರದಲ್ಲಿ ಮೂಡಿಬರುತ್ತಿರುವ 'ಏಳು ಸಮುದ್ರದಾಚೆ' ಯಕ್ಷಗಾನಕ್ಕೆ ಜಾನಪದ ವಿದ್ವಾಂಸ ಕಾಳೇಗೌಡ ನಾಗವಾರ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ಜಾನಪದ ತಜ್ಞ ಯು.ಎಸ್.ರಾಮಣ್ಣ ಆಗಮಿಸುವರು ಎಂದರು.

ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಮಾತನಾಡಿ, ಮೂಡಲಪಾಯ ಯಕ್ಷಗಾನ ಕಲೆ ನಶಿಸುತ್ತಿದ್ದು, ಸಂರಕ್ಷಿಸಬೇಕಾದ ಅಗತ್ಯವಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಗತ್ಯ ಸಹಕಾರ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಯು.ಎಸ್.ರಾಮಣ್ಣ, ಕಲಾವಿದೆ ಪವಿತ್ರಾ ಫಣಿ, ಡಿ.ಅಶ್ವಥ್ ಕದಂಬ ಉಪಸ್ಥಿತರಿದ್ದರು.

ಎಡಿನ್ ಕ್ರಿಕೆಟ್ ಲೀಗ್ ಅಂತಿಮ ಪಂದ್ಯಗಳು

ಮೈಸೂರು, ಏ.4(ಜಿಎ)–ಎಡಿನ್ ಬ್ರಿಡ್ಜ್ ಫೌಂಡೇಶನ್ ಮತ್ತು ಮೈಸೂರು ಎಚ್ ಆರ್ ಫೋರಂ ಸಂಸ್ಥೆಯಿಂದ ಹೂಟಗಳ್ಳಿ ಕೈಗಾರಿಕಾ ಪ್ರದೇಶದ ಎನ್‌ಐಇ ನಾರ್ತ್ ಕ್ರಿಕೆಟ್ ಮೈದಾನದಲ್ಲಿ ಎನ್‌ಐಇ ಮೈಸೂರು ಎಡಿನ್ ಕ್ರಿಕೆಟ್ ಲೀಗ್ ಅಂತಿಮ ಪಂದ್ಯಗಳು ಏ.6 ಮತ್ತು 7ರಂದು ನಡೆಯಲಿದೆ ಎಂದು ಎಂ.ಫಣೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಅಂತಿಮ ಪಂದ್ಯಗಳಿಗೆ ಭಾರತೀಯ ರಾಷ್ಟ್ರೀಯ ಅಂಧರ ಕ್ರಿಕೆಟ್ ತಂಡದ ಮಾಜಿ ನಾಯಕ ಶೇಖರ್ ನಾಯ್ಕ್ ಏ.6ರಂದು ಬೆಳಗ್ಗೆ 10ಕ್ಕೆ ಚಾಂಪಿಯನ್ ಸುತ್ತನ್ನು ಉದ್ಘಾಟಿಸುವರು. ಕ್ರಿಕೆಟ್ ಪಂದ್ಯಾವಳಿಯಿಂದ ಸಂಗ್ರಹವಾದ ಹಣವನ್ನು ಶೇಖರ್ ನಾಯ್ಕ್ ಫೌಂಡೇಶನ್ ಮತ್ತು ವಿಶ್ ಬಾಕ್ಸ್ ಸಂಸ್ಥೆಗೆ ಟೂರ್ನಿ ಉದ್ದೇಶದ ಭಾಗವಾಗಿ 45 ಸಾವಿರ ಸಹಾಯಧನ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಫೋರ್ ಫ್ರಂಟ್ ಹೆಲ್ತ್‌ಕೇರ್ ಸಂಸ್ಥೆ ಮುಖ್ಯ ಮಾನವ ಸಂಪನ್ಮೂಲಾಧಿಕಾರಿ ಸೂರಜ್, ಅರಸ್ ಕಾರ್ ಸಂಸ್ಥೆಯ ಮಾರಾಟ ವಿಭಾಗದ ವ್ಯವಸ್ಥಾಪಕ ಕಿಶನ್, ಟಾಟಾ ಮೋಟಾರ್ಸ್ ಮಾರಾಟ ವಿಭಾಗದ ವ್ಯವಸ್ಥಾಪಕ ಮೇದಪ್ಪ ಉಪಸ್ಥಿತರಿದ್ದರು.

ಏ.21, ಮೈಸೂರಲ್ಲಿ ಶ್ರವಣ ತಪಾಸಣಾ ಶಿಬಿರ



ಮೈಸೂರು, ಏ.4(ಜಿಎ)–ಮೈಸೂರಿನ ರೆಸೋನೆನ್ಸ್ ವಾಕ್ ಮತ್ತು ಶ್ರವಣ ಕ್ಲಿನಿಕ್ ವತಿಯಿಂದ ಸಂಸ್ಥೆಯ ವಿಜಯನಗರ ಮತ್ತು ಕುವೆಂಪುನಗರದಲ್ಲಿನ ಶಾಖೆಗಳಲ್ಲಿ ಏ.21ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಶ್ರವಣ ತಪಾಸಣೆ ಉಚಿತ ಶಿಬಿರ ಆಯೋಜಿಸಲಾಗಿದೆ. ಆಸ್ಪತ್ರೆಯ ಶ್ರವಣ ಶಾಸ್ತ್ರಜ್ಞೆ ನಯನ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಕ್ಲಿನಿಕ್‌ಗಳಲ್ಲಿ ಏ.22ರಿಂದ 26ರವರೆಗೆ ಶ್ರವಣ ಸಾಧನಗಳ ಧರಿಸುವವರಿಗೆ ರಿಯಲ್ ಇಯರ್ ಮೆಜರ್ಮೆಂಟ್ ಕೂಡ ನಡೆಯಲಿದ್ದು, ಬೆಳಗ್ಗೆ 10ರಿಂದ ಸಂಜೆ 7ರವರೆಗೆ ಆಗಮಿಸಿ ಪ್ರಯೋಜನ ಪಡೆಯಬಹುದು. ಮಾಹಿತಿ ಮತ್ತು ನೋಂದಣಿಗೆ 80500 55133, 90353 83735 ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಆಸ್ಪತ್ರೆಯ ಸ್ಥಾಪಕ ಆದಿತ್ಯ, ಸಿಬ್ಬಂದಿ ಪವನ್, ಶರಣ್ಯಾ ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆ: ಚಿತ್ರ ಬಿಡಿಸುವ ಸ್ಪರ್ಧೆ

ಮೈಸೂರು,ಏ.4– ಲೋಕಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸಲು ಸ್ವೀಪ್ ಸಮಿತಿಯ ವತಿಯಿಂದ ಏ.8 ರಂದು ಬೆಳಿಗ್ಗೆ 9 ಗಂಟೆಯಿಂದ 10 ರವರೆಗೆ ಮತದಾನದ ಮಹತ್ವ, ಮತದಾನದ ಮೌಲ್ಯ ಹಾಗೂ ನೈತಿಕ ಮತದಾನ ಬಗ್ಗೆ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಯಾವುದೇ ವಯೋಮಿತಿ ಇರುವುದಿಲ್ಲ. ವಿಜೇತ ಮೂವರು ಸ್ಪರ್ಧಿಗಳಿಗೆ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಹಾಗಾಗಿ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಹುದಾಗಿದೆ ಎಂದು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರಾದ ಕೆ.ಎಂ. ಗಾಯತ್ರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.21, ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಏ.4–ನಂಜನಗೂಡು ತಾಲೂಕು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಏ.21ರಂದು ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧು–ವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ಆಸಕ್ತರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232 217, 232033, 9741342222, ಸಂಪರ್ಕಿಸಿ, ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ.

ಮಂಡ್ಯದಲ್ಲಿ ನೀರಾವರಿ ಯೋಜನೆ, ಉದ್ಯೋಗ ಸೃಷ್ಟಿಗೆ ಒತ್ತು: ಸ್ಟಾರ್ ಚಂದ್ರು

ಮಂಡ್ಯ ಜನಕ್ಕೆ ಕಾಂಗ್ರೆಸ್ ಅಭ್ಯರ್ಥಿಯ ಭರವಸೆ

ಮಳವಳ್ಳಿ: ನನಗೆ ರಾಜಕೀಯ ಹೊಸದಲ್ಲ. ಇಷ್ಟು ದಿನ ತೆರೆ ಹಿಂದೆ ಇದ್ದೆ. ಈಗ ನೇರವಾಗಿ ಕಣಕ್ಕಿಳಿದಿದ್ದೇನೆ. ಜನಸೇವೆ ಮಾಡಲೆಂದು ಬಂದಿದ್ದೇನೆ. ಜನ ಆಶೀರ್ವಾದ ಮಾಡಲಿದ್ದಾರೆ ಎಂಬ ವಿಶ್ವಾಸ ಇದೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹೇಳಿದರು.

ಬಿ.ಜಿ.ಪುರ ಹೊರಮಠಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನಸೇವೆ ಮಾಡಲು ಅವಕಾಶ ಸಿಕ್ಕಿದೆ. ಯುವಕರಿಗೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿ, ಕೈಗಾರಿಕೆಗಳ ಸ್ಥಾಪನೆ, ನೀರಾವರಿ ಯೋಜನೆಗಳಿಗೆ ಕೇಂದ್ರದಿಂದ ಅನುದಾನ ತಂದು ಸಮಸ್ಯೆ ನಿವಾರಣೆಗೆ ಯತ್ನಿಸಲಾಗುವುದು ಎಂದರು.

ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲಾ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಗೆದ್ದೇ ಗೆಲ್ಲುತ್ತೇನೆ. ನನ್ನ ಆತ್ಮವಿಶ್ವಾಸ ಡಬಲ್ ಆಗಿದೆ. ನಾನು ಮಂಡ್ಯದ ಮಣ್ಣಿನ ಮಗ. ನನ್ನ ಗೆಲುವು ರೈತರ ಗೆಲುವು. ಇದು ನನ್ನ ಕರ್ಮಭೂಮಿ. ನನ್ನ ಜನ ನನ್ನ ಕೈಬಿಡಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ನರೇಂದ್ರ ಸ್ವಾಮಿ, ವಿಧಾನಪರಿಷತ್ ಮಾಜಿ ಸದಸ್ಯರಾದ ಮರಿತಿಬ್ಬೇಗೌಡ, ಮಾಜಿ ಜಿಪಂ ಸದಸ್ಯ ವಿಶ್ವಾಸ್, ಎಪಿಎಂಸಿ ಮಾಜಿ ಅಧ್ಯಕ್ಷ ಅಂಬರೀಶ್, ಮಳವಳ್ಳಿ ಕಾಂಗ್ರೆಸ್ ಖಜಾಂಜಿ ಮಹದೇವ್, ಮಳವಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಪಿ.ರಾಜು, ಕುಂದೂರು ಪ್ರಕಾಶ್, ಮಹೇಶ್, ಅನಿಲ್ ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸ್ಟಾರ್ ಚಂದ್ರುಗೆ ಮಠಾಧೀಶರ ಆಶೀರ್ವಾದ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ತಾಲೂಕಿನ ನಾನಾ ಮಠಗಳಿಗೆ ಭೇಟಿ ನೀಡಿ ಮಠಾಧೀಶರ ಆಶೀರ್ವಾದ ಪಡೆದರು. ಅಲಸಳ್ಳಿ ಗವಿ ಮಠಕ್ಕೆ ಭೇಟಿ ನೀಡಿ ಮಠಾಧ್ಯಕ್ಷರಾದ ಶ್ರೀ ಷಡಕ್ಷರಿ ಸ್ವಾಮಿ ಹಾಗೂ ಹೆಬ್ಬಿ ಪ್ರಭುಲಿಂಗ ಸ್ವಾಮಿ, ಶಂಭುಲಿಂಗ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು. ಕುಂದೂರು ಬೆಟ್ಟದ ರಸಸಿದ್ದೇಶ್ವರ ಮಠದ ಅಧ್ಯಕ್ಷರಾದ ಶ್ರೀ ನಂಜುಂಡ ಸ್ವಾಮಿ, ಬಿ.ಜಿ.ಪುರ ಹೊರಮಠದ ಚಂದ್ರಶೇಖರ್ ಮಹಾಸ್ವಾಮಿಗಳು, ಮಂಟೇಸ್ವಾಮಿ ಮಠದ ಶ್ರೀ ಜ್ಞಾನೇಶ್ ಮಹಾಸ್ವಾಮಿಗಳ ಭೇಟಿ ಮಾಡಿ ಆಶೀರ್ವಾದ ಪಡೆದರು.

ಸಮಾಜದ ಏಳಿಗೆಯಲ್ಲಿ ಮಠಗಳ ಪಾತ್ರ ಅತ್ಯಂತ ಪ್ರಮುಖವಾದದ್ದು. ಶೈಕ್ಷಣಿಕ ಕ್ರಾಂತಿ ಉಂಟುಮಾಡುವಲ್ಲಿ ಮಠಗಳ ಪಾತ್ರಅಗಾಧವಾದದ್ದು. ಗ್ರಾಮೀಣ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು. ಶಾಲಾ, ಕಾಲೇಜು ಗಳ ಉನ್ನತೀಕರಿಸುವ ಕನಸು ಕಂಡಿದ್ದು, ಇದಕ್ಕೆ ಮಠಾಧೀಶರ ಆಶೀರ್ವಾದಬೇಕೆಂದು ಕೋರಿದರು.

ನಾನಾ ಸಮುದಾಯದ ಮುಖಂಡರ ಭೇಟಿ: ಮಳವಳ್ಳಿ ತಾಲೂಕಿನ ಉಪ್ಪಾರ ಸಮಾಜ, ಸವಿತಾ ಸಮಾಜ, ಮಡಿವಾಳ, ಬೆಸ್ತ ಸಮಾಜ, ಕ್ರೈಸ್ತ ಸಮುದಾಯದ ಮುಖಂಡರನ್ನು ಭೇಟಿ ಮಾಡಿದ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಬೆಂಬಲ ಕೋರಿದರು.

ತಳ ಸಮುದಾಯಗಳ ಅಭಿವೃದ್ಧಿಗಾಗಿ ಕಾಂಗ್ರೆಸ್ ಹಲವಾರು ಯೋಜನೆಗಳನ್ನು ತಂದಿದೆ ಎಲ್ಲಾ ವರ್ಗದವರನ್ನು ಒಟ್ಟಿಗೆ ಕರೆದೊಯ್ಯುವ ಪಕ್ಷ ಕಾಂಗ್ರೆಸ್. ಹೀಗಾಗಿ ಈ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿ ಕಾಂಗ್ರೆಸ್ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.



ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಅವರು ಮಠಾಧೀಶರನ್ನು ಸನ್ಮಾನಿಸಿ, ಆಶೀರ್ವಾದ ಪಡೆದರು.



ಮೈಸೂರಿನ ವಕೀಲರ ಸಂಘದ ಯುವ ವಕೀಲರು ಮೈಸೂರು ವಕೀಲರ ಸಂಘದ ನೂತನ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಚಂದ್ರಶೇಖರ ಅವರನ್ನು ಸನ್ಮಾನಿಸಿದರು. ಇವರ ಜೊತೆಗೆ ಎಸ್.ಲೋಕೇಶ್ ಅವರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿರಿಯ ವಕೀಲರೂ ಆದ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರಾದ ಎಚ್.ಎನ್. ವೆಂಕಟೇಶ್, ಹಿರಿಯ ವಕೀಲ ಎಂ.ಡಿ.ಹರೀಶ್.ಕುಮಾರ್ ಹೆಗ್ಡೆ ಅವರನ್ನು ಸಹ ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ವಕೀಲರ ಸಂಘದ ಯುವ ವಕೀಲರಾದ ಗಿರೀಶ್ ಮಾಂಬಳ್ಳಿ, ಅಶೋಕಪುರಂ ಜಯಶಂಕರ್, ಪೃಥ್ವಿರಾಜ್, ಹರೀಶ್ ಕುಮಾರ್, ಶಿವಣ್ಣ, ಭುಗತಗಳ್ಳಿ ಪ್ರಶಾಂತ್ ರಾಜು, ವಿನಾಯಕ, ಪಾಂಡು ರಂಗನಾಥ್, ಸಂತೋಷ್, ರವಿ ಸಿದ್ದ ಉಪಸ್ಥಿತರಿದ್ದರು.

ಮಹಿಳಾ ಮೀಸಲಾತಿ ಮೂಲಕ ಬಿಜೆಪಿ ಮಹಾ ಕೊಡುಗೆ ನೀಡಿದೆ



ಮೈಸೂರು, ಏ. 4– ದೇಶದಲ್ಲಿಂದು ಮಹಿಳಾ ಶಕ್ತಿ ಸಮರ್ಥವಾಗಿದೆ. ಮಹಿಳೆಯರಿಗೆ ರಾಜಕೀಯವಾಗಿ ಮೀಸಲಾತಿ ನೀಡಲು ಮಹತ್ವದ ಯೋಜನೆಯನ್ನು ಬಿಜೆಪಿ ರೂಪಿಸಿದೆ. ಯೋಜನೆ ಜಾರಿಗೆ ಬಂದು ಅತೀ ಹೆಚ್ಚು ಮಹಿಳಾ ಸಂಸದರು ಆಯ್ಕೆ ಆಗಲಿದ್ದಾರೆ ಎಂದು ಬಿಜೆಪಿಯ ಕೆ.ಆರ್. ಕ್ಷೇತ್ರದ ಅಧ್ಯಕ್ಷ ಗೋಪಾಲರಾಜ್ ಅರಸ್ ಹೇಳಿದರು.

ಕೆ.ಆರ್.ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೆ.ಆರ್.ಕ್ಷೇತ್ರದ ಮಹಿಳಾ ಮೋರ್ಚಾಕ್ಕೆ ನೇಮಕಗೊಂಡಿರುವ ಮಹಿಳೆಯರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಸಾಕಷ್ಟು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಇದು ಕೇವಲ ಚುನಾವಣೆ ಅಲ್ಲ. ಇದು ಭವಿಷ್ಯದ ಯುವ ನಾಯಕರನ್ನು ರೂಪಿಸುವ ಚುನಾವಣೆ ಆಗಿದೆ ಎಂದರು.

ಕೆ.ಆರ್.ಕ್ಷೇತ್ರದ ಮಹಿಳಾ ಮೋರ್ಚಾದ ವಿವಿಧ ಜವಾಬ್ದಾರಿ ವಹಿಸಿಕೊಂಡ ಕ್ಷೇತ್ರದ ಅಧ್ಯಕ್ಷರಾದ ಸರ್ವಮಂಗಳ, ಆಶಾ ಲಕ್ಷ್ಮಿ ನಾರಾಯಣ್, ರೂಪ, ಕಾವೇರಿ ನಾಗರಾಜ್, ಪಾಲಿಕೆ ಮಾಜಿ ಸದಸ್ಯರಾದ ಸೌಮ್ಯ ಉಮೇಶ್, ರೇಖಾ, ಜ್ಯೋತಿ ರವಿ, ಮೀನಾ, ಮತ್ತು ನಾಗಶ್ರೀ ಸುಚಿಂದ್ರ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ಮೈಸೂರು ನಗರ ಕಾರ್ಯದರ್ಶಿ ಎಂ.ಆರ್.ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಜಯರಾಮ್, ಪಾಲಿಕೆ ಮಾಜಿ ಸದಸ್ಯ ಬಿ.ವಿ. ಮಂಜುನಾಥ್, ಸೌಭಾಗ್ಯ ಮೂರ್ತಿ, ವಾರ್ಡ್ ಅಧ್ಯಕ್ಷ ಮಂಜು, ಚೇತನ್, ವಿಶ್ವ ಇನ್ನಿತರರು ಹಾಜರಿದ್ದರು.

ಯುವ ಮತದಾರರು ಕಡ್ಡಾಯವಾಗಿ ಮತದಾನ ಮಾಡಿ

ಪಿರಿಯಾಪಟ್ಟಣ ತಾಲೂಕಿನ ಸಹಾಯಕ ಚುನಾವಣಾಧಿಕಾರಿ ಜಿ.ಡಿ.ಶೇಖರ್ ಸಲಹೆ



ಮೈಸೂರು,ಏ.4–ಯುವ ಮತದಾರರು ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ದೇಶ ಕಟ್ಟುವ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಸಹಾಯಕ ಚುನಾವಣಾಧಿಕಾರಿ ಜಿ.ಡಿ.ಶೇಖರ್ ಸಲಹೆ ನೀಡಿದರು.

ಪಿರಿಯಾಪಟ್ಟಣ ತಾಲೂಕಿನ ಅರಸು ಭವನದಲ್ಲಿ ತಾಲೂಕು ಸ್ವೀಪ್ ಸಮಿತಿ, ಪುರಸಭೆ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಯೋಜಿಸಿದ್ದ 'ಮತದಾನ ಜಾಗೃತಿ ಕಾರ್ಯಕ್ರಮ'ದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಯುವಕರು ಪ್ರಜಾಪ್ರಭುತ್ವದಲ್ಲಿ ಮತದಾನದ ಮೌಲ್ಯವನ್ನು ಅರಿತುಕೊಳ್ಳಬೇಕು. ಒಂದೊಂದು ಮತಕ್ಕೂ ಬೆಲೆಯಿದೆ. ಒಂದು ಸದೃಢ ದೇಶವನ್ನು ಕಟ್ಟುವ ನಿಟ್ಟಿನಲ್ಲಿ ಮತದಾನವು ಪ್ರಮುಖ ಪಾತ್ರವಾಗಿದೆ. ಹೀಗಾಗಿ, ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದರು.

ಯುವಕರು ತಪ್ಪದೇ ಮತದಾನ ಮಾಡಬೇಕು ಅದರ ಜೊತೆಗೆ ತಮ್ಮ ಕುಟುಂಬದ ಹಾಗೂ ಸುತ್ತಮುತ್ತಲಿನ ಜನರನ್ನು ಕೂಡ ಕಡ್ಡಾಯವಾಗಿ ಮತದಾನ ಮಾಡುವಂತೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ತಾಲೂಕು ಸ್ವೀಪ್ ಸಮಿತಿ ಅಧ್ಯಕ್ಷರು, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಡಿ.ಬಿ. ಸುನೀಲ್‌ಕುಮಾರ್ ಮಾತನಾಡಿ, ಮತದಾನ ಮಾಡುವುದು ನಮ್ಮ ಹಕ್ಕು. ಅದನ್ನು ಚಲಾಯಿಸಿದಾಗ ಮಾತ್ರ ಆ ಹಕ್ಕಿಗೆ ಅರ್ಥ ಬರುವುದು ಎಂದರು.

ವಿಎಚ್‌ಎ (ವೋಟರ್ ಹೆಲ್ಪ್ ಲೈನ್) ಆಪ್ ಡೌನ್ಲೋಡ್ ಮಾಡಿಕೊಳ್ಳುವ ಮೂಲಕ ಹೊಸದಾಗಿ ಗುರುತಿನ ಚೀಟಿಗೆ ಅರ್ಜಿ ಸಲ್ಲಿಸಬಹುದು. ಗುರುತಿನ ಚೀಟಿಯಲ್ಲಿ ತಪ್ಪಿದ್ದಲ್ಲಿ ತಿದ್ದುಪಡಿಗೂ ಅವಕಾಶವಿದೆ. ಅದಲ್ಲದೇ, ಅಭ್ಯರ್ಥಿಗಳ ಮಾಹಿತಿಯು ಕೂಡ ಲಭ್ಯವಿದ್ದು, ಈ ಆಪ್ ಡೌನ್ಲೋಡ್ ಮಾಡಿಕೊಳ್ಳುವ ಮೂಲಕ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮಾಹಿತಿ ನೀಡಿದರು.

ಪ್ರತಿಯೊಬ್ಬರು ಮತದಾನ ಮಾಡಲಿ ಎಂಬ ಉದ್ದೇಶದಿಂದ ಆ ದಿನ ರಜೆ ನೀಡಲಾಗುತ್ತದೆ. ಆದರೆ, ಕೆಲವರು ರಜೆಯನ್ನು ಮೋಜಿನಲ್ಲಿ ಕಳೆಯಲು ಪ್ರಯತ್ನಿಸುತ್ತಾರೆ ಇದು ತಪ್ಪು. ಇದರಿಂದ ಭವಿಷ್ಯದಲ್ಲಿ ಕೊರಗುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಹೇಳಿದರು.

ವ್ಯವಸ್ಥೆಯನ್ನು ದೂರುವ ಮೊದಲು ನಾವು ನಮ್ಮ ಹಕ್ಕು, ಕರ್ತವ್ಯಗಳನ್ನು ಪ್ರಮಾಣಿಕವಾಗಿ ಪೂರೈಸಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಯಾವುದೇ ಆಮಿಷಗಳಿಗೆ ಒಳಗಾಗದೇ ಕಡ್ಡಾಯವಾಗಿ ಮತದಾನ ಮಾಡಬೇಕು ಹಾಗೂ ಇತರರಿಗೂ ಮತದಾನ ಮಾಡುವಂತೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ತಹಶೀಲ್ದಾರ್ ಸುರೇಂದ್ರಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಮತದಾನದ ಮಹತ್ವವನ್ನು ತಮ್ಮ ಕುಟುಂಬದ ಸದಸ್ಯರಿಗೆ ತಿಳಿಸುವುದರ ಜೊತೆಗೆ ಯಾವುದೇ ಆಮಿಷಕ್ಕೆ ಒಳಗಾಗದೇ ಮತದಾನ ಮಾಡುವಂತೆ ಮನವಿ ಮಾಡಬೇಕು ಎಂದರು. ವೇದಿಕೆ ಕಾರ್ಯಕ್ರಮದ ಬಳಿಕ ಅರಸು ಭವನದ ಮುಂಭಾಗದಿಂದ ಜಾಥ ನಡೆಸಿ ಬೆಟ್ಟದಪುರ ವೃತ್ತದಲ್ಲಿ ಮಾನವ ಸರಪಳಿಯನ್ನು ನಿರ್ಮಿಸುವ ಮೂಲಕ ಸಾರ್ವಜನಿಕರಿಗೆ ಮತದಾನ ಕುರಿತು ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಮುತ್ತಪ್ಪ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಅಂಬಿಕಾ ಇನ್ನಿತರರು ಉಪಸ್ಥಿತರಿದ್ದರು.

ಚೆಕ್‌ಪೋಸ್ಟ್‌ನಲ್ಲಿ ಖುದ್ದು ತಪಾಸಣೆ ನಡೆಸಿದ ಡಿಸಿ

ಕುಶಾಲನಗರದ ಕೊಪ್ಪ ವಾಹನ ತಪಾಸಣೆ ಕೇಂದ್ರಕ್ಕೆ ವೆಂಕಟ್ ರಾಜಾ ಭೇಟಿ

ಮಡಿಕೇರಿ, ಏ.4– ಲೋಕಸಭಾ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಗುರುವಾರ ಕೊಡಗು–ಮೈಸೂರು ಗಡಿಭಾಗ ಕುಶಾಲನಗರದ ಕೊಪ್ಪ ವಾಹನ ತಪಾಸಣೆ ಕೇಂದ್ರಕ್ಕೆ ಭೇಟಿ ನೀಡಿ, ಖುದ್ದು ತಪಾಸಣಾ ಕಾರ್ಯ ಪರಿಶೀಲಿಸಿದರು.

ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ತಾವೇ ಖುದ್ದಾಗಿ ಪ್ರಯಾಣಿಕರು, ಗೂಡ್ಸ್ ವಾಹನ ಸೇರಿದಂತೆ ಎಲ್ಲಾ ಮಾದರಿಯ ವಾಹನಗಳನ್ನು ಪರಿಶೀಲನೆ ನಡೆಸಿದರು. ವಾಹನದಲ್ಲಿದ್ದ ಪ್ರಯಾಣಿಕರು ಹೋಗುತ್ತಿರುವ ಊರುಗಳ ಬಗ್ಗೆಯೂ ಮಾಹಿತಿ ಪಡೆದರು. ಚೆಕ್‌ಪೋಸ್ಟ್‌ನಲ್ಲಿ ಚುನಾವಣಾ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಚರ್ಚೆ ನಡೆಸಿ, ಕೆಲ ಸೂಚನೆಗಳನ್ನು ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಡಗಿನ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಹೊರ ಜಿಲ್ಲೆಗಳಿಂದ ಬರುವ ಎಲ್ಲಾ ವಾಹನಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸಲಾಗುತ್ತಿದೆ. ಯಾವುದೇ ದಾಖಲೆಗಳಿಲ್ಲದ ಹಣ ಹಾಗೂ ನಿರ್ಬಂಧಿತ ವಸ್ತುಗಳನ್ನು ವಾಹನದಲ್ಲಿ ತೆಗೆದುಕೊಂಡು ಹೋಗುತ್ತಿದ್ದರೆ ಅಂತಹ ವಸ್ತುಗಳನ್ನು ವಶಪಡಿಸಿಕೊಳ್ಳಲಾಗುವುದು. ಇದುವರೆಗೆ ಯಾವುದೇ ದೊಡ್ಡ ಮಟ್ಟದ ಹಣ ಆಗಲಿ ಅಥವಾ ಇತರೆ ವಸ್ತುಗಳು ವಾಹನಗಳ ಪರಿಶೀಲನೆ ಸಂದರ್ಭದಲ್ಲಿ ದೊರೆತ್ತಿಲ್ಲ ಎಂದು ತಿಳಿಸಿದರು.

ಈ ಸಂದರ್ಭ ಕುಶಾಲನಗರ ತಾಲೂಕು ತಹಶೀಲ್ದಾರ್ ಕಿರಣ್ ಗೌರಯ್ಯ, ಕುಶಾಲನಗರ ಪಟ್ಟಣ ಪೊಲೀಸ್ ಠಾಣಾಧಿಕಾರಿ ಲೋಹಿತ್, ಒಳಚರಂಡಿ ಮಂಡಳಿ ಅಭಿಯಂತರ ಆನಂದ್, ಆರ್‌ಐ ಸಂತೋಷ್ ಹಾಗೂ ಇತರೆ ಇಲಾಖೆಯ ಅಧಿಕಾರಿ, ಸಿಬ್ಬಂದಿ ಇದ್ದರು.


ಕುಶಾಲನಗರದ ಕೊಪ್ಪ ವಾಹನ ತಪಾಸಣೆ ಕೇಂದ್ರಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಭೇಟಿ ನೀಡಿ, ಖುದ್ದು ತಪಾಸಣಾ ಕಾರ್ಯ ಪರಿಶೀಲಿಸಿದರು.

ಕಟ್ಟುನಿಟ್ಟಿನ ಸೂಚನೆ

ಯಾವುದೇ ದಾಖಲೆಗಳಿಲ್ಲದೆ ನಗದು, ಸಾಮಗ್ರಿಗಳು, ಚಿನ್ನಾಭರಣ, ಮದ್ಯ ಹಾಗೂ ವಾಣಿಜ್ಯ ಸರಕುಗಳನ್ನು ವಾಹನಗಳಲ್ಲಿ ಸಾಗಿಸುವುದನ್ನು ಸರಿಯಾಗಿ ಪರಿಶೀಲನೆ ನಡೆಸಬೇಕು. ದಾಖಲೆ ರಹಿತ ಸಾಮಗ್ರಿ ಮತ್ತು ನಗದು ದೊರೆತರೆ ನಿಯಮಾನುಸಾರ ಪ್ರಕರಣ ದಾಖಲಿಸಬೇಕು. ಚುನಾವಣೆ ಅಂತ್ಯದವರೆಗೆ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಕಾರ್ಯ ನಿರಂತರವಾಗಿ ನಡೆಯಬೇಕುವಂತೆ ಚೆಕ್‌ಪೋಸ್ಟ್ ಅಧಿಕಾರಿ ಹಾಗೂ ಸಿಬ್ಬಂದಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಚುನಾವಣಾ ಬಹಿಷ್ಕಾರದಿಂದ ಹಿಂದೆ ಸರಿದ ಆದಿವಾಸಿಗಳು

ಸಿದ್ದಾಪುರ, ಏ.4– ಬೇಡಿಕೆ ಈಡೇರಿಸಬೇಕೆಂದು ಒತ್ತಾಯಿಸಿ ತಟ್ಟಳ್ಳಿ ಹಾಡಿಯ ಆದಿವಾಸಿಗಳು ಲೋಕಸಭೆ ಚುನಾವಣೆಯ ಮತದಾನ ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳು ಗುರುವಾರ ಹಾಡಿಗೆ ಭೇಟಿ ನೀಡಿ, ಆದಿವಾಸಿಗಳನ್ನು ಮನವೊಲಿಸಿ ಮತದಾನ ಮಾಡುವಂತೆ ಮನವಿ ಮಾಡಿದರು.

ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಹಾಗೂ ಚುನಾವಣಾ ಸೆಕ್ಟರ್ ನವೀನ್, ಆದಿವಾಸಿಗಳೊಂದಿಗೆ ಸಮಾಲೋಚನೆ ನಡೆಸಿ ಮನವೊಲಿಸಿದರು. ಚುನಾವಣೆ ನಂತರ ನಿಮ್ಮ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು. ಬಳಿಕ ಆದಿವಾಸಿಗಳು ಮತದಾನ ಬಹಿಷ್ಕಾರದಿಂದ ಹಿಂದೆ ಸರಿದು ಮತದಾನದಲ್ಲಿ ಭಾಗವಹಿಸುವುದಾಗಿ ತಿಳಿಸಿದರು.

ಆದಿವಾಸಿ ಮುಖಂಡ ಜೆ.ಕೆ.ಅಪ್ಪಾಜಿ ಮಾತನಾಡಿ, ವಿದ್ಯುತ್, ಕುಡಿಯುವ ನೀರು, ರಸ್ತೆ, ಮನೆ ಸೇರಿದಂತೆ ಮೂಲಸೌಕರ್ಯದಿಂದ ವಂಚಿತರಾಗಿ ನಾವು ಬದುಕು ಸಾಗಿಸುತ್ತಿದ್ದೇವೆ. ಚುನಾವಣೆ ನಂತರ ನಮ್ಮ ಬೇಡಿಕೆ ಈಡೇರಿಸದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಈ ಸಂದರ್ಭ ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ರಾಘವೇಂದ್ರ, ಮಾಲ್ದಾರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಶೇಖರ್, ಸದಸ್ಯೆ ಶೋಭಾ ಹಾಗೂ ಹಾಡಿಯ ನಿವಾಸಿಗಳು ಹಾಜರಿದ್ದರು.


ತಟ್ಟಳ್ಳಿ ಹಾಡಿಗೆ ಅಧಿಕಾರಿಗಳು ಭೇಟಿ ನೀಡಿ, ಮತದಾನ ಮಾಡುವಂತೆ ಆದಿವಾಸಿಗಳನ್ನು ಮನವೊಲಿಸಿದರು.

ಮಾದಕ ವಸ್ತು ಮಾರಾಟಕ್ಕೆ ಯತ್ನ: ಮೂವರ ಬಂಧನ

ಮಡಿಕೇರಿ, ಏ.4– ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿದ್ದ ಕೇರಳದ ಮೂವರು ಆರೋಪಿಗಳನ್ನು ಬಂಧಿಸಿರುವ ಗೋಣಿಕೊಪ್ಪ ಠಾಣೆ ಪೊಲೀಸರು, 1 ಕೆಜಿ 400 ಗ್ರಾಂ ಗಾಂಜಾ ಮತ್ತು 2 ಗ್ರಾಂ ಎಂಡಿಎಂಎ ವಶ ಪಡಿಸಿಕೊಂಡಿದ್ದಾರೆ.

ಕೇರಳ ತಾಮರಶೇರಿ ನಿವಾಸಿಗಳಾದ ಮಹಮದ್ ಅಶ್ರಫ್(49), ತಸ್ಲೀಕ್(24) ಮತ್ತು ಎ.ಟಿ. ಅಲ್ಯಾರುಫ್(27) ಬಂಧಿತರು.

ತಿತಿಮತಿಯ ಮೈಸೂರು–ವಿರಾಜಪೇಟೆ ಹೆದ್ದಾರಿಯಲ್ಲಿ ಕೆಲ ವ್ಯಕ್ತಿಗಳು ನಿಷೇಧಿತ ಮಾದಕ ವಸ್ತುಗಳ ಮಾರಾಟಕ್ಕೆ ಯತ್ನಿಸುತ್ತಿದ್ದಾರೆ ಎಂದು ಗೋಣಿಕೊಪ್ಪ ಪೊಲೀಸರಿಗೆ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ಗೋಣಿಕೊಪ್ಪ ವೃತ್ತ ನಿರೀಕ್ಷಕ ಶಿವರಾಜ ಮುಧೋಳ, ಗೋಣಿಕೊಪ್ಪ ಠಾಣಾಧಿಕಾರಿ ರೂಪಾದೇವಿ ಬಿರಾದರ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಮೂವರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ. ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಯಿಯಿಂದ ಬೇರ್ಪಟ್ಟ ಮರಿಯಾನೆ

ತಾಯಿಯೊಂದಿಗೆ ಸೇರಿಸಲು ಅರಣ್ಯ ಸಿಬ್ಬಂದಿ ಹರಸಹಾಸ


ತಾಯಿ ಆನೆಯಿಂದ ಬೇರ್ಪಟ್ಟ ಮರಿಯಾನೆ.

ಸಿದ್ದಾಪುರ, ಏ.4– ಆಹಾರ ಅರಿಸಿ ಕಾಡಿನಿಂದ ಕಾಫಿ ತೋಟಕ್ಕೆ ಬಂದ ಕಾಡಾನೆಗಳ ಹಿಂಡಿನ ಪೈಕಿ ಮರಿಯಾನೆಯೊಂದು ಗುಂಪಿನಿಂದ ಬೇರ್ಪಟ್ಟಿದ್ದು, ತಾಯಿ ಆನೆಯನ್ನು ಹುಡುಕಿ ಒಬ್ಬಂಟಿಯಾಗಿ ಸುತ್ತಾಡುತ್ತಿದೆ.

ಸಮೀಪದ ಮಾಲ್ದಾರೆ ಮೈಲಾಪುರ ಕಾಫಿ ತೋಟವೊಂದರಲ್ಲಿ ನಾಲ್ಕು ತಿಂಗಳ ಗಂಡು ಮರಿಯಾನೆ ಕಿರುಚುತ್ತ ತನ್ನ ತಾಯಿಯನ್ನು ಹುಡುಕುತ್ತಿರುವ ದೃಶ್ಯ ಕಾರ್ಮಿಕರಿಗೆ ಕಂಡು ಬಂದಿದೆ.

ಕಾರ್ಮಿಕರು ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಬಳಿಕ ಸ್ಥಳಕ್ಕೆ ಆಗಮಿಸಿದ ದುಬಾರೆ, ವಿರಾಜಪೇಟೆ, ತಿತಿಮತಿ ಭಾಗದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಆನೆಮರಿಯನ್ನ ಸೆರೆ ಹಿಡಿದು ತಾಯಿ ಆನೆಯ ಪತ್ತೆಗಾಗಿ ಹುಡುಕಾಟ ಪ್ರಾರಂಭಿಸಿದ್ದಾರೆ.

15ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಬಿಟಿ ಕಾಡು, ಮಾಲ್ದಾರೆ, ಕರಡಿಗೋಡು, ಬಾಡಗ ಬಾಣಂಗಾಲ, ಹುಂಡಿ, ಮೈಲಾಪುರ ಸೇರಿದಂತೆ ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಕಳೆದ 5 ದಿನಗಳಿಂದ ತಾಯಿ ಆನೆಯೊಂದಿಗೆ ಸೇರಿಸಲು ಹುಡುಕಾಡುತ್ತಿದ್ದಾರೆ.

ಕಾಫಿ ತೋಟದಲ್ಲಿ ಕಂಡು ಬಂದ ಎರಡು ಗುಂಪು ಆನೆಗಳ ನಡುವೆ ಮರಿ ಆನೆಯನ್ನು ಸೇರಿಸಲು ಪ್ರಯತ್ನಪಟ್ಟಿದೆಯಾದರೂ ಗುಂಪು ಆನೆಗಳು ಮರಿಯಾನೆಯನ್ನ ಸೇರಿಸಿಕೊಳ್ಳಲು ಮುಂದಾಗುತ್ತಿಲ್ಲ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ತಂತಿಗೆ ಏಣಿ ತಗುಲಿ ಕಾರ್ಮಿಕ ಸಾವು

ಗೋಣಿಕೊಪ್ಪ, ಏ.4–ಕಾಳು ಮೆಣಸು ಕೊಯ್ಲು ಮಾಡುವಾಗ ಅಲ್ಯೂಮಿನಿಯಂ ಏಣಿ ವಿದ್ಯುತ್ ತಂತಿಗೆ ತಗುಲಿ ಕಾರ್ಮಿಕ ಮೃತಪಟ್ಟಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಮಾಯಮೂಡಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಹುಣಸೂರು ತಾಲೂಕಿನ ಬೀರತಮ್ಮನಹಳ್ಳಿ ಗ್ರಾಮದ ಪುಷ್ಪಗಿರಿ (47) ಮೃತ ಕಾರ್ಮಿಕ. ಈತ ಬಾಳಜಿ ಗ್ರಾಮದ ಕೆ.ಎಂ. ಕರುಂಬಯ್ಯ ಅವರ ಕಾಫಿ ತೋಟದಲ್ಲಿ ಬೆಳಗ್ಗೆ ಕಾಳು ಮೆಣಸು ಕೊಯ್ಯುತ್ತಿದ್ದಾಗ ಏಣಿ ವಿದ್ಯುತ್ ತಂತಿಗೆ ತಗುಲಿದೆ. ಪರಿಣಾಮ ಈತ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತದಾನ ಜಾಗೃತಿ

ವಿರಾಜಪೇಟೆ: ಜಿಲ್ಲಾಡಳಿತ, ತಾಲೂಕು ಸ್ವೀಪ್ ಸಮಿತಿ, ಪುರಸಭೆ ಸಹಯೋಗದಲ್ಲಿ ಸಾರ್ವಜನಿಕರಿಗೆ ಮತದಾನದ ಮಹತ್ವ ಕುರಿತು ಜಾಗೃತಿ ಮೂಡಿಸಲಾಯಿತು. ಎಲ್ಲರೂ ತಪ್ಪದೇ ಮತ ಚಲಾಯಿಸಬೇಕು. ಇದರೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸದೃಢಗೊಳಿಸಬೇಕು ಎಂದು ಅರಿವು ಮೂಡಿಸಲಾಯಿತು.

ಏ.17ರಿಂದ ಗೌಡ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿ

ಮಡಿಕೇರಿ, ಏ.4–ಕೊಡಗು ಗೌಡ ಯುವ ವೇದಿಕೆಯು 25ನೇ ವರ್ಷದ ಗೌಡ ಕ್ರೀಡಾಕೂಟದ ಬೆಳ್ಳಿ ಹಬ್ಬದ ಸಂಭ್ರಮದಲ್ಲಿದ್ದು, ವೃತ್ತಿಪರ ಕ್ರೀಡಾಕೂಟ ನಡೆಸುವ ಸಲುವಾಗಿ ಏ.17ರಿಂದ 28ರ ವರೆಗೆ ಮಡಿಕೇರಿಯಲ್ಲಿ ಗೌಡ ಲೆದರ್ ಬಾಲ್ ಸೀಸನ್–2 ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಪಾಣತ್ತಲೆ ಜಗದೀಶ್ ಮಂದಪ್ಪ ಹೇಳಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ 12 ದಿನ ಪಂದ್ಯಾವಳಿ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ. ಪಂದ್ಯಾವಳಿಯ ಬಿಡ್ಡಿಂಗ್ ಪ್ರಕ್ರಿಯೆ ಈಗಾಗಲೇ ನಡೆದಿದ್ದು, 10 ಫ್ರಾಂಚೈಸಿ ತಂಡಗಳು ಪಾಲ್ಗೊಳ್ಳಲಿವೆ. ಎಲ್ಲಾ ಪಂದ್ಯಾವಳಿಗಳು ಯೂಟ್ಯೂಬ್‌ನಲ್ಲಿ ನೇರ ಪ್ರಸಾರವಾಗಲಿದೆ ಎಂದು ಮಾಹಿತಿ ನೀಡಿದರು.

ಬೆಳ್ಳಿ ಮಹೋತ್ಸವದ ಪ್ರಯುಕ್ತ ಏ.27 ಮತ್ತು 28ರಂದು ಗೌಡ ಮುಕ್ತ ಮಹಿಳಾ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಹಾಗೂ ಗ್ರಾಮವಾರು ಸಾಂಸ್ಕೃತಿಕ ಪೈಪೋಟಿ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಆಸಕ್ತರು ಏ.22ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದರು.



ಸುದ್ದಿಗೋಷ್ಠಿಯಲ್ಲಿ ಗೌಡ ಕ್ರೀಡಾಕೂಟದ ಗೌಡ ಲೆದರ್ ಬಾಲ್ ಸೀಸನ್–2 ಕ್ರಿಕೆಟ್ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮಹಿಳಾ ಕ್ರಿಕೆಟ್ ಕಪ್ ಸಂಚಾಲಕಿ ಪುದಿಯನೆರವನ ರೇವತಿ ರಮೇಶ್ ಮಾತನಾಡಿ, ಕೊಡಗು ಗೌಡ ಯುವ ವೇದಿಕೆ ಕೊಡಗು, ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಜನಾಂಗದ ಮಹಿಳೆಯರಿಗಾಗಿ ಇದೇ ಪ್ರಥಮ ಬಾರಿಗೆ ಕ್ರಿಕೆಟ್ ಪಂದ್ಯಾವಳಿ ನಡೆಸಲು ಮುನ್ನಡಿ ಇಟ್ಟಿದೆ. ಮಹಿಳೆಯರು ತಂಡವನ್ನು ರಚಿಸಿಕೊಂಡು ಯಾವುದೇ ವಯಸ್ಸಿನ ಮಿತಿ ಇಲ್ಲದೆ 5 ಓವರ್‌ನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಬಹುದು ಎಂದು ತಿಳಿಸಿದರು.

ಗೌರವ ಸಲಹೆಗಾರರಾದ ಮೂಟೇರ ಪುಷ್ಪಾವತಿ ಮಾತನಾಡಿ, 10 ಕುಟುಂಬ 18 ಗೋತ್ರದ ಮುಕ್ತ ಮಹಿಳಾ ಕ್ರಿಕೆಟ್ ಪಂದ್ಯಾವಳಿ ನಡೆಯಲಿದ್ದು, ತಂಡದಲ್ಲಿ 9 ಆಟಗಾರರನ್ನು ಹೊಂದಿರಬೇಕು. ಥ್ರೋ ಬೌಲಿಂಗ್‌ಗೂ ಅವಕಾಶವಿದೆ.

ಪ್ರಥಮ ಬಹುಮಾನ 20 ಸಾವಿರ ರೂ. ಹಾಗೂ ಟ್ರೋಫಿ, ದ್ವಿತೀಯ ಬಹುಮಾನ 10 ಸಾವಿರ ರೂ. ಹಾಗೂ ಟ್ರೋಫಿ, ತೃತೀಯ ಬಹುಮಾನ 5 ಸಾವಿರ ರೂ. ಮತ್ತು ಟ್ರೋಫಿ ನೀಡಲಾಗುವುದು. ನೋಂದಾಣಿಗಾಗಿ ಪರಿಚನ ಸೋನಿ ಶರತ್ ಮೊಬೈಲ್ ಸಂ: 7676452107, ಪುದಿಯನೆರವನ ರೇವತಿ ರಮೇಶ್ ಮೊ.ಸಂ: 9663254829 ಹಾಗೂ ಮೂಟೇರ ಪುಷ್ಪಾವತಿ ಮೊ.ಸಂ: 6362814659 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಯುವ ವೇದಿಕೆ ಕ್ರೀಡಾಧ್ಯಕ್ಷ ಕುಟ್ಟನ ಪ್ರಶಾಂತ್, ಮಹಿಳಾ ಕ್ರಿಕೆಟ್ ಕಪ್ ಸಹ ಸಂಚಾಲಕರಾದ ಚೊಕ್ಕಾಡಿ ಪ್ರೇಮಾ ರಾಘವಯ್ಯ, ದುಗ್ಗಳ ಕಾವ್ಯ ಕಪಿಲ್ ಉಪಸ್ಥಿತರಿದ್ದರು.

ಆಟೋಗೆ ಸಾರಿಗೆ ಬಸ್ ಡಿಕ್ಕಿ: ಇಬ್ಬರು ಸ್ಥಳದಲ್ಲೇ ಸಾವು

● ಮತ್ತಿಬ್ಬರಿಗೆ ತೀವ್ರ ಗಾಯ ● ಧನಗೆರೆ ಸಮೀಪ ಘಟನೆ

ಕೊಳ್ಳೇಗಾಲ, ಏ.4–ಸಾರಿಗೆ ಬಸ್ ಆಟೋಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಇಬ್ಬರು ಮೃತಪಟ್ಟಿದ್ದು, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಧನಗೆರೆ ಗ್ರಾಮದ ಸಮೀಪ ಗುರುವಾರ ನಡೆದಿದೆ.

ಶಿವನಸಮುದ್ರದ ದರ್ಗಾ ನಿವಾಸಿ ಸೈಯದ್ ಮನ್ಸೂರು ಹುಸೈನಿ (34), ಸತ್ತೇಗಾಲ ಹ್ಯಾಂಡ್‌ಪೋಸ್ಟ್ ನಿವಾಸಿ ನೂರಜಾನ್ (58) ಮೃತಪಟ್ಟಿದ್ದು, ಅದೇ ಗ್ರಾಮದ ರೆಹಮತ್ ಉನ್ನೀಸಾ(42) ಮತ್ತು ಬೆಂಗಳೂರಿನ ಶಂಶಾದ್ ಬೇಗಂ(51) ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಈ ನಾಲ್ವರು ಆಟೋದಲ್ಲಿ ಹ್ಯಾಂಡ್‌ಪೋಸ್ಟ್‌ನಿಂದ ಕೊಳ್ಳೇಗಾಲದ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸಂಬಂಧಿಯನ್ನು ನೋಡಲು ಬರುತ್ತಿದ್ದರು. ಇದೇ ವೇಳೆ ಬೆಂಗಳೂರು ಕಡೆಗೆ ಹೋಗುತ್ತಿದ್ದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಸೈಯದ್ ಮನ್ಸೂರು ಹುಸೈನಿ ಹಾಗೂ ನೂರಜಾನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಂಶಾದ್ ಬೇಗಂಗೆ ಕೈ, ಕಾಲು ಮುರಿದಿದ್ದು, ಇವರನ್ನು ಮೈಸೂರಿನ ಆಸ್ಪತ್ರೆಗೆ ಹಾಗೂ ರೆಹಮತ್ ಉನ್ನೀಸಾ ಅವರನ್ನು ಕೊಳ್ಳೇಗಾಲದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಾಗಿದೆ.


ನೂರಜಾನ್


ಮನ್ಸೂರು ಹುಸೈನಿ


ಧನಗೆರೆ ಬಳಿ ಬಸ್ ಡಿಕ್ಕಿಯ ರಭಸಕ್ಕೆ ಆಟೋ ನಜ್ಜುಗುಜ್ಜಾಗಿರುವುದು.

ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.


ಗುಂಡ್ಲುಪೇಟೆ ತಾಲೂಕಿನ ಕಣ್ಣೇಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿಮವದ್ ವೇಣುಗೋಪಾಲಸ್ವಾಮಿ ದೇವಸ್ಥಾನ ಆವರಣದಲ್ಲಿ ತಾಲೂಕ ಆಡಳಿತ, ತಾಲೂಕು ಪಂಚಾಯಿತಿ ಮತ್ತು ತಾಲೂಕು ಸ್ವೀಪ್ ಸಮಿತಿಯಿಂದ ಗುರುವಾರ ಆಯೋಜಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಕಡ್ಡಾಯ ಮತದಾನ ಕುರಿತು ಪ್ರತಿಜ್ಞಾವಿಧಿ ಬೋಧಿಸಲಾಯಿತು. ಜಿಲ್ಲಾ ಪಂಚಾಯಿತಿ ಸಿಇಓ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ತಾಪಂ ಇಓ ರಾಮಲಿಂಗಯ್ಯ ತಹಶೀಲ್ದಾರ್ ಮಂಜುನಾಥ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಕುಮಾರ್, ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರನ್ ಇತರರು ಇದ್ದರು.

ಗೋಪಾಲಸ್ವಾಮಿಬೆಟ್ಟದಲ್ಲಿ ವಿಜೃಂಭಣೆ ರಥೋತ್ಸವ

ಫಲಪುಷ್ಪ, ತಳಿರು ತೋರಣಗಳಿಂದ ದೇವಾಲಯ ಅಲಂಕಾರ

ಗುಂಡ್ಲುಪೇಟೆ, ಏ.4–ನಾಡಿನ ಪ್ರಸಿದ್ಧ ಶ್ರದ್ಧಾಕೇಂದ್ರ ತಾಲೂಕಿನ ಶ್ರೀ ಹಿಮವದ್ ಗೋಪಾಲಸ್ವಾಮಿಬೆಟ್ಟದಲ್ಲಿ ಗುರುವಾರ ವೇಣುಗೋಪಾಲಸ್ವಾಮಿಯ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆಯ ಹಿನ್ನೆಲೆಯಲ್ಲಿ ದೇವಾಲಯವನ್ನು ಫಲ–ಪುಷ್ಪ, ವಿವಿಧ ತಳಿರು ತೋರಣ ಮತ್ತು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ರುಕ್ಮಿಣಿ ಸತ್ಯಭಾಮ ಸಹಿತ ಕೊಳಲು ನುಡಿಸುತ್ತಿರುವ ಭಂಗಿಯಲ್ಲಿ ನಿಂತಿರುವ ವೇಣುಗೋಪಾಲಸ್ವಾಮಿಗೆ ಮುಂಜಾನೆಯಿಂದಲೇ ವಿಶೇಷ ಪೂಜೆ ನೆರವೇರಿಸಲಾಯಿತು.

ಜಾತ್ರಾ ಮಹೋತ್ಸವ ಅಂಗವಾಗಿ ನಾಲ್ಕು ದಿನಗಳಿಂದ ದೇವಾಲಯದಲ್ಲಿ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯವನ್ನು ದೇವಾಲಯದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಭಟ್ ನೇತೃತ್ವದಲ್ಲಿ ನಡೆಸಲಾಯಿತು. ಗುರುವಾರ ಮಧ್ಯಾಹ್ನ 12 ಗಂಟೆಗೆ ಉತ್ಸವ ಮೂರ್ತಿಯನ್ನು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಹಾಕಿ ರಥದಲ್ಲಿ ಕುಳ್ಳಿರಿಸಲಾಯಿತು. ಮುಜರಾಯಿ ಅಧಿಕಾರಿಯಾದ ತಹಸೀಲ್ದಾರ್ ಮಂಜುನಾಥ್ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ನಂತರ ಗೋವಿಂದಾ... ಗೋಪಾಲ... ಎಂಬಿತ್ಯಾದಿ ನಾಮಸ್ಮರಣೆಯೊಂದಿಗೆ ಸಹಸ್ರಾರು ಭಕ್ತರು ರಥಕ್ಕೆ ಹಣ್ಣು ಜವನ ಎಸೆದು ಪುನೀತರಾದರು. ಬೆಟ್ಟದ ತಪ್ಪಲಿನ ಸುತ್ತಮುತ್ತಲ ಗ್ರಾಮಸ್ಥರು ಅರಣ್ಯದಲ್ಲಿ ಸಿಗುವ ಹಂಬಿನಿಂದ ತಯಾರಿಸಿದ ಹಗ್ಗದಲ್ಲಿ ಕಟ್ಟಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥವನ್ನು ದೇವಾಲಯ ಸುತ್ತ ಪ್ರದಕ್ಷಣೆ ಹಾಕಿಸಿ ಸ್ವಸ್ಥಾನ ತಲುಪಿಸಿದರು.

ಬೆಟ್ಟಕ್ಕೆ ಹೋಗುವ ಭಕ್ತರಿಗೆ ಪಟ್ಟಣದ ಸಾರಿಗೆ ಬಸ್ ನಿಲ್ದಾಣ ಮತ್ತು ಬೆಟ್ಟದ ತಪ್ಪಲಿನಿಂದ 30ಕ್ಕೂ ಹೆಚ್ಚು ಬಸ್‌ಗಳನ್ನು ನಿಯೋಜಿಸಿತ್ತು. ರಥೋತ್ಸವಕ್ಕೆ ಆಗಮಿಸುವ ಭಕ್ತರಿಗಾಗಿ ತಾತ್ಕಾಲಿಕವಾಗಿ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಶಾಸಕರ ಭೇಟಿ: ದೇವಾಲಯಕ್ಕೆ ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಮತ್ತು ಅವರ ಪತ್ನಿ ವಿದ್ಯಾ ಗಣೇಶ್ ಭೇಟಿ ನೀಡಿ, ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗಣೇಶ್‌ಪ್ರಸಾದ್, ನಾಡಿನ ಸಮಸ್ತ ಜನರಿಗೆ ಒಳಿತು ಮತ್ತು ಉತ್ತಮ ಮಳೆ ಬೆಳೆ ನೀಡುವಂತೆ ಕೋರಿ ಹಿಮವದ್ ಗೋಪಾಲ ಸ್ವಾಮಿಗೆ ಪೂಜೆ ಸಲ್ಲಿಸಿದ್ದೇನೆ ಎಂದರು.


ಗುಂಡ್ಲುಪೇಟೆ ತಾಲೂಕಿನ ಗೋಪಾಲಸ್ವಾಮಿಬೆಟ್ಟದಲ್ಲಿ ಸಾವಿರಾರು ಭಕ್ತರ ನಡುವೆ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಚುನಾವಣೆ: ಗೈರಾಗುವ ನೌಕರರ ವಿರುದ್ಧ ಕ್ರಮ

ಚಾಮರಾಜನಗರ, ಏ.4–ಲೋಕಸಭಾ ಚುನಾವಣೆ ಕರ್ತವ್ಯಕ್ಕೆ ಗೈರಾಗುವ ನೌಕರರು, ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಎಚ್ಚರಿಸಿದ್ದಾರೆ.

ಏ.5ರಂದು ಮೊದಲನೇ ಹಂತದ ತರಬೇತಿ ಕಾರ್ಯಕ್ರಮ, ಏ.25ರಂದು ಮಸ್ಟರಿಂಗ್ ಹಾಗೂ ಏ.26ರಂದು ಮತದಾನ ನಡೆಯಲಿದೆ. ಚುನಾವಣೆ ಕಾರ್ಯಕ್ಕೆ ನಿಯೋಜಿಸಿರುವ ಸಿಬ್ಬಂದಿ ತರಬೇತಿ, ಮಸ್ಟರಿಂಗ್ ಮತ್ತು ಮತದಾನದ ದಿನದಂದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಫಲವಾದರೆ ಅಥವಾ ಗೈರಾದಲ್ಲಿ ಸಂಬಂಧಪಟ್ಟ ನೌಕರರು, ಅಧಿಕಾರಿಗಳ ವಿರುದ್ಧ ತಕ್ಷಣ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಚುನಾವಣೆ ಕರ್ತವ್ಯಕ್ಕೆ ನಿಯೋಜಿಸಿರುವ ಮತಗಟ್ಟೆ ಸಿಬ್ಬಂದಿಯನ್ನು ಇಂತಹ ಇಲಾಖೆ, ಕಚೇರಿಯ ಮುಖ್ಯಸ್ಥರು ತಮ್ಮ ಸಿಬ್ಬಂದಿಗೆ ಆದೇಶ ಜಾರಿ ಮಾಡಬೇಕು ಮತ್ತು ತರಬೇತಿ, ಮಸ್ಟರಿಂಗ್ ಹಾಗೂ ಚುನಾವಣಾ ಕರ್ತವ್ಯದಲ್ಲಿ ಅವರ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರದ ಅಭಿವೃದ್ಧಿಗೆ ಬಿಜೆಪಿ ಬೆಂಬಲಿಸಿ: ಬಾಲರಾಜು ಮನವಿ


ಚಾಮರಾಜನಗರದ ವಕೀಲರ ಸಂಘಕ್ಕೆ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಭೇಟಿ ನೀಡಿ, ಮತಯಾಚಿಸಿದರು.

ಚಾಮರಾಜನಗರ: ಚಾಮರಾಜನಗರ ಲೋಕಸಭಾ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಬಿಜೆಪಿ ಬೆಂಬಲಿಸಿ ಎಂದು ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮನವಿ ಮಾಡಿದರು.

ನಗರದ ನ್ಯಾಯಾಲಯ ರಸ್ತೆಯ ವಕೀಲರ ಸಂಘದಲ್ಲಿ ವಕೀಲರನ್ನು ಭೇಟಿ ಮಾಡಿ, ಮತಯಾಚಿಸಿ ಮಾತನಾಡಿ ಅವರು, ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾಡಿರುವ ಅಭಿವೃದ್ಧಿ, ದೇಶದ ಭದ್ರತೆ ಮತ್ತು ಸುರಕ್ಷತೆಗೆ ಅವರು ಕೈಗೊಂಡ ಯೋಜನೆಗಳು ವಿಶ್ವಕ್ಕೆ ಮಾದರಿಯಾಗಿದೆ. ಮತ್ತೊಮ್ಮೆ ಮೋದಿ ಅವರನ್ನು ಪ್ರಧಾನಿಯಾಗಿ ನೋಡಲು ವಿಶ್ವವೇ ಕಾತುರವಾಗಿದೆ ಈ ಹಿನ್ನೆಲೆಯಲ್ಲಿ ಚಾಮರಾಜನಗರ ಕ್ಷೇತ್ರದಿಂದ ಬಿಜೆಪಿಯಿಂದ ನಾನು ಸ್ಪರ್ಧೆ ಮಾಡಿದ್ದು, ಆಶೀರ್ವಾದ ಮಾಡಬೇಕು ಎಂದರು. ನಾನು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ನೀಡುವ ಮೂಲಕ ಅವಕಾಶ ಕಲ್ಪಿಸಿಕೊಟ್ಟಿದೆ. ಪ್ರಧಾನಿ ನರೇಂದ್ರಮೋದಿ ದೇಶದಲ್ಲಿ ಅನೇಕ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಆರ್.ಧ್ರುವನಾರಾಯಣ ಅವರಂತೆ ನನಗೂ ಜಿಲ್ಲೆಯ ಅಭಿವೃದ್ಧಿ ಮಾಡಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ನಂಜಯ್ಯ, ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ದೊಡ್ಡಮೊಳೆ, ಜಂಟಿ ಕಾರ್ಯದರ್ಶಿ ಮೋಹನ್ ಜಗದೀಶ್, ಖಜಾಂಚಿ ಸಿ.ಸಿ.ರಮೇಶ್, ಕಾರ್ಯಕಾರಿಣಿ ಸಮಿತಿ ಸದಸ್ಯ ಜಯಪ್ರಕಾಶ್, ಹಿರಿಯ ವಕೀಲರಾದ ಪುಟ್ಟರಾಜು, ವಿ.ನಾಗರಾಜೇಂದ್ರ, ಸಿ.ಚಿನ್ನಸ್ವಾಮಿ, ಹರವೆ ಮಂಜು, ಯುವ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಪ್ರಣಯ್, ಜಿಲ್ಲಾ ಕಾರ್ಯದರ್ಶಿ ನಟರಾಜು, ನಗರ ಮಂಡಲದ ಅಧ್ಯಕ್ಷ ಶಿವರಾಜ್‌ನಾಯಕ, ಜಿಲ್ಲಾ ಮಾಧ್ಯಮ ಪ್ರಮುಖ್ ವೀರೇಂದ್ರ, ರಾಮಸಮುದ್ರ ಪರಶಿವ, ಹೊಂಗನೂರು ಮಹದೇವಸ್ವಾಮಿ, ಬೆಟ್ಟದಪುರ ಮಹದೇವಸ್ವಾಮಿ ಇತರರು ಇದ್ದರು.

ವೀರಭದ್ರಯ್ಯ ನಿಧನ



ಚಾಮರಾಜನಗರ: ಸಮೀಪದ ಮಲ್ಲಯ್ಯನಪುರ ಗ್ರಾಮದ ನಿವಾಸಿ ಹಾಗೂ ಪಿಡಬ್ಲ್ಯೂಡಿ ಇಲಾಖೆಯ ನಿವೃತ್ತ ಕಾವಲುಗಾರ ವೀರಭದ್ರಯ್ಯ (84) ಬುಧವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ರಕರ್ತ ವಿ.ಗಂಗಾಧರ್, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

19.92 ಲಕ್ಷ ರೂ. ಅಕ್ರಮ ಮದ್ಯ ವಶ

ಚಾಮರಾಜನಗರ: ಚುನಾವಣೆ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆ ವತಿಯಿಂದ ಮಾ.16 ರಿಂದ ಏ.2ರವರೆಗೆ ಜಿಲ್ಲೆಯ ವಿವಿಧೆಡೆ ದಾಳಿ ನಡೆಸಿ, 137 ಆರೋಪಿಗಳನ್ನು ಬಂಧಿಸಿ 19,92,989 ರೂ. ಮೌಲ್ಯದ ಮದ್ಯ ವಶಪಡಿಸಿಕೊಳ್ಳಲಾಗಿದೆ.



ವಿವಿಧೆಡೆ ದಾಳಿ ನಡೆಸಿದ ಅಬಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ 430.920 ಲೀ. ಮದ್ಯ, 6.850 ಲೀ. ಬಿಯರ್ ಹಾಗೂ 17 ವಿವಿಧ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಒಟ್ಟು 163 ಪ್ರಕರಣ ದಾಖಲಿಸಿ, 137 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬರೀ ಅಭಿವೃದ್ಧಿಗೇ ಆದ್ಯತೆ ನೀಡಿ ಆರ್ಥಿಕ ಅವಿವೇಕತೆಯಿಂದ ಬದುಕುತ್ತಿರುವುದು ದುರಂತ!

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಸಂಸ್ಕೃತಿ ಚಿಂತಕ ಶಂಕರ್ ದೇವನೂರು ವಿಷಾದ



ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಾಂಸ್ಕೃತಿಕ ವೇದಿಕೆ ಹಾಗೂ ಅಸ್ತಿತ್ವ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ಗುರುವಾರ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಸ್ಕೃತಿ ಚಿಂತಕ ಶಂಕರ್ ದೇವನೂರು ಉದ್ಘಾಟಿಸಿದರು.

ಮೈಸೂರು, ಏ.4(ಎಂಟಿವೈ)– ಯಾಂತ್ರಿಕ ನಾಗರಿಕತೆ ಮತ್ತು ಅಭಿವೃದ್ಧಿಶೀಲತೆಯ ಹೆಸರಿನಲ್ಲಿ ನಿಸರ್ಗ-ವೃಕ್ಷಿಯ ನಡುವಿನ ಕರುಳುಬಳ್ಳಿ ಸಂಬಂಧವನ್ನು ಕಡಿದುಕೊಳ್ಳುವ ದುಸ್ಥಿತಿ ಎದುರಾಗಿದೆ ಎಂದು ಸಂಸ್ಕೃತಿ ಚಿಂತಕ ಶಂಕರ್ ದೇವನೂರು ವಿಷಾದಿಸಿದ್ದಾರೆ.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಾಂಸ್ಕೃತಿಕ ವೇದಿಕೆ ಹಾಗೂ ಅಸ್ತಿತ್ವ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆಯಲ್ಲಿ ಗುರುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಡಾ.ಎನ್.ಕೆ. ಲೋಲಾಕ್ಷಿ ಅವರ ದೃಶ್ಯಕಾವ್ಯ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಿಸರ್ಗದ ಮಹತ್ವವನ್ನು ಅರಿಯುವಲ್ಲಿ ಜನ ವಿಫಲರಾಗಿದ್ದಾರೆ. ಯಾಂತ್ರಿಕ ನಾಗರಿಕತೆ ಹಾಗೂ ಅಭಿವೃದ್ಧಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ, ಆರ್ಥಿಕ ಅವಿವೇಕತನದಲ್ಲಿ ಬದುಕುತ್ತಿರುವುದು ದೊಡ್ಡ ದುರಂತ. ಸಂತರು, ಶರಣರು ತಮ್ಮ ಬದುಕನ್ನು ನಿಸರ್ಗದೊಂದಿಗೆ ವಿಲೀನಗೊಳಿಸಿಕೊಂಡಿದ್ದರು. ಇಂದು ನಮ್ಮ ಬದುಕು ಪ್ರಕೃತಿಗೆ ವಿರುದ್ಧವಾಗಿದೆ. ಕಾಡು-ಮೇಡು, ವನ್ಯಪ್ರಾಣಿಗಳು ಇರುವ ತನಕ ಈ ಭೂಮಿ ಮನುಷ್ಯನಿಗೆ ಆಶ್ರಯವನ್ನು ನೀಡಬಲ್ಲದು. ಈ ಮಾತನ್ನು ನಮ್ಮ ಪೂರ್ವಿಕರು ಅರಿತಿದ್ದರು ಎಂದು ಹೇಳಿದರು.

15ನೇ ಶತಮಾನದ ಶಿಕಾರಿಪುರದ ಶಾಂತನಾಥ ಶಿವಯೋಗಿಗಳು-ಗಗನದ ವ್ಯಾಪ್ತಿಗಿಂತ ಅಭಿಮಾನ ದೊಡ್ಡದು ಎಂದಿದ್ದಾರೆ. ಪ್ರತಿಯೊಬ್ಬರೂ ನನ್ನ ನೆಲ, ಜಲ ಪರಂಪರೆಯನ್ನು ತಮ ಹೃದಯದಲ್ಲಿ ಸ್ಥಾಪಿಸಿಕೊಳ್ಳಬೇಕು. ಕರ್ನಾಟಕ ತಾಯಿಯ ಅಂತಃಕರಣಕ್ಕೆ ಹೆಸರುವಾಸಿ. ತಾಯಿ ನಾಡು ಮೂರು ಲೋಕಕ್ಕಿಂತಲೂ ದೊಡ್ಡದು. ಇದು ನಮ್ಮ ಬದುಕಿನ ಅಭಿವ್ಯಕ್ತಿ ಮತ್ತು ರೂಪಕವಾಗಬೇಕು. ಸಾಹಿತ್ಯ ಪರಂಪರೆ ಒಳಗೊಳ್ಳುವ ಪರಂಪರೆಯಾಗಿದೆ. ಇದನ್ನು ಅರಿಯಬೇಕು ಎಂದರು.

ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ನೆಲ ಅಭಿರುಚಿ ತಾಂಡವರು ದೃಶ್ಯಕಾವ್ಯ ಲೋಕಾರ್ಪಣೆ ಮಾಡಿದರು. ನಾಗರಿಕ ಹಕ್ಕು ಜಾರಿ ನಿರ್ದೇಶಾಲಯ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಡಾ.ಬಿ.ಟಿ.ಕವಿತಾ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಎನ್.ಕೆ. ಲೋಲಾಕ್ಷಿ ವಿಶೇಷ ಉಪನ್ಯಾಸ ನೀಡಿದರು. ಸಾಂಸ್ಕೃತಿಕ ವೇದಿಕೆ ಅಧ್ಯಾಪಕ ಕಾರ್ಯದರ್ಶಿ ನಂಜುಂಡಯ್ಯ ಎಂ, ಖಜಾಂಚಿ ಅಶ್ವಿನಿ, ಸಾಂಸ್ಕೃತಿಕ ವೇದಿಕೆಯ ವಿದ್ಯಾರ್ಥಿ ಅಧ್ಯಕ್ಷ ರಕ್ಷಿತಾ, ಕಾರ್ಯದರ್ಶಿ ಜೇನುಶ್ರೀ ಜೆ.ಎಸ್, ಗಾಯಕ ಅಮ್ಮ ರಾಮಚಂದ್ರ ಇದ್ದರು.



ಜೆಎಸ್ಎಸ್ ಮಹಾವಿದ್ಯಾಪೀಠದ ವತಿಯಿಂದ ನಡೆದ ಬೇಸಿಗೆ ಚಿತ್ರಕಲಾ ಶಿಬಿರವನ್ನು ಹಿರಿಯ ಪತ್ರಕರ್ತ ಎಂ.ಆರ್.ಸತ್ಯನಾರಾಯಣ ಉದ್ಘಾಟಿಸಿದರು. ಈ ವೇಳೆ ಕಾವಾ ಕಾಲೇಜಿನ ಹಿರಿಯ ಉಪನ್ಯಾಸಕ ಎ.ಪಿ.ಚಂದ್ರಶೇಖರ್, ಪ್ರಕಟಣಾ ವಿಭಾಗದ ನಿರ್ದೇಶಕ ಮರಬದ ಮಲ್ಲಿಕಾರ್ಜುನ, ಶಿಬಿರದ ಸಂಚಾಲಕ ಎಸ್.ಎಂ.ಜಂಬುಕೇಶ್ವರ, ಶಿಕ್ಷಕ ಪಿ.ಎಸ್.ಸಲಬಣ್ಣ ಉಪಸ್ಥಿತರಿದ್ದರು.

ಗುಜರಾತ್ ಮಣಿಸಿದ ಪಂಜಾಬ್‌ಗೆ ರೋಚಕ ಜಯ



ಅಹಮದಾಬಾದ್, ಏ.4– ಇನ್ನಿಂಗ್ಸ್‌ನ ಕೊನೆ ಓವರ್‌ಗಳಲ್ಲಿ ಅಶುತೋಷ್ ಶರ್ಮಾ ಹಾಗೂ ಶಶಾಂಕ್ ಸಿಂಗ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ಗುಜರಾತ್ ಟೈಟಾನ್ಸ್ ವಿರುದ್ಧ 3 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತ್ತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವೃದ್ಧಿಮಾನ್ ಸಹಾ 11 ರನ್ ಗಳಿಸಿ ಔಟಾದರು. ನಂತರ ಬಂದ ಕೇನ್ ವಿಲಿಯಮ್ಸನ್ 4 ಬೌಂಡರಿ ಒಳಗೊಂಡ 26 ರನ್ ಗಳಿಸಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ನಾಯಕ ಶುಭ್‌ಮನ್ ಗಿಲ್ 48 ಎಸೆತಗಳಲ್ಲಿ 6 ಬೌಂಡರಿ, 4ಸಿಕ್ಸರ್ ಒಳಗೊಂಡ 89 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಸಾಯಿ ಸುದರ್ಶನ್ 33, ವಿಜಯ್ ಶಂಕರ್ 8, ರಾಹುಲ್ ತೆವಾಟಿಯಾ 8 ಎಸೆತಗಳಲ್ಲಿ 1 ಸಿಕ್ಸರ್, 3 ಬೌಂಡರಿ ಒಳಗೊಂಡ ಮಿಂಚಿನ 23 ರನ್ ಗಳಿಸಿದರು. ಪಂಜಾಬ್ ಪರ ರಬಾಡ 2, ಹರ್‌ಪ್ರೀತ್ ಬ್ರಾರ್ ಹಾಗೂ ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು.

ಗುಜರಾತ್ ನೀಡಿದ ಬೃಹತ್ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 19.5 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿ ಗೆಲುವು ಸಾಧಿಸಿತು. ತಂಡದ ಪರ ಶಶಾಂಕ್ ಸಿಂಗ್ 29 ಎಸೆತಗಳಲ್ಲಿ 4 ಸಿಕ್ಸರ್, 6 ಬೌಂಡರಿ ಒಳಗೊಂಡ 61 ರನ್ ಸಿಡಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಉಳಿದಂತೆ ಅಶುತೋಶ್ ಶರ್ಮಾ 31, ಜಿತೇಶ್ ಶರ್ಮಾ 16, ಸಿಕಂದರ್ ರಾಜ 15, ಪ್ರಭ್‌ಸಿಮ್ರಾನ್ ಸಿಂಗ್ 35, ಜಾನಿ ಬೈರ್ ಸ್ಟೋ 22 ರನ್ ಗಳಿಸಿದರು. ಗುಜರಾತ್ ಪರ ನೂರ್ ಅಹಮ್ಮದ್ 2, ಅಜ್ಮತುಲ್ಲಾ ಓಮರ್ಜಾಯ್, ಉಮೇಶ್ ಯಾದವ್, ರಶೀದ್ ಖಾನ್, ಮೋಹಿತ್ ಶರ್ಮಾ ಹಾಗೂ ದರ್ಶನ್ ನಲ್ಕಂಡೆ ತಲಾ ಒಂದೊಂದು ವಿಕೆಟ್ ಪಡೆದರು. ಶಶಾಂಕ್ ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ
ಸನ್‌ರೈಸರ್ಸ್ ಹೈದರಾಬಾದ್ V/S ಚೆನ್ನೈ ಸೂಪರ್ ಕಿಂಗ್ಸ್
ಸ್ಥಳ: ಹೈದರಾಬಾದ್, ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣ.
ಸಮಯ: ಸಂಜೆ 7.30ಕ್ಕೆ



ಮೈಸೂರಿನ ನಾಯ್ಡುನಗರದಲ್ಲಿ ನಡೆದ ಎಸ್.ಎಸ್.ಜಿ.ಆರ್. ಕರಾಟೆ ಅಂತಿಮ ಬ್ಲಾಕ್ ಬೆಲ್ಟ್ ಪರೀಕ್ಷೆಯಲ್ಲಿ ಹಲವು ವಿದ್ಯಾರ್ಥಿಗಳು ಯಶಸ್ವಿಯಾಗಿದ್ದು ಅವರಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಇವರೆಲ್ಲ ತರಬೇತುದಾರ ಶಿಯಾನ್ ಲೋಕೇಶ್ ಅವರಿಂದ ತರಬೇತಿ ಪಡೆದಿದ್ದರು. ಕೋಶಿ ಸುನೀಲ್ ಪರೀಕ್ಷಕರಾಗಿದ್ದರು.

‘ವಿಷನ್ ಆಫ್ ಮೈಸೂರು’: ಮೈಸೂರಿನ ವಿವಿಧ ಸೇವಾ ಸಂಸ್ಥೆಗಳಿಂದ ಯದುವೀರ್ ಅವರೊಂದಿಗೆ ಸಂವಾದ

- ಪ್ರಸ್ತಾಪಿತ ಹಲವು ಸಮಸ್ಯೆಗಳ ನಿವಾರಣೆಗೆ ‘ಅಧಿಕಾರ’ ಮಂತ್ರ ಜಪಿಸಿದ ಯದುವೀರ್
- ರೋಟರಿ, ಲಯನ್ಸ್, ರೌಂಡ್ ಟೇಬಲ್, ಇನ್ನರ್‌ವ್ಹೀಲ್, ಲೇಡಿಸ್ ಸರ್ಕಲ್ ಇಂಡಿಯಾ, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಯಂಗ್ ಇಂಡಿಯನ್ಸ್, ಕ್ರೆಡೈ, ನರೆಡ್ಕೊ, ಬ್ಲಡ್ ಆನ್ ಕಾಲ್ ಕ್ಲಬ್, ಹ್ಯೂಮನ್ ಟಚ್ ಸೇರಿದಂತೆ ವಿವಿಧ ಸೇವಾ-ಉದ್ಯಮ ಸಂಸ್ಥೆಗಳಿಂದ ಆಯೋಜನೆ!

ಮೈಸೂರು, ಏ.4(ಎಂಕೆ)– ವಿಕಸಿತ ಭಾರತ ಕಲ್ಪನೆಯಡಿ ಮೈಸೂರಿನ ಪರಂಪರೆ ಹಾಗೂ ಕೊಡಗಿನ ನಿಸರ್ಗವನ್ನು ಉಳಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಕಾರ್ಯಯೋಜನೆಗಳನ್ನು ರೂಪಿಸಲಾಗುವುದು. 2047ರ ಅಭಿವೃದ್ಧಿ ಹೊಂದಿದ ಭಾರತಕ್ಕೆ ಮೈಸೂರು-ಕೊಡಗಿನ ಕೊಡುಗೆಯೂ ಇರಲಿದೆ ಎಂದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರವಾಸೋದ್ಯಮ, ಸ್ವಚ್ಛತೆ, ಸಂಪರ್ಕ, ಪರಿಸರ ಮಾಲಿನ್ಯ ನಿಯಂತ್ರಣದೊಂದಿಗೆ ಕೈಗಾರಿಕೆಗಳ ಸ್ಥಾಪನೆ ಸೇರಿದಂತೆ ತಾವು ಸಂಸದರಾಗಿ ಆಯ್ಕೆಯಾದರೆ ಕೈಗೊಳ್ಳುವ ಕಾರ್ಯಕ್ರಮಗಳು ಹಾಗೂ ತಮ್ಮ ಆದ್ಯತೆ ವಿಚಾರಗಳ ಕುರಿತು ಮಾಹಿತಿ ಹಂಚಿಕೊಂಡರು.

ನಜರ್‌ಬಾದ್‌ನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಮೈಸೂರಿನ ಸೇವಾ ಸಂಸ್ಥೆಗಳ ವತಿಯಿಂದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರೊಂದಿಗೆ ಆಯೋಜಿಸಿದ್ದ ‘ವಿಷನ್ ಆಫ್ ಮೈಸೂರು’ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇವತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸೇವೆ ಮಾಡಲು ರಾಜಕೀಯ ಕ್ಷೇತ್ರ ದೊಡ್ಡ ವೇದಿಕೆಯಾಗಿದೆ. ಈ ನಿಟ್ಟಿನಲ್ಲಿ ಕಳೆದೊಂದು ವರ್ಷದಿಂದ ರಾಜಕೀಯ ಕ್ಷೇತ್ರದ ಮೇಲೆ ಆಸಕ್ತಿ ಬೆಳೆಸಿಕೊಂಡು ಜನಸೇವೆ ಮಾಡುವ ಉದ್ದೇಶದಿಂದಲೇ ಬಂದಿದ್ದೇನೆ. ಹಾಗೆಯೇ ಕಳೆದ ಒಂಬತ್ತು ವರ್ಷಗಳಿಂದ ಮೈಸೂರು-ಕೊಡಗಿನ ಜನರನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೂ ಮಾಡಿದ್ದೇನೆ ಎಂದರು.

ವಿಕಸಿತ ಭಾರತದ ಕೀಲಿ ಕೈ: 2047ಕ್ಕೆ ಭಾರತ ಸ್ವಾತಂತ್ರ್ಯ ಪಡೆದು ನೂರು ವರ್ಷಗಳಾಗಲಿವೆ. ಪ್ರಧಾನಿ ಮೋದಿಯವರ ವಿಕಸಿತ ಭಾರತ ಕಲ್ಪನೆಯಡಿ, ಮೈಸೂರು ಮತ್ತು ಕೊಡಗು ಜಿಲ್ಲೆಗಳನ್ನು ಅಭಿವೃದ್ಧಿಗೊಳಿಸುವುದಲ್ಲದೆ ಅಭಿವೃದ್ಧಿ ಹೊಂದಿದ ಭಾರತಕ್ಕೆ ಎರಡೂ ಜಿಲ್ಲೆಗಳ ಕೊಡುಗೆಯೂ ಇರಲಿದೆ. ಸಾಂಸ್ಕೃತಿಕ ಹಿನ್ನೆಲೆಯುಳ್ಳ ಪಾರಂಪರಿಕ ನಗರಿ ಮೈಸೂರು ಹಾಗೂ ನಿಸರ್ಗಮಯವಾದ ಕೊಡಗಿನ ನೈಸರ್ಗಿಕತೆಯನ್ನು ಉಳಿಸಿಕೊಂಡು ಅಭಿವೃದ್ಧಿ ಕಾರ್ಯಯೋಜನೆಗಳನ್ನು ರೂಪಿಸಲಾಗುವುದು. ಮೈಸೂರಿನ ಸುತ್ತಮುತ್ತ ಪ್ರವಾಸಿ ತಾಣಗಳ ಅಭಿವೃದ್ಧಿ ಜೊತೆಗೆ ಭವಿಷ್ಯದ ಪೀಳಿಗೆಗಾಗಿ ಎರಡು ಜಿಲ್ಲೆಗಳ ನೈಸರ್ಗಿಕತೆಯನ್ನು ಸಂರಕ್ಷಣೆ ಮಾಡುವುದು ಅವಶ್ಯವಿದ್ದು, ಆಧುನಿಕ ಭಾರತಕ್ಕೆ ವಿಕಸಿತ ಭಾರತ ಕಲ್ಪನೆ ಅಭಿವೃದ್ಧಿಯ ಕೀಲಿ ಕೈ ಆಗಿದೆ ಎಂದರು.

ಮೈಸೂರನ್ನು ಹೈಟೆಕ್ ನಗರವನ್ನಾಗಿಸುವ ನಿಟ್ಟಿನಲ್ಲಿ ತಮ್ಮ ನಡೆಯೇನು ಎಂಬುದಕ್ಕೆ ಪ್ರತಿಕ್ರಿಯಿಸಿ, ಮೈಸೂರಿನ ಪರಿಸರಕ್ಕೆ ತೊಂದರೆಯಾಗದಂತೆ ಪರಿಸರ ಸ್ನೇಹಿ ಕಾರ್ಖಾನೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮೈಸೂರನ್ನು ಹೈಟೆಕ್ ನಗರವನ್ನಾಗಿಸಬಹುದಾಗಿದೆ. ವಸತಿ ಸೌಲಭ್ಯಗಳನ್ನು ಒದಗಿಸುವುದು ಮುಖ್ಯವಾಗಿದೆ ಎಂದರಲ್ಲದೆ, ಮೈಸೂರಿನಲ್ಲಿ ಐಐಟಿ, ಐಐಎಂ ಮತ್ತು ಏಮ್ಸ್ ನಂತಹ ಸಂಸ್ಥೆಗಳು ಸ್ಥಾಪನೆಯಾಗಬೇಕಾ ಎಂಬುದಕ್ಕೆ ಖಂಡಿತವಾಗಿಯೂ ಆಗಬೇಕಿದೆ. ಇಂತಹ ಸಂಸ್ಥೆಗಳು ಸ್ಥಾಪನೆಯಾಗುವ ಮೂಲಕವೇ ಅಭಿವೃದ್ಧಿಯಾಗುವುದು. ಮೈಸೂರಿನಲ್ಲಿ ಇಂತಹ ಉನ್ನತ ಶೈಕ್ಷಣಿಕ ಸಂಸ್ಥೆಗಳಿಗೆ ಡಿಮ್ಯಾಂಡ್ ಬರುವ ನಿಟ್ಟಿನಲ್ಲಿ ಕೆಲಸ ಮಾಡಲು ಉತ್ಸುಕನಾಗಿದ್ದೇನೆ ಎಂದರು.

ಅಂತರರಾಷ್ಟ್ರೀಯ ಕ್ರೀಡಾಂಗಣ, ದೇಶಿ ಕ್ರೀಡೆಗೆ ಆದ್ಯತೆ: ಐಪಿಎಲ್ ಪಂದ್ಯಗಳು ದೇಶದೆಲ್ಲೆಡೆ ನಡೆಯುತ್ತಿದೆ. ಮೈಸೂರಿನಲ್ಲೂ ಇಂಥಹ ಮೆಗಾ ಕ್ರೀಡಾ ಉತ್ಸವ ಆಯೋಜಿಸಲು ಮೈದಾನದ ಅವಶ್ಯವಿದೆ ಎಂಬ ಪ್ರಶ್ನೆಗೆ, ಮೈಸೂರಿನಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಮೈದಾನ ನಿರ್ಮಾಣವಾಗಬೇಕಿದೆ. ಅದಕ್ಕಾಗಿ ಈಗಾಗಲೇ ಜಾಗದ ಹುಡುಕಾಟವೂ ನಡೆದಿದೆ ಎಂದು ತಿಳಿದಿದ್ದೇನೆ. ರಾಜ್ಯ ಕ್ರಿಕೆಟ್ ಮಂಡಳಿಯೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಐಪಿಎಲ್ ಕ್ರಿಕೆಟ್ ಜೊತೆಗೆ ದೇಶಿಯ ಹಾಗೂ ಸ್ಥಳಿಯ ಕ್ರೀಡೆಗಳಾದ ಕುಸ್ತಿ ಕುಡ್ಡಿ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಬೇಕಿದೆ ಎಂದು ಹೇಳಿದರು.

ಮೈಸೂರಿಗೆ ಪ್ರಮುಖ ನಗರಗಳ ಸಂಪರ್ಕ: ಏರ್‌ಪೋರ್ಟ್ ಕನೆಕ್ಟಿವಿಟಿ ಕುರಿತು ಪ್ರತಿಕ್ರಿಯಿಸಿದ ಯದುವೀರ್, 2010ರಿಂದಲೇ ಮೈಸೂರಿನಿಂದ ದೇಶದ ಕೆಲವು ನಗರಗಳಿಗೆ ವಿಮಾನ ಸಂಪರ್ಕ ಒದಗಿಸಲಾಗಿದೆ. ಮುಂದಿನ ದಿನಗಳಲ್ಲಿ ವಿಮಾನಗಳ ಹಾರಾಟ ಹೆಚ್ಚಾಗಬೇಕಿದ್ದು, ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ ಸೇರಿದಂತೆ ಅಭಿವೃದ್ಧಿ ಕಾರ್ಯಗಳತ್ತ ಗಮನ ಹರಿಸಲಾಗುವುದು. ಇದರಿಂದ ಪ್ರವಾಸೋದ್ಯಮಕ್ಕೆ ಅನುಕೂಲವಾಗಲಿದೆ ಎಂದರಲ್ಲದೆ, ಮೈಸೂರು-ಕೊಡಗು ಮಾರ್ಗದ ರಸ್ತೆ ಅಭಿವೃದ್ಧಿಯೂ ಸಾಗುತ್ತಿದ್ದು, ಈಗಾಗಲೇ ಮೈಸೂರಿನಿಂದ ಕುಶಾಲನಗರದವರೆಗೆ ನಾಲ್ಕುಪಥ ರಸ್ತೆ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಮುಂದಿನ ದಿನಗಳಲ್ಲಿ ಇದರತ್ತ ಗಮನಹರಿಸುವುದಾಗಿ ತಿಳಿಸಿದರು.

ಯುವ ಸಮೂಹದ ಸದ್ಬಳಕೆ: ಮೈಸೂರನ್ನು ಮತ್ತೊಮ್ಮೆ ಸ್ವಚ್ಛ ನಗರವನ್ನಾಗಿಸಲು ತಮ್ಮ ಚಿಂತನೆ ಏನಿದೆ ಎಂಬುದಕ್ಕೆ, ಮೈಸೂರು ಮತ್ತೆ ಸ್ವಚ್ಛ ನಗರವಾಗಲು ಯುವ ಸಮೂಹ ಹಾಗೂ ಮೈಸೂರು ಜನತೆಯ ಸಹಕಾರ ಅವಶ್ಯವಾಗಿದೆ. ನಗರದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವ ಹಲವಾರು ಶಾಲಾ-ಕಾಲೇಜುಗಳಿದ್ದು, ಅಲ್ಲಿರುವ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಸ್ವಚ್ಛತಾ ಅಭಿಯಾನವನ್ನು ಕೈಗೊಳ್ಳಬೇಕಿದೆ. ಹಾಗೆಯೇ ಸಾರ್ವಜನಿಕರಲ್ಲಿಯೂ ಸ್ವಚ್ಛತಾ ಅರಿವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮೂಡಿಸಬೇಕಿದೆ. ಜೊತೆಗೆ ಯುವ ಸಮೂಹವನ್ನು ಅಭಿವೃದ್ಧಿಗೆ ಪೂರಕವಾಗಿ ಬಳಕೆ ಮಾಡಿಕೊಳ್ಳಬೇಕಿದೆ ಎಂದರು.

ರಿಯಲ್ ಎಸ್ಟೇಟ್ ಅಭಿವೃದ್ಧಿ ಪೂರಕ: ಯಾವುದೇ ರೂಪುರೇಷೆಯೇ ಇಲ್ಲದೆ ಬೆಳೆಯುತ್ತಿರುವ ರಿಯಲ್ ಎಸ್ಟೇಟ್ ಉದ್ಯಮದಿಂದ ನಗರದ ಸೌಂದರ್ಯ ಹಾಳಾಗುತ್ತಿದೆ ಎಂಬ ಸಭಿಕರ ಪ್ರಶ್ನೆಗೆ, ರಿಯಲ್ ಎಸ್ಟೇಟ್ ಅಭಿವೃದ್ಧಿಯ ಒಂದು ಭಾಗವಾಗಿದೆ. ಹಾಗಾಗಿ ರಿಯಲ್ ಎಸ್ಟೇಟ್ ಉದ್ಯಮವೂ ಬೆಳೆಯಬೇಕು. ಆದರೆ ರಿಯಲ್ ಎಸ್ಟೇಟ್ ಉದ್ಯಮ ನಗರದ ನೈಸರ್ಗಿಕ ವ್ಯವಸ್ಥೆಗೆ ಪೂರಕವಾಗಿರಬೇಕು. ರಸ್ತೆಯಲ್ಲಿ ತರಕಾರಿ ವ್ಯಾಪಾರ ನಡೆಯುತ್ತಿದೆ ಎಂಬುದಕ್ಕೆ ನಗರದಲ್ಲಿ ದೇವರಾಜ ಮಾರುಕಟ್ಟೆ ಸೇರಿದಂತೆ ಒಡೆಯರ ಆಳ್ವಿಕೆ ಕಾಲದಲ್ಲಿ ನಿರ್ಮಾಣವಾದ ಕೆಲವು ಮಾರುಕಟ್ಟೆಗಳಿವೆ. ಮುಂದಿನ ದಿನಗಳಲ್ಲಿ ರೈತರು ಹಣ್ಣು-ತರಕಾರಿ ವ್ಯಾಪಾರಕ್ಕೆ ಸೂಕ್ತ ಸ್ಥಳ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ವಿಶೇಷಚೇತನ ಮಕ್ಕಳಿಗೆ ಅವಕಾಶ: ವಿಶೇಷಚೇತನ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಎಲ್ಲಾ ಕ್ಷೇತ್ರಗಳಲ್ಲಿಯೂ ಅವರಿಗೆ ಕನಿಷ್ಠ ಶೇ.10ರಷ್ಟು ಅವಕಾಶ ಮಾಡಿಕೊಡಬೇಕು ಎಂಬ ಸಲಹೆ ಉತ್ತಮವಾಗಿದೆ. ಈ ನಿಟ್ಟಿನಲ್ಲಿ ನನ್ನ ಪ್ರಯತ್ನ ಇದ್ದೇ ಇರಲಿದೆ ಎಂದರಲ್ಲದೆ ಮಂಗಳ ಮುಖಿಯರು ಸಿಗ್ನಲ್‌ಗಳಲ್ಲಿ ನಿಲ್ಲುವುದು ಕಡಿಮೆಯಾಗಬೇಕು ಎಂಬುದಕ್ಕೆ ಪುರುಷ ಮತ್ತು ಮಹಿಳೆಯರಂತೆ ಮಂಗಳಮುಖಿಯರಿಗೆ ಎಲ್ಲಾ ಕ್ಷೇತ್ರದಲ್ಲಿಯೂ ಅವಕಾಶವಿದೆ. ಈ ಕುರಿತು ಮಂಗಳಮುಖಿಯರಲ್ಲಿ ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ ಎಂದರು. ಅರಮನೆ ಎದುರು ಪಾರಿವಾಳಗಳಿಗೆ ಆಹಾರ ಧಾನ್ಯ ಸುರಿದು ಅವುಗಳ ನೈಸರ್ಗಿಕ ಜೀವನ ಶೈಲಿಗೆ ಧಕ್ಕೆಯಾಗಿದೆ ಎಂಬುದಕ್ಕೆ ನಗರಪಾಲಿಕೆ ಅಧಿಕಾರಿಗಳೊಂದಿಗೆ ಮಾತನಾಡುತ್ತೇನೆ. ಎಲ್ಲದಕ್ಕೂ ಸಂಸದ ಸ್ಥಾನ ದಕ್ಕಬೇಕು ಎನ್ನುವ ಮೂಲಕ ತಮ್ಮನ್ನು ಬೆಂಬಲಿಸುವಂತೆ ಪರೋಕ್ಷವಾಗಿ ಮನವಿ ಮಾಡಿದರು. ರೋಟರಿ ಮೈಸೂರು ಸದಸ್ಯ ಸಂಜಯ್, ವಿವಿಧ ಸೇವಾ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ವಿವಿಧ ಸೇವಾ ಸಂಸ್ಥೆಗಳಿಂದ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮಾತನಾಡುತ್ತಿರುವುದು. ರೋಟರಿ ಮೈಸೂರು ಸದಸ್ಯ ಸಂಜಯ್ ನಿರೂಪಣೆ ಮಾಡಿದರು.

ನಡವಳಿಕೆಯಲ್ಲಿ ಬದಲಾವಣೆ ಮುಖ್ಯ...

ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುವುದರಿಂದ ಮೈಸೂರಿನ ಸ್ವಚ್ಛತೆ ಉದ್ದೇಶ ಹಾಳಾಗುತ್ತಿದೆ. ಈ ಹಾವಳಿ ತಡೆಯಲು ತಮ್ಮ ಸಲಹೆ ಏನು ಎಂಬ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಯದುವೀರ್, ಮುಖ್ಯವಾಗಿ ಜನರ ನಡವಳಿಕೆಯಲ್ಲಿ ಬದಲಾವಣೆ ತರಬೇಕು. ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಿಂದಲೇ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಬೇಕು. ನಡವಳಿಕೆ ಬದಲಾಗದಿದ್ದರೆ ಯಾವುದೂ ಸಾಧ್ಯವಿಲ್ಲ. ಹಾಗೆಯೇ ಮೈಸೂರಿನ ಪರಂಪರೆ ಉಳಿಸುವ ನಿಟ್ಟಿನಲ್ಲಿಯೂ ಈಗಾಗಲೇ ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದೇನೆ ಎನ್ನುವ ಮೂಲಕ ಮೈಸೂರು-ಕೊಡಗಿನ ಅಭಿವೃದ್ಧಿ ಕುರಿತ ತಮ್ಮ ಯೋಜನೆಗಳು, ಅನಿಸಿಕೆ, ಅಭಿಪ್ರಾಯಗಳನ್ನು ತಿಳಿಸಿದರು.

ಸಂಸ್ಥೆಗಳ ಪದಾಧಿಕಾರಿಗಳಲ್ಲಿ ಅಪಸ್ವರ... ಗೊಂದಲ....!

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಂದಲೇ ಅಪಸ್ವರ ಕೇಳಿ ಬಂದಿದ್ದು, ಇದರ ಆಯೋಜಕರ್ಯಾರು ಎಂಬುದೇ ತಿಳಿದಿಲ್ಲವಂತೆ. ಕೆಲವರು, ಆಹ್ವಾನ ನೀಡಿದ್ದರು ಭಾಗವಹಿಸಿದ್ದೇವೆ ಅಷ್ಟೇ ಎಂದು ಗೊಂದಲ ವ್ಯಕ್ತಪಡಿಸಿದ್ದಾರೆ. ಸಂವಾದ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ರೋಟರಿ ಇಂಟರ್‌ನ್ಯಾಷನಲ್, ಲಯನ್ಸ್ ಇಂಟರ್‌ನ್ಯಾಷನಲ್, ರೌಂಡ್ ಟೇಬಲ್ ಇಂಡಿಯಾ, ಲೇಡಿಸ್ ಸರ್ಕಲ್ ಇಂಡಿಯಾ, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಇನ್ನರ್ ವ್ಹೀಲ್, ಯಂಗ್ ಇಂಡಿಯನ್ಸ್(ವೈಐ), ಜಿತೋ (JITO), ಬ್ಲಡ್ ಆನ್ ಕಾಲ್ ಕ್ಲಬ್, ಕ್ರೆಡೈ, ನರೆಡ್ಕೋ ಇನ್ನಿತರ ಸೇವಾ ಸಂಸ್ಥೆಗಳ ಲೋಗೋ ಇದೆ.

ಕಾರ್ಯಕ್ರಮದ ನಂತರ ‘ಮೈಸೂರು ಮಿತ್ರ’ನೊಂದಿಗೆ ದೂರವಾಣಿ ಮೂಲಕ ಮಾತನಾಡಿದ ರೋಟರಿ ಸಂಸ್ಥೆಯೊಂದರ ಪದಾಧಿಕಾರಿ, ಕರೆದಿದ್ದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಆದರೆ ಆಯೋಜಕರು ಯಾರು ಎಂಬುದು ಗೊತ್ತಿಲ್ಲ ಎಂದು ತಿಳಿಸಿದರೆ, ನರೆಡ್ಕೋ ಪದಾಧಿಕಾರಿಯೊಬ್ಬರು, ಸಂವಾದ ಕಾರ್ಯಕ್ರಮಕ್ಕೆ ನನ್ನನ್ನು ಕರೆದಿದ್ದರು. ಆದರೆ ನಾನು ಭಾಗವಹಿಸಿಲ್ಲ. ನಮ್ಮ ಸೇವಾ ಸಂಸ್ಥೆಯ ಲೋಗೋವನ್ನು ಒಂದು ರಾಜಕೀಯ ಪಕ್ಷದ ಅಭ್ಯರ್ಥಿ ಪರವಾಗಿ ಬಳಕೆ ಮಾಡಿಕೊಂಡಿರುವುದು ತಪ್ಪು. ಇದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದಿದ್ದಾರೆ. ಹಾಗೆಯೇ ಕಾರ್ಯಕ್ರಮ ನಿರೂಪಣೆ ಮಾಡಿದ ರೋಟರಿ ಸಂಸ್ಥೆಯೊಂದರ ಸದಸ್ಯ ಸಂಜಯ್, ರಾಜಮನೆತನದಿಂದ ರಾಜಕೀಯ ಕ್ಷೇತ್ರಕ್ಕೆ ಯದುವೀರ್ ಬಂದಿದ್ದಾರೆ. ಅವರಲ್ಲಿರುವ ವಿಚಾರವನ್ನು ತಿಳಿಸುವ ಉದ್ದೇಶದಿಂದ ಸಂವಾದ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು ಎಂದರು. ಒಂದು ಪಕ್ಷದ ಪರವಾಗಿ ಸೇವಾ ಸಂಸ್ಥೆಗಳ ಲೋಗೋ ಬಳಕೆ ಕುರಿತು ಕೇಳಿದ್ದಕ್ಕೆ ಅನ್ಯ ಕಾರಣ ನೀಡಿ ಫೋನ್ ಕರೆ ಕಟ್ ಮಾಡಿದರು.

ಯೋಗ ವಿವಿ ಸ್ಥಾಪನೆ

ಮೈಸೂರು ಯೋಗ ನಗರಿಯಾಗಿದ್ದು, ಯೋಗ ವಿವಿ ಸ್ಥಾಪನೆಯಾಗಬೇಕು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂಬುದಕ್ಕೆ ಪ್ರತಿಕ್ರಿಯಿಸಿ, ಮೈಸೂರು ಯೋಗ ನಗರಿಯಾಗಿದ್ದು, ಮಾನ್ಯ ಪ್ರಧಾನಿಗಳು ಕೂಡ ಮೈಸೂರಿನಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಿದ್ದಾರೆ. ಮೈಸೂರಿನಲ್ಲಿ ಈಗಾಗಲೇ ಹಲವಾರು ಯೋಗ ಶಿಕ್ಷಣ ಸಂಸ್ಥೆಗಳಿದ್ದು ಮುಂದಿನ ದಿನಗಳಲ್ಲಿ ಯೋಗ ವಿವಿ ಸ್ಥಾಪನೆ ಅವಶ್ಯವಿದ್ದರೆ ಅದಕ್ಕೂ ನನ್ನಿಂದ ಪ್ರಯತ್ನ ನಡೆಯಲಿದೆ.

ವಿಜಯಪುರದಲ್ಲಿ 20 ಗಂಟೆ ಕೊಳವೆ ಬಾವಿಯಲ್ಲಿದ್ದ ಮಗು ರಕ್ಷಣೆ

ಸಾವು ಗೆದ್ದು ಬಂದ ಸಾತ್ವಿಕ್





ವಿಜಯಪುರ, ಏ.4– ಸತತ 20 ಗಂಟೆಗಳ ಕಾರ್ಯಾಚರಣೆ ಬಳಿಕ ವಿಜಯಪುರದ ಲಚ್ಯಾಣ ಗ್ರಾಮದಲ್ಲಿ ಕೊಳವೆ ಬಾವಿಗೆ ಬಿದ್ದಿದ್ದ 2 ವರ್ಷದ ಮಗು ಸಾತ್ವಿಕ್ ಅನ್ನು ರಕ್ಷಣಾ ತಂಡಗಳು ಯಶಸ್ವಿಯಾಗಿ ರಕ್ಷಿಸಿವೆ. ಸ್ಥಳದಲ್ಲಿಯೇ ಆಂಬುಲೆನ್ಸ್ ಹಾಗೂ ವೈದ್ಯರು ಬೀಡು ಬಿಟ್ಟಿದ್ದರಿಂದ ಮಗುವನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಗಿದೆ. ಸತೀಶ ಮುಜಗೊಂಡ –ಪೂಜಾ ಮುಜಗೊಂಡ ದಂಪತಿ ಮಗು ಸಾತ್ವಿಕ್ ಕೊಳವೆ ಬಾವಿಗೆ ಬಿದ್ದಿತ್ತು. ಸ್ಥಳದಲ್ಲಿಯೇ ಪ್ರಥಮ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದರಿಂದ ಕೊಳವೆ ಬಾವಿಯಿಂದ ಮಗುವನ್ನು ಹೊರತೆಗೆದ ತಕ್ಷಣ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ಸೇರಿಸ ಲಾಗಿದೆ. 500 ಅಡಿ ತೆರೆದ ಕೊಳವೆ ಬಾವಿಗೆ ಮಗು ಬಿದ್ದಿದ್ದು, 20 ಅಡಿ ಮೇಲೆಯೇ ಮಗು ಸಿಲುಕಿಕೊಂಡಿದ್ದರಿಂದ ರಕ್ಷಣಾ ಕಾರ್ಯಾಚರಣೆ ಬೇಗ ಮುಗಿದಿದೆ. ತಲೆಕೆಳಗಾಗಿ ಬಿದ್ದಿದ್ದರಿಂದ ಪೈಪ್‌ನಲ್ಲಿ ಮಗು ಸಿಲುಕಿತ್ತು. ಎರಡು ಕೈಗಳು ದೇಹಕ್ಕೆ ಹೊತ್ತಿಕೊಂಡಿದ್ದವು.

ಒಂದು ಹಂತದಲ್ಲಿ ರಕ್ಷಣಾ ಕಾರ್ಯಾಚರಣೆ ಮುಗಿದಿದೆ ಎನ್ನಲಾಗಿತ್ತು ಆದರೆ, ರಕ್ಷಣಾ ತಂಡಗಳು ತೋಡಿದ್ದ ಗುಂಡಿಯಿಂದ ಕೊಳವೆ ಬಾವಿಗೆ ಸಂಪರ್ಕಿಸುವ ರಂಧ್ರಚಿಕ್ಕದಾಗಿದ್ದರಿಂದ ಮಗುವನ್ನು ಹೊರತೆಗೆಯುವ ಕಾರ್ಯ ವಿಳಂಬವಾಗಿತ್ತು ಚಿಕ್ಕ ರಂಧ್ರದಲ್ಲಿ ಮಗುವನ್ನು ಹೊರತೆಗೆಯಲು ಎರಡು ಬಾರಿ ಪ್ರಯತ್ನಿಸಿ ರಕ್ಷಣಾ ತಂಡಗಳು ವಿಫಲವಾಗಿದ್ದವು. ಮಗುವಿಗೆ ಅಪಾಯ ಎಂಬ ಕಾರಣಕ್ಕೆ ಮತ್ತೊಂದು ದೊಡ್ಡ ರಂಧ್ರವನ್ನು ಕೊರೆದು, ವ್ಯಾಕ್ಯೂಮ್ ಮೂಲಕ ಸ್ವಚ್ಛಗೊಳಿಸಿ ಮಗುವನ್ನು ಹೊರತೆಗೆಯಲಾಯಿತು.

ಸೋನಿಯಾ ಗಾಂಧಿ ಸೇರಿ 14 ಮಂದಿ ರಾಜ್ಯಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ



ನವದೆಹಲಿ: ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸೇರಿದಂತೆ 14 ಮಂದಿ ಗುರುವಾರ ರಾಜ್ಯಸಭೆ ಸದಸ್ಯ ರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ನೂತನ ಸಂಸತ್ ಭವನದಲ್ಲಿ ಉಪ ರಾಷ್ಟ್ರಪತಿ ಹಾಗೂ ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಕರ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಸೋನಿಯಾ ಗಾಂಧಿ ಅವರು ರಾಜಸ್ಥಾನದಿಂದ ಮೇಲ್ಮನೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರೆ, ವೈಷ್ಣವ್ ಒಡಿಶಾದಿಂದ ರಾಜ್ಯಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಕರ್ನಾಟಕದಿಂದ ಕಾಂಗ್ರೆಸ್ ನಾಯಕ ಅಜಯ್ ಮಾಕನ್, ಉತ್ತರ ಪ್ರದೇಶದಿಂದ ಬಿಜೆಪಿ ನಾಯಕ ಆರ್‌ಪಿಎನ್ ಸಿಂಗ್ ಮತ್ತು ಪಶ್ಚಿಮ ಬಂಗಾಳದಿಂದ ಬಿಜೆಪಿ ಸದಸ್ಯ ಸಮಿಕ್ ಭಟ್ಟಾಚಾರ್ಯ, ಆಂಧ್ರಪ್ರದೇಶದಿಂದ ವೈಎಸ್‌ಆರ್‌ಸಿಪಿ ನಾಯಕರಾದ ಗೊಲ್ಲಾ ಬಾಬು ರಾವ್, ಮೇಧಾ ರಘುನಾಥ್ ರೆಡ್ಡಿ ಮತ್ತು ಯೆರುಂ ವೆಂಕಟ್ ಸುಬ್ಬಾರೆಡ್ಡಿ ಅವರು ರಾಜ್ಯಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಅವರೆಲ್ಲರೂ ರಾಜ್ಯಸಭೆಯ ಅಧ್ಯಕ್ಷರೊಂದಿಗೆ ಗುಂಪು ಛಾಯಾಚಿತ್ರ ತೆಗೆಸಿಕೊಂಡರು.

ಸೋನಿಯಾ ಗಾಂಧಿ ಅವರು ಮೊದಲ ಬಾರಿಗೆ ರಾಜ್ಯಸಭೆ ಸದಸ್ಯೆಯಾಗಿದ್ದಾರೆ. ಅವರು ರಾಜ್ಯಸಭಾ ನಾಯಕ ಪಿಯೂಷ್ ಗೋಯಲ್ ಮತ್ತು ಕಾಂಗ್ರೆಸ್ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ ಅವರ ಪುತ್ರಿ ಪ್ರಿಯಾಂಕಾ ಗಾಂಧಿ, ರಾಜ್ಯಸಭೆಯ ಉಪಾಧ್ಯಕ್ಷ ಹರಿವಂಶ್ ಮತ್ತು ಪ್ರಧಾನ ಕಾರ್ಯದರ್ಶಿ ಪಿಸಿ ಮೋದಿ ಇದ್ದರು.

ಮಹಿಳೆಯರು ಪ್ರತಿಭೆ, ಕೌಶಲದ ಮೂಲಕ ಉನ್ನತ ಸ್ಥಾನಕ್ಕೇರಬಹುದು

ಉದ್ಯಮಿ ರಚನಾ ಮಹೇಶ್ ಕಿವಿಮಾತು



ಮೈಸೂರಿನ ಕಲಾಮಂದಿರದಲ್ಲಿ ಜೆಎಸ್ಎಸ್ ಮಹಿಳಾ ಪಾಲಿಟೆಕ್ನಿಕ್‌ನ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಮಹಿಳಾ ದಿನಾಚರಣೆಯನ್ನು ಉದ್ಯಮಿ ರಚನಾ ಮಹೇಶ್ ಉದ್ಘಾಟಿಸಿದರು.

ಮೈಸೂರು, ಏ.4(ಎಂಟಿವೈ)– ಮಹಿಳೆಯರ ಸಾಧನೆಯ ಹಾದಿ ಕಠಿಣವಾಗಿರುವುದರಿಂದ ತಮ್ಮಲ್ಲಿರುವ ಪ್ರತಿಭೆ ಹಾಗೂ ಕೌಶಲ ಬಳಸಿಕೊಂಡು ಉನ್ನತ ಸ್ಥಾನಕ್ಕೆ ಏರುವಂತೆ ಉದ್ಯಮಿ ರಚನಾ ಮಹೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ನಡೆದ ಜೆಎಸ್ಎಸ್ ಮಹಿಳಾ ಪಾಲಿಟೆಕ್ನಿಕ್‌ನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳ ಬಹುಮುಖ ಪ್ರತಿಭೆಯನ್ನು ಗುರುತಿಸಿ ಅದಕ್ಕೆ ಪ್ರೋತ್ಸಾಹಿಸುವ ಮನಸ್ಸುಗಳು ಸಮಾಜದಲ್ಲಿ ಕಡಿಮೆಯಿವೆ. ಹೀಗಾಗಿ ಅವರೇ ಸ್ವಾವಲಂಬಿಗಳಾಗಬೇಕು. ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆಯಿಡಬೇಕು. ಉನ್ನತ ಶಿಕ್ಷಣ ಪಡೆದು ಉದ್ಯೋಗ ಸೃಷ್ಟಿಸುವ ನವೋದ್ಯಮಿಗಳಾಗಬೇಕು. ಪೋಷಕರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡಬೇಕು. ಓದಿನ ಜೊತೆಗೆ ಎನ್‌ಸಿಸಿ, ಎನ್‌ಎಸ್‌ಎಸ್, ಪಠ್ಯೇತರ ಸೇರಿದಂತೆ ಎಲ್ಲ ಚಟುವಟಿಕೆಗಳಲ್ಲಿ ವಿದ್ಯಾರ್ಥಿನಿಯರು ತೊಡಗಿಸಿಕೊಳ್ಳಬೇಕು. ಅದರಿಂದ ನಮ್ಮ ಸಾಮರ್ಥ್ಯ ಗೊತ್ತಾಗುತ್ತದೆ. ಬರೀ ಓದುವುದಷ್ಟೇ ಅಲ್ಲ. ಸಮಾಜದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಎದುರಿಸಲು ಶಾಲಾಕಾಲೇಜಿನ ಪಠ್ಯೇತರ ಚಟುವಟಿಕೆಗಳು ನೆರವಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಹೆಣ್ಣು ಮಕ್ಕಳಿಗೆ ಮದುವೆ ಎಂಬುದು ಎರಡನೇ ಜೀವನದಂತೆ. ಬದುಕನ್ನು ಕಟ್ಟುವ ಜವಾಬ್ದಾರಿ ಹೆಣ್ಣಿಗೆ ಬರುತ್ತದೆ. ಅದನ್ನು ನಿಭಾಯಿಸುತ್ತಲೇ ಇಷ್ಟದ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು. ಒತ್ತಡವು ಖಿನ್ನತೆ ತಂದು ಬಿಡುತ್ತದೆ. ಅದನ್ನು ಅದನ್ನು ನಿವಾರಿಸಿಕೊಳ್ಳಲು ಎಲ್ಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಗೆಲ್ಲುವುದು ಮುಖ್ಯವಲ್ಲ. ಭಾಗವಹಿಸುವುದು ಮುಖ್ಯವಾಗುತ್ತದೆ. ಪೋಷಕರು ಮಕ್ಕಳ ಮದುವೆಗೆ ಹಣ ಕೂಡಿಸಿಡುವುದೇ ಈ ಮೊದಲಿನ ಗುರಿಯಾಗಿತ್ತು. ಈಗ ಅವರನ್ನು ಸ್ವಾವಲಂಬಿಗಳಾಗಿಸಲು ಪ್ರೋತ್ಸಾಹ ನೀಡಬೇಕು. ವಿದ್ಯಾರ್ಥಿಗಳು ಪದವಿ ಮಾಡುವಾಗಲೇ ಜೀವನದ ಗುರಿ ಏನೆಂದು ಸ್ಪಷ್ಟಗೊಳಿಸಿಕೊಳ್ಳಬೇಕು. ಯೋಜನೆಯನುಸಾರ ಶ್ರಮ ವಹಿಸಿದರೆ ಸ್ಪರ್ಧಾ ಜಗತ್ತಿನಲ್ಲಿ ಗೆಲುವು ಪಡೆಯಲು ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ವಿ.ಬಿ. ಲೋಕೇಶ ಮಾತನಾಡಿದರು. ಉಜ್ವಲ ವಾರ್ಷಿಕ ಸಂಚಿಕೆಯನ್ನು ಎಸ್‌ಐಆರ್‌ಸಿ ಉಪಾಧ್ಯಕ್ಷ ರಘುವೀರ ಬಿಡುಗಡೆ ಮಾಡಿದರು. ವಿ.ಮೀರಾ, ಪಿ.ಎಂ. ಚಂದನಾ, ತೇಜಸ್ವಿನಿ ಹಾಜರಿದ್ದರು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.





"ಹಣ ನಮ್ಮನ್ನು ಕಾಪಾಡಬೇಕೇ ಹೊರತು ನಾವೇ ಅದನ್ನು ಕಾಪಾಡುವಂತಾಗಬಾರದು

ಮಾರಿಗೋಲ್ಡ್ ಮೆಸೇಜು

ಹಣ ನಮ್ಮನ್ನು ಕಾಪಾಡಬೇಕೇ ಹೊರತು, ನಾವೇ ಹಣವನ್ನು ಕಾಪಾಡುವಂತಾಗಬಾರದು ಎಂಬ ಎಳೆಯ ಮೇಲೆ ಕಥೆ ಹೆಣೆಯಲಾಗಿರುವ ಚಿತ್ರ ಮಾರಿಗೋಲ್ಡ್. ಇಂದಿನಿಂದ ತೆರೆಕಾಣುತ್ತಿರುವ ಈ ಚಿತ್ರಕ್ಕೆ ರಾಘವೇಂದ್ರ ಎಂ.ನಾಯ್ಕ ಆಕ್ಷನ್ ಕಟ್ ಹೇಳಿದ್ದು, ರಘುವರ್ದನ್ ನಿರ್ಮಾಣ ಮಾಡಿದ್ದಾರೆ. ದಿಗಂತ್, ಬಿಗ್‌ಬಾಸ್ ಸಂಗೀತ ಶೃಂಗೇರಿ ಚಿತ್ರದ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ನಿರ್ಮಾಪಕ ರಘುವರ್ಧನ್ ಮಾತನಾಡುತ್ತ, ನಮ್ಮ ಸಂಸ್ಥೆಯ 5ನೇ ಚಿತ್ರವಿದು. ನನ್ನ ನಿರೀಕ್ಷೆಗಿಂತ ಚೆನ್ನಾಗಿ ನಿರ್ದೇಶಕರು ಇಡೀ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ, ಬೇರೆ ಸ್ಟಾರ್ ಸಿನಿಮಾಗಳ ಒತ್ತಡ ಇದ್ದರೂ, ನಮ್ಮದು ಕಂಟೆಂಟ್ ಸಿನಿಮಾ ಆಗಿದ್ದು, ಕನ್ನಡ ಜನರನ್ನು ಸೆಳೆಯತ್ತೆಂಬ ಭರವಸೆಯಿದೆ. ಆಸೆಯೇ ದು:ಖಕ್ಕೆ ಮೂಲ. ಜೀವನದಲ್ಲಿ ಹಣವೇ ಎಲ್ಲಾ ಅಲ್ಲ, ಅದಿಲ್ಲದಿದ್ರೂ ಸುಖವಾಗಿ ಬದುಕಬಹುದು ಎಂಬ ಸಂದೇಶವನ್ನು ನಮ್ಮ ಚಿತ್ರದಲ್ಲಿ ಹೇಳಿದ್ದೇವೆ. ನಾಲ್ಕು ಜನರ ಸುತ್ತ ಈ ಚಿತ್ರದ ಬಹುತೇಕ ಕಥೆ ನಡೆಯುತ್ತದೆ. ಹಣದ ಆಸೆಗೆ ಬಿದ್ದು ಗೋಲ್ಡ್ ಬಿಸ್ಕಟ್ ಮಾರಲು ಹೊರಟ ಈ ನಾಲ್ವರು ಮುಂದೆ ಅದರಿಂದ ಏನೇನೆಲ್ಲ ತೊಂದರೆಗಳನ್ನು ಅನುಭವಿಸಬೇಕಾಯ್ತು ಎನ್ನುವುದೇ ಚಿತ್ರದ ಕಥೆ. ಚಿತ್ರದುರ್ಗ, ಸಕಲೇಶಪುರ ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಿಸಿದ್ದೇವೆ, ಈ ಚಿತ್ರದಲ್ಲಿ ದಿಗಂತ್ ಅವರನ್ನು ಬೇರೆಯದೇ ರೀತಿ ತೋರಿಸಿದ್ದೇವೆ, ದಿಗಂತ್, ಸಂಗೀತಾ, ಯಶ್ ಶೆಟ್ಟಿ ಹಾಗೂ ಕಾಕ್ರೋಚ್ ಸುಧೀ ಈ ನಾಲ್ಕು ಜನ ಸ್ನೇಹಿತರಾಗಿ ಕಾಣಿಸಿಕೊಂಡಿದ್ದಾರೆ ಎಂದು ಹೇಳಿದರು. ತಾಂತ್ರಿಕ ವರ್ಗ ಕೆ.ಎಸ್.ಚಂದ್ರಶೇಖರ್ ಅವರ ಕ್ಯಾಮೆರಾವರ್ಕ್, ವೀರ ಸಮರ್ಥ್ ಅವರ ಸಂಗೀತ, ಯೋಗರಾಜ್ ಭಟ್, ವಿಜಯ್ ಭರಮಸಾಗರ ಸಾಹಿತ್ಯವಿದ್ದು, ರಘು ನಿಡವಳ್ಳಿ ಸಂಭಾಷಣೆಯಿದೆ. ದಿಗಂತ್ ಮಂಚಾಲೆ, ಸಂಗೀತ ಶೃಂಗೇರಿ, ಸಂಪತ್ ಮೈತ್ರೇಯ, ಯಶ್ ಶೆಟ್ಟಿ, ಕಾಕ್ರೋಚ್ ಸುಧಿ, ವಜ್ರಾಂಗ್ ಶೆಟ್ಟಿ, ಬಲ ರಾಜವಾಡಿ, ಮಹಂತೇಶ್, ಸಂದೀಪ್ ಮಲಾನಿ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಇಂದ್ರಿಯಗಳ ಸುತ್ತ 'ಪಂಚೇಂದ್ರಿಯಂ'

ಮಾನವನ 5 ಪ್ರಮುಖ ಇಂದ್ರಿಯಗಳಾದ ದೃಷ್ಟಿ, ಶ್ರವಣ, ವಾಸನೆ, ರುಚಿ ಹಾಗೂ ಸ್ಪರ್ಶ ಇವುಗಳನ್ನಿಟ್ಟುಕೊಂಡು ನಿರ್ದೇಶಕ ಆರನ್ ಕಾರ್ತೀಕ್ ವೆಂಕಟೇಶ್ ಅವರು 'ಪಂಚೇಂದ್ರಿಯಂ' ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಪಂಚೇಂದ್ರಿಯಗಳನ್ನು ದೇವರು ನಮಗೆ ಸದ್ಬಳಕೆಗಾಗಿ ನೀಡಿದ್ದಾನೆ. ಆದರೆ ಅವನ್ನು ನಾವು ದುರ್ಬಳಕೆ ಮಾಡಿಕೊಂಡಾಗ ಏನಾಗುತ್ತದೆ ಎಂದು ನಿರ್ದೇಶಕ ಕಾರ್ತೀಕ್ ವೆಂಕಟೇಶ್ ಈ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಹೆಚ್. ಸೋಮಶೇಖರ್ ಅವರು ನಿರ್ಮಿಸಿರುವ ಹಾಗೂ ಆರನ್ ಕಾರ್ತಿಕ್ ವೆಂಕಟೇಶ್ ಕಥೆ, ಚಿತ್ರಕಥೆ ಬರೆದಿರುವ "ಪಂಚೇಂದ್ರಿಯಂ" ಚಿತ್ರದ ಹಾಡುಗಳು ಹಾಗೂ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಡಾ॥ವಿ.ನಾಗೇಂದ್ರಪ್ರಸಾದ್ ಅವರು ಟೀಸರ್, ಹಾಡುಗಳನ್ನು ಬಿಡುಗಡೆಗೊಳಿಸಿ ಶುಭ ಹಾರೈಸಿದರು.

ಪಂಚೇಂದ್ರಿಯಗಳ ಕುರಿತಂತೆ ಮಾಡಿರುವ ಚಿತ್ರವಿದು, ಚಿತ್ರದಲ್ಲಿ ಆರು ಹಾಡುಗಳು ಹಾಗೂ ನಾಲ್ಕು ಸಾಹಸ ಸನ್ನಿವೇಶಗಳಿವೆ, ಹೆಚ್.ಸೋಮಶೇಖರ್ ನಿರ್ಮಾಣದ ಈ ಚಿತ್ರಕ್ಕೆ ಅಫ್ಜಲ್ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ. ಅಲ್ಲದೆ ದ್ವಿತೀಯ ನಾಯಕನಾಗಿಯೂ ಅಭಿನಯಿಸಿದ್ದಾರೆ. ಚಿತ್ರದ ನಾಯಕನಾಗಿ ವಿನಯ್ ಸೂರ್ಯ ಹಾಗೂ ನಾಯಕಿಯರಾಗಿ ವಿದ್ಯಾಶ್ರೀ ಮತ್ತು ರಾಘವಿ ನಟಿಸಿದ್ದಾರೆ. ದೇವರಾಯನದುರ್ಗ, ದಾಬಸ್‌ಪೇಟೆಯ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಜಕಣಾಚಾರಿ ಅವನ ತಮ್ಮ ಶುಕ್ಲಾಚಾರಿ ಎಂಬ ಚಿತ್ರದಲ್ಲಿ ಬಾಲನಟನಾಗಿ ಅಭಿನಯಿಸಿದ್ದ ವಿನಯ ಸೂರ್ಯ ಈ ಚಿತ್ರದ ಮೂಲಕ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಯತಿರಾಜ್, ವಿಕ್ಟರಿ ವಾಸು, ಗಣೇಶ್‌ರಾವ್ ಕೇಸರಕರ್ ಹಾಗೂ ಪವನ್ ನಟಿಸಿದ್ದಾರೆ. ಸಿರಿಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

'ಮುಕ್ತ ಮನಸು'ಗಳ ಪ್ರೇಮಕ್ಕೆ ಸಂದ ಜಯ




ನಿಷ್ಕಲ್ಮಶವಾದ ಪ್ರೀತಿ ಕೊನೇ ತನಕ ಉಳಿಯುತ್ತದೆ ಎಂಬ ಅಂಶವನ್ನಿಟ್ಟುಕೊಂಡು ಆರ್.ಸಿ. ರಂಗಶೇಖರ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರ 'ಮುಕ್ತಮನಸು', ಎಸ್.ಎಲ್.ಜೆ. ಪ್ರೊಡಕ್ಷನ್ಸ್ ಅಡಿಯಲ್ಲಿ ಮೈಸೂರು ಮೂಲದ ವೆಂಕಟೇಶ್ ಅವರು ಈ ಚಿತ್ರವನ್ನು ನಿರ್ಮಿಸಿದ್ದು, ಬೋರೇಗೌಡ, ಲೋಕೇಶ್, ಜಿ.ಎನ್.ವೀಣಾ ಸಹ ನಿರ್ಮಾಪಕರಾಗಿ ಕೈ ಜೋಡಿಸಿದ್ದಾರೆ.

ಇತ್ತೀಚೆಗೆ ಈ ಚಿತ್ರದ ಹಾಡುಗಳು ಮತ್ತು ಟ್ರೇಲರ್ ಬಿಡುಗಡೆ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ರಂಗ ಶೇಖರ್, ನಾನು ಮೂಲತಃ ರಂಗಭೂಮಿ ಕಲಾವಿದ. ಪ್ರೇಮಿಗಳು ಯಾರೇ ಆಗಿದ್ದರೂ, ಮುಕ್ತವಾಗಿ ಯಾವುದೇ ರೀತಿಯ ಕಲ್ಮಶ ಇಲ್ಲದ ಪ್ರೀತಿ ಹೇಗೆ ಕೊನೆಯತನಕ ಉಳಿದುಕೊಳ್ಳುತ್ತದೆ ಎಂಬುದನ್ನು ಈ ಚಿತ್ರದಲ್ಲಿ ನಾಯಕಿಯ ಮೂಲಕ ಹೇಳಲಾಗಿದೆ. ಹಳ್ಳಿಯಿಂದ ಪಟ್ಟಣಕ್ಕೆ ಓದಲು ಬರುವ ಆಕೆಗೆ ಸಿಟಿಯಲ್ಲಿ ಒಬ್ಬನೊಂದಿಗೆ ಲವ್ ಆಗುತ್ತದೆ. ಇವರ ಪ್ರೀತಿಗೆ ಮನೆಯಲ್ಲಿ ಹಿರಿಯರ ವಿರೋಧ ಎದುರಾದಾಗ ಮುಕ್ತ ಮನಸುಗಳ ಪ್ರೀತಿ ಯಾವ ಹಂತಕ್ಕೆ ತಲುಪುತ್ತದೆ, ಕೊನೆಗೆ ಇವರಿಬ್ಬರು ಒಂದಾಗುತ್ತಾರಾ, ಇಲ್ವಾ ಎಂದು ಹೇಳುವುದೇ ಚಿತ್ರದ ಕಾನ್ಸೆಪ್ಟ್ ಎಂದು ಹೇಳಿದರು. ಡಿಕೆಡಿ-5ರ ಸ್ಪರ್ಧಿಯಾಗಿದ್ದ ಮೈಸೂರಿನ ಮೋಹನ್ ರಂಗನಾಥ್ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಆಟೋ ಚಾಲಕನ ಪಾತ್ರವನ್ನು ನಿಭಾಯಿಸಿದ್ದಾರೆ. ಬೆಂಗಳೂರಿನ ಮಾನ್ಯ ಚಿತ್ರದ ನಾಯಕಿ ಮನಸು ಪಾತ್ರ ನಿರ್ವಹಿಸಿದ್ದಾರೆ.

ಮುಖ್ಯ ಅತಿಥಿ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣಗೌಡ ಮಾತನಾಡುತ್ತ, ಈಗ ದೇಶದಲ್ಲಿ ಎಲ್ಲಾ ಭಾಷೆಯ ಸಿನಿಮಾಗಳಿಗೆ ಪ್ರೇಕ್ಷಕರ ಕೊರತೆಯಿದೆ. ಹೊಸಬರ ಚಿತ್ರಗಳಿಗೆ ಪ್ರೋತ್ಸಾಹಬೇಕು. ಗೆದ್ದ ಸಿನಿಮಾಗಳೆಲ್ಲ, ಒಳ್ಳೆಯ ಚಿತ್ರಗಳಾಗಿರುವುದಿಲ್ಲ. ಹಾಗಂತ ಸೋತ ಚಿತ್ರಗಳೆಲ್ಲ ಕೆಟ್ಟ ಚಿತ್ರಗಳು ಅಂತ ಹೇಳಲಾಗದು. ಯಾವುದೋ ಕಾರಣಕ್ಕೆ ಗೆದ್ದಿರಬಹುದು ಅಥವಾ ಸೋತಿರುತ್ತವೆ ಎಂದು ಹೇಳಿದರು. ಹಿರಿಯನಟ ಶೋಭರಾಜ್, ರಮೇಶ್ ಪಂಡಿತ್, ಅಪರ್ಣ, ನಾಗರತ್ನ, ಸೆಂಚುರಿಗೌಡ, ಜಾನು, ಮಂಜು ಬಿಳಿಗೆರೆ, ಮಧು ಮುಂತಾದವರು ಉಳಿದ ಪಾತ್ರಗಳಲ್ಲಿದ್ದಾರೆ. ಐದು ಹಾಡುಗಳಿಗೆ ವಿನು ಮನಸು ಸಂಗೀತ ಸಂಯೋಜಿಸಿದ್ದಾರೆ. ರವಿ ಅವರ ಛಾಯಾಗ್ರಹಣ ರವಿ, ಕೌರವ ವೆಂಕಟೇಶ್ ಅವರ ಸಾಹಸ ಈ ಚಿತ್ರಕ್ಕಿದೆ. ಮೈಸೂರು, ಮಂಡ್ಯ ಸುತ್ತಮುತ್ತಲ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಜಾಜಿಯ ಹಾಡಿಗೆ ಸಾಥ್ ನೀಡಿದ ದರ್ಶನ್



ಹೊಸ ಪ್ರತಿಭೆಗಳಿಗೆ ಸದಾ ಪ್ರೋತ್ಸಾಹ ನೀಡುವ ನಟ ದರ್ಶನ್ ಇದೀಗ ಜಾಜಿ ತಂಡಕ್ಕೆ ಜೊತೆಯಾಗಿದ್ದಾರೆ. ಕೈನೋವಿನ ನಡುವೆಯೂ ಆಗಮಿಸಿದ ದರ್ಶನ್, ಜಾಜಿ ಎಂಬ ಆಲ್ಬಂ ಸಾಂಗ್‌ನ್ನು ರಿಲೀಸ್ ಮಾಡಿದರು. ನಿರ್ಮಾಪಕಿ ಶೈಲಜಾನಾಗ್, ಸಂಗೀತ ನಿರ್ದೇಶಕ ವಿ.ಹರಿಕೃಷ್ಣ, ಶಾಸಕ ಸತೀಶ್ ರೆಡ್ಡಿ ಸೇರಿ ಹಲವರು ಈ ಸಮಾರಂಭದಲ್ಲಿ ಹಾಜರಿದ್ದರು. ಮಾಜಿ ಉಪಮಹಾಪೌರ ಮೋಹನ್‌ರಾಜು ಅವರ ಪುತ್ರಿ ಜಾಜಿ ಅವರು ಈ ಹಾಡಲ್ಲಿ ನಟಿಸಿದ್ದಾರೆ. ಸುಮೋ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸುನೀತಾ ಮೋಹನ್ ರಾಜು ಅವರು ಈ ಮ್ಯೂಸಿಕ್ ಸಾಂಗ್‌ನ್ನು ನಿರ್ಮಿಸಿದ್ದು, ಹರ್ಷಿತ್ ಗೌಡ ಸಾಹಿತ್ಯ ಬರೆದು ಸಂಗೀತ ಸಂಯೋಜಿಸಿದ್ದಾರೆ. ಕುಮಾರ್ ಅವರ ಛಾಯಾಗ್ರಹಣ, ಮೋಹನ್ ಅವರ ನೃತ್ಯ ನಿರ್ದೇಶನ, ಐಶ್ವರ್ಯ ರಂಗರಾಜನ್ ಅವರ ಗಾಯನ ಈ ಹಾಡಿಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ದರ್ಶನ್ ಅವರು, ಸ್ನೇಹಿತ ಮೋಹನ್ ರಾಜು, ತಮ್ಮ ಮಗಳು ನೃತ್ಯ ಕಲಿಯುತ್ತಿರುವ ಬಗ್ಗೆ ಹೇಳಿದರು. ಮಗಳ ಹೆಸರು ಜಾಜಿ ಎಂದರು. ಈಗಿನ ಟ್ರೆಂಡ್‌ನಲ್ಲಿ ಜಾಜಿ ಎನ್ನುವ ಹೆಸರು ಕೇಳಿ ಆಶ್ಚರ್ಯವಾಯಿತು. ಅವರ ಮಗನ ಹೆಸರು ಜಾಣ ಅಂತ ತಿಳಿದು ಇನ್ನೂ ಹೆಚ್ಚಿನ ಆಶ್ಚರ್ಯವಾಯಿತು. ಜಾಜಿ ಅವರ ನೃತ್ಯ ಎಷ್ಟು ಚೆನ್ನಾಗಿದೆ ಅಂತ ಈ ಹಾಡೇ ಹೇಳುತ್ತದೆ ಎಂದು ಹೇಳಿದರು. ನನ್ನ ಮಗಳು ಜಾಜಿ ದೊಡ್ಡ ಕಲಾವಿದೆಯಾಗಬೇಕೆಂಬುದು ರಂಗಭೂಮಿ ಕಲಾವಿದರಾದ ತಂದೆ ಬೋರೇಗೌಡರ ಕನಸಾಗಿತ್ತು. ಆ ಕನಸು ಇಂದು ನನಸಾಗಿದೆ. ನನ್ನ ಮಗಳ ಮೊದಲ ಹಾಡನ್ನು ದರ್ಶನ್ ರಿಲೀಸ್ ಮಾಡಿ ಆಕೆಗೆ ಹರಸಿದ್ದು, ನಿಜಕ್ಕೂ ಅವಳ ಪುಣ್ಯ ಎನ್ನಬಹುದು.

ಅವಳ ಜವಾಬ್ದಾರಿ ಇನ್ನೂ ಹೆಚ್ಚಿದೆ ಎಂದರು. ಜಾಜಿ ಮಾತನಾಡುತ್ತ, ನಾನು ಎರಡೂವರೆ ವರ್ಷದವಳಿದ್ದಾಗ ಮೊದಲ ಬಾರಿಗೆ ನೃತ್ಯಪ್ರದರ್ಶನ ನೀಡಿದ್ದೆ, ಅದಕ್ಕೆ ಕಾರಣ ನನ್ನ ತಾತ. ಅವರ ಆಸೆಯಂತೆ ಇಂದು ಭರತನಾಟ್ಯ ಸೇರಿದಂತೆ ನಾಲ್ಕು ಪ್ರಕಾರದ ನೃತ್ಯಗಳನ್ನು ಕಲಿತಿದ್ದೇನೆ. ನನ್ನ ಮೊದಲ ಹಾಡನ್ನು ದರ್ಶನ್ ಅವರು ಬಿಡುಗಡೆ ಮಾಡುತ್ತಾರೆಂದು ಕನಸಿನಲ್ಲೂ ಎಣಿಸಿರಲಿಲ್ಲ ಎಂದು ಹೇಳಿದರು.

ಸಿನಿಪದಬಂಧ-520

1						2				3
				4						
5								6		
						7				8
9				10						
						11				
		12				13				
14				15						
						16				
17										
18							19			

ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1. ಮಾಲಾಶ್ರೀ ಚಂಡಿ ಅವತಾರಕ್ಕೆ ಎಸ್. ಮಹೇಂದರ್ ನಿರ್ದೇಶಕ 4
2. ಎ. ವಿ. ಶೇಷಗಿರಿರಾವ್ ನಿರ್ದೇಶನದ ಪಕ್ಷಿಯೊಂದರ ನಯನ 5
5. ಪ್ರಜ್ವಲ್ ದೇವರಾಜ್ ನಡೆಸಿದ ಉತ್ಸವ 5
7. ರಾಜೇಶ್ ಅಭಿನಯದ ಚಿನ್ನದ ನೆಲ 5
9. ವಿಷ್ಣುವಿನ ಹತ್ತು ವೇಷ 5
13. ವೈಕುಂಠದಲ್ಲಿ ಕದ ಕಾಯ್ದವರು 5
14. ಬೆಟ್ಟದಲ್ಲಿ ಅರಳಿದ ಪುಷ್ಪ 5
16. ಪ್ರಭಾಕರ್ ಅಭಿನಯದ ಹೆತ್ತವಳ ಪ್ರೀತಿ 5
18. ಜಗ್ಗೇಶ್-ಸಾಂಘವಿ ಅಭಿನಯದ ಚಿತ್ರ 5
19. "ಹೋಗದಿರಿ ಸೋದರರೇ..." ಗೀತೆಯ ಚಿತ್ರ 4

ವಿಜೇತರು: ಆಯಪಂಡ ಪ್ರೇಮಾ ಮೊಣ್ಣಪ್ಪ, C/O ತೂಕ್ ಬೊಳಕ್ ಪತ್ರಿಕೆ, ಮೂರ್ನಾಡು ರಸ್ತೆ, ವಿರಾಜಪೇಟೆ-ಕೊಡಗು



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 519ರ ಉತ್ತರ

ಒ	ಗ್ಗ	ರ	ಣೆ			ಮ	ಹಾ	ಭಾ	ರ	ತ
ಲ				ಧ		ಧು				ರ್ಕ
ವಿ	ಜ	ಯ	ವಾ	ಣಿ		ವ		ಮೆ		
ನ						ನ	ರ	ಹಂ	ತ	ಕ
ಉ	ಳು	ವ	ಯೋ	ಗಿ				ದಿ		ಲ್ಲಿ
ಡು				ಡ್ಡ		ಗೀ				ವೀ
ಗೊ		ಉಂ				ತಾ	ಳಿ	ಯ	ಆ	ಣೆ
ರೆ	ತಾ	ಗು	ನು	ಮಿ						ನು
		ರ		ಲ್ತ್ರಿ		ದೇ	ವ	ರ	ಗು	ಡಿ
ರಾ				ಮಾ		ವ				ಯಿ
ಮು	ದ್ದಿ	ನ	ಮಾ	ವ			ಗಾ	ಳಿ	ಮಾ	ತು

ಮೇಲಿನಿಂದ ಕೆಳಕ್ಕೆ

1. ಶಿವಣ್ಣನಿಗೆ ಇಷ್ಟವಾದವಳು ಸುಧಾರಾಣಿ 8
2. ಚಿತ್ರ ನಿರ್ಮಿಸಲು ನಿರ್ಮಾಪಕನಿಗೆ ಬೇಕಾದ್ದು 4
3. ಕಣ್ಣು ತೆರೆಸಿದವಳು ಇಲ್ಲಿ ತಲೆಕೆಳಗು 2
4. ಗೌರಿಯೊಂದಿಗೆ ಬಂದಾಕೆ 2
6. ಹುಣ್ಣಿಮೆಯಂತಿರುವ ನಟಿ 3
8. ವಿಷ್ಣುವರ್ಧನ್-ಗೀತಾ ಅಭಿಯನಯದ ಚಿತ್ರಕ್ಕೆ ಕೆ.ಎಸ್.ಎಲ್ ಸ್ವಾಮಿ ನಿರ್ದೇಶಕ 8
10. ಮನ್ಮಥನ ಹೆಂಡತಿ ವಿಜ್ಞಾನ ಓದಿದ್ದಾಳೆ 2
11. ಗಜದೊಡನೆ ಅಂತರವಿರಿಸಿಕೊಂಡ ಪ್ರಾಣಿ 2
12. ಸರದ ನಡುವೆ ನಡೆದ ಯುದ್ಧ 3
15. ಶಂಕರ್ ನಾಗ್ ಸೋಲದ ಪುತ್ರ 4
16. ಬಂಜೆಯ ತೊಟ್ಟಿಲು ಕಥೆ ಆಧಾರಿತ ಚಿತ್ರ 2
17. ಯಾರೇ ನೀನು ಚೆಲುವೆಯ ಡಯಾನ 2

ಕನ್ನಡಕ್ಕೆ ಮತ್ತೊಬ್ಬ ಪ್ರತಿಭಾವಂತ ಕ್ಯಾಮರಾಮನ್ ಸುನೀತ್ ಹಲಗೇರಿ



ಕನ್ನಡ ಚಿತ್ರರಂಗದಲ್ಲೀಗ ಸಾಕಷ್ಟು ಯುವ ಪ್ರತಿಭೆಗಳ ಆಗಮನವಾಗುತ್ತಿದೆ. ಕಲಾವಿದರ ಜೊತೆ ಜೊತೆಗೆ ತಾಂತ್ರಿಕ ವಿಭಾಗದಲ್ಲೂ ಹೊಸಬರ ಕೈಚಳಕವೇ ಎದ್ದು ಕಾಣುತ್ತಿದೆ. ಒಂದು ಚಿತ್ರ ತೆರೆಯ ಮೇಲೆ ಸುಂದರವಾಗಿ ಕಾಣಬೇಕಾದರೆ, ಅದರ ಕ್ಯಾಮೆರಾ ವರ್ಕ್ ಚೆನ್ನಾಗಿರಬೇಕು. ಚಿತ್ರದ ದೃಶ್ಯವನ್ನು, ಕಲಾವಿದರನ್ನು ಆಕರ್ಷಕವಾಗಿ ತೋರಿಸುವಲ್ಲಿ ಛಾಯಾಗ್ರಾಹಕನ ಕೈಚಳಕ ತುಂಬಾ ಪ್ರಮುಖವಾಗುತ್ತದೆ. ಇತ್ತೀಚೆಗೆ ತೆರೆಕಂಡ ಜೋಗ್ 101 ಚಿತ್ರದ ಕ್ಯಾಮರಾ ವರ್ಕ್ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿತ್ತು. ಅದಕ್ಕೆ ಕಾರಣವಾಗಿದ್ದು ಇಡೀ ಚಿತ್ರವನ್ನು ಅಷ್ಟು ಚೆನ್ನಾಗಿ ಸೆರೆಹಿಡಿದ ಕ್ಯಾಮರಾಮನ್ ಸುನೀತ್ ಹಲಗೇರಿ.

ಈ ಯುವ ಪ್ರತಿಭೆ ನಾಲ್ಕನೇ ಚಿತ್ರದಲ್ಲೇ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ. ರಂಗಪಯಣ, ಸಾತ್ವಿಕ ತಂಡದಲ್ಲಿ ಲೈಟಿಂಗ್ ಡಿಸೈನರ್ ಆಗಿ ಕೆಲಸ ಮಾಡುವ ಮೂಲಕ ಹವ್ಯಾಸಿ ರಂಗಭೂಮಿಯಲ್ಲಿ ತನ್ನ ಪಯಣ ಆರಂಭಿಸಿದ ಸುನೀತ್ ಹಲಗೇರಿಗೆ ಮೊದಲಿಂದಲೂ ಫೋಟೋಗ್ರಫಿಯಲ್ಲಿ ಹೆಚ್ಚು ಆಸಕ್ತಿಯಿತ್ತು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ರಾಜಕೀಯ ಅಧಿಕಾರ ನೀಡಿ ಸಂಸತ್ತಿಗೆ ಆಯ್ಕೆ ಮಾಡಿ

ಚಾ.ನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ




ಮೂಗೂರಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಸುನೀಲ್ ಬೋಸ್ ಮತಯಾಚಿಸಿದರು. ಮತ್ತೊಂದು ಚಿತ್ರದಲ್ಲಿ ಸುನೀಲ್ ಬೋಸ್ ತ್ರಿಪುರಸುಂದರಿ ಅಮ್ಮನವರಿಗೆ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಏ.4– ಕಳೆದೆರಡು ದಶಕಗಳಿಂದ ರಾಜಕೀಯವಾಗಿ ಬೆಳೆಸಿರುವ ತಿ.ನರಸೀಪುರ ಕ್ಷೇತ್ರದ ಜನತೆ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಕೈ ಹಿಡಿದು ರಾಜಕೀಯ ಅಧಿಕಾರ ಕೊಡುವ ಮೂಲಕ ಸಂಸತ್ತಿಗೆ ಆಯ್ಕೆ ಮಾಡಬೇಕು ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ ಮಾಡಿದರು.

ಸಚಿವ ಹೆಚ್.ಸಿ.ಮಹದೇವಪ್ಪ ಅವರನ್ನು ರಾಜಕೀಯವಾಗಿ ಕೈ ಹಿಡಿದ ತಾಲೂಕಿನ ಮೂಗೂರು ಗ್ರಾಮದಿಂದ ಗುರುವಾರ ಮತಯಾಚನೆ ಆರಂಭಿಸಿ, ಇಲ್ಲಿನ ವಾಲ್ಮೀಕಿ ಭವನದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ನನ್ನನ್ನು ರಾಜಕೀಯವಾಗಿ ಗುರ್ತಿಸಿದ ತಿ.ನರಸೀಪುರ ತಾಲೂಕಿನ ಜನರು ಲೋಕಸಭಾ ಸದಸ್ಯನಾಗಿ ಆಯ್ಕೆ ಮಾಡಬೇಕು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೈ ಹಿಡಿದಂತೆ ಲೋಕಸಭೆ ಚುನಾವಣೆಯಲ್ಲೂ ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.

4 ಅವಧಿಗೆ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಬೆಂಬಲಿಸಿದ್ದರಿಂದಲೇ ಅವರು ರಾಜ್ಯ ಮಟ್ಟದಲ್ಲಿ ನಾಯಕರಾಗಿ ಬೆಳೆಯಲು ಸಾಧ್ಯವಾಯಿತು. ಕಳೆದ 2008 ರಿಂದಲೂ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ನನ್ನನ್ನು ನಿಮ್ಮ ಮನೆ ಮಗನಂತೆ ಬೆಳೆಸಿದ್ದೀರಿ. ಪಕ್ಷ ಸಂಘಟನೆಗೆ ದುಡಿದರೂ ಮೂರು ಚುನಾವಣೆಗಳಲ್ಲಿ ಅವಕಾಶ ಸಿಗಲಿಲ್ಲ. ದೆಹಲಿ ಹಾಗೂ ರಾಜ್ಯ ಕಾಂಗ್ರೆಸ್ ನಾಯಕರು ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿದ್ದಾರೆ. ನರಸೀಪುರ ಕ್ಷೇತ್ರದ ಪ್ರತಿಯೊಂದು ಬೂತ್‌ನಲ್ಲಿ ಎಷ್ಟೆಷ್ಟು ಮತ ಬರಲಿದೆ ಎಂದು ಇನ್ನುಳಿದ 7 ಕ್ಷೇತ್ರಗಳ ಜನರಲ್ಲಿ ಕುತೂಹಲವಿದೆ. ಹಾಗಾಗಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಂದಿದ್ದಕ್ಕಿಂತ 50ರಿಂದ 100 ಮತಗಳು ಹೆಚ್ಚುವರಿ ಮತಗಳು ಬರಬೇಕು. ಇದು ನಮ್ಮೆಲ್ಲರಿಗೂ ಸವಾಲಿನ ಕೆಲಸ ಎಂದರು.

ಲೋಕಸಭಾ ಕ್ಷೇತ್ರ ವಿಶಾಲವಾಗಿರುವುದರಿಂದ ಪ್ರತಿಯೊಂದು ಗ್ರಾಮಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಗ್ರಾಪಂ ವ್ಯಾಪ್ತಿಯಲ್ಲಿ ಚುನಾವಣೆ ಪ್ರಚಾರ ಸಭೆ ನಡೆಸಿ, ಮತಯಾಚಿಸುತ್ತಿದ್ದೇನೆ. ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತ ಹಾಗೂ ಮುಖಂಡರು ಆಯಾಯ ಬೂತ್‌ಗಳಲ್ಲಿ ಖುದ್ದಾಗಿ ನಿಂತು ಜನರ ಮತಯಾಚಿಸಿ, ಪಕ್ಷದ ಗೆಲುವಿಗೆ ಶ್ರಮಿಸಬೇಕು ಎಂದರು.

ಪ್ರಚಾರ ಸಭೆಗೂ ಮುನ್ನಾ ಸುನೀಲ್ ಬೋಸ್ ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಈ ವೇಳೆ ಡೈರಿ ಅಧ್ಯಕ್ಷ ಎಂ.ಎಂ.ಬಸವಣ್ಣ, ಎಸ್ಸಿ/ಎಸ್ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲು, ಗ್ರಾಪಂ ಸದಸ್ಯೆ ಪಾರ್ವತಮ್ಮ, ಮಾಜಿ ಸದಸ್ಯರಾದ ಎಂ.ಬಿ.ಸಾಗರ್, ಹೊಸಹಳ್ಳಿ ಮಾದೇಶ, ಗುತ್ತಿಗೆದಾರ ಜಗದೀಶ್, ದಿಲೀಪ್ ಕುಮಾರ್, ಕೇತಹಳ್ಳಿ ಮಂಜು, ಮುಖಂಡರಾದ ಪೂರ್ವಜ್ ವಿಶ್ವಾಥ್, ಲಕ್ಷ್ಮೀನಾರಾಯಣ, ಗುರುಸಿದ್ದಪ್ಪ ದೇವಾನಂದ, ಎಂ.ಎನ್.ಸೋಮಣ್ಣ, ಮಾರ್ಕೆಟ್ ನಾಗರಾಜು, ಎಂ.ಶಿವಮೂರ್ತಿ, ಎಂ.ನಾಗರಾಜು, ಗಾರೆ ಮಹದೇವಯ್ಯ, ಮಹದೇವಸ್ವಾಮಿ, ಯಜಮಾನ್ ರಾಜು, ರಮೇಶ್, ಗಿರೀಶ್, ನಿಂಗರಾಜು, ಪುಟ್ಟಸ್ವಾಮಿ, ಶಂಕರ ಇನ್ನಿತರರಿದ್ದರು.

ಸಚಿವ ಹೆಚ್.ಸಿ.ಮಹದೇವಪ್ಪ ಅವರನ್ನು ರಾಜಕೀಯವಾಗಿ ಕೈ ಹಿಡಿದಂತೆ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಅವರ ಪುತ್ರ, ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರಿಗೂ ರಾಜಕೀಯ ಶಕ್ತಿ ತುಂಬಬೇಕಾದ ಜವಾಬ್ದಾರಿ ಮೂಗೂರು ಹೋಬಳಿ ಮುಖಂಡರು ಹಾಗೂ ಕಾರ್ಯಕರ್ತರ ಮೇಲಿದೆ. ಹೀಗಾಗಿ ಮತದಾರರಿಗೆ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ತಿಳಿಸಿ ಹೆಚ್ಚಿನ ಮತ ಕೊಡಿಸಬೇಕು. ಬಿಜೆಪಿ ಕೇಂದ್ರ ಸರ್ಕಾರ ದೇಶದಲ್ಲಿ ಯಾವುದೇ ಅಭಿವೃದ್ಧಿ ಮಾಡದೆ ಧರ್ಮ ಮತ್ತು ದೇವರ ಹೆಸರಿನಲ್ಲಿ ಕೋಮು ಪ್ರಚೋದನಕಾರಿ ಗಲಭೆ ಮಾಡಿರುವುದೇ ಸಾಧನೆಯಾಗಿದೆ. ಲೋಕಸಭೆ ಚುನಾವಣೆ ಪ್ರತಿಷ್ಠೆಯಾಗಿರುವುದರಿಂದ ಗೆಲ್ಲಲು ಪಕ್ಷಕ್ಕೆ ಬರುವವರನ್ನು ಯಾವುದೇ ಭಿನ್ನಾಭಿಪ್ರಾಯ ಬದಿಗಿಟ್ಟು ಸೇರ್ಪಡೆ ಮಾಡಿಕೊಂಡು ಸುನೀಲ್ ಬೋಸ್ ಅವರನ್ನು ಲೋಕಸಭೆಗೆ ಚುನಾಯಿಸಿ ಕಳುಹಿಸೋಣ.

- ಎಂ.ಡಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.8ಕ್ಕೆ, ಮ.3.50ಕ್ಕೆ, ಕುಂಗ್ ಫು ಪಾಂಡ 4 (3ಡಿ) (ಇಂ): ಬೆ.11.20ಕ್ಕೆ, ಕ್ರೂವ್ (ಹಿಂ): ಮ.1.20ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ದಿ ಫಸ್ಟ್ ಓಮನ್ (ಇಂ): ಬೆ.10.50ಕ್ಕೆ, ರಾ.10.05ಕ್ಕೆ, ಅವತಾರ ಪುರುಷ 2 (ಕ): ಮ.1.35ಕ್ಕೆ, ಸಂ.4.15ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 3	ಮ್ಯಾಟ್ನಿ (ಕ): ಬೆ.10.35ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ರಾ.9.55ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.35ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಅವತಾರ ಪುರುಷ 2 (ಕ): ಬೆ.9.35ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.30ಕ್ಕೆ, ಮ.12.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಕ್ರೂವ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.55ಕ್ಕೆ, ಮಾರಿಗೋಲ್ಡ್ (ಕ): ಮ.1.20ಕ್ಕೆ, ಆಡುಜೀವಿತಂ (ಮ): ಸಂ.4.05ಕ್ಕೆ, ಅವತಾರ ಪುರುಷ 2 (ಕ): ರಾ.7.40ಕ್ಕೆ, ಮ್ಯಾಟ್ನಿ (ಕ): ರಾ.10.20ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಬೆ.10.40ಕ್ಕೆ, ಸಂ.4.40ಕ್ಕೆ, ದಿ ಫಸ್ಟ್ ಓಮನ್ (ಇಂ): ಮ.1.15ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಹಿಂ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರೈತರನ್ನು ಗೌರವಿಸಿದಾಗ ಮಾತ್ರ ದೇಶ ಅಭಿವೃದ್ಧಿ



ಸರಗೂರಿನಲ್ಲಿ ಶ್ರೀಶಿವಕುಮಾರ ಸ್ವಾಮೀಜಿ ಜಯಂತಿ ನಡೆಯಿತು.

ಸರಗೂರು, ಏ.4– ರೈತರನ್ನು ಗೌರವಿಸಿದಾಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಡಾ.ಶ್ರೀಶಿವಕುಮಾರಸ್ವಾಮೀಜಿ ಸೇವಾ ಸ್ವಸಹಾಯ ಸಂಘದ ಕಾರ್ಯದರ್ಶಿ ದೇವರಾಜಸ್ವಾಮಿ ತಿಳಿಸಿದರು.

ಪಟ್ಟಣದ ಹಂಚೀಪುರ ಸಿದ್ದಮಲ್ಲೇಶ್ವರ ಶಾಖಾ ಮಠದಲ್ಲಿ ಡಾ.ಶ್ರೀಶಿವಕುಮಾರ ಸ್ವಾಮೀಜಿ ಸೇವಾ ಸ್ವಸಹಾಯ ಸಂಘ ಆಯೋಜಿಸಿದ್ದ ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಡಾ.ಶ್ರೀಶಿವಕುಮಾರ ಸ್ವಾಮೀಜಿ ಅವರ 117ನೇ ಜಯಂತಿಯಲ್ಲಿ ಅವರು ಮಾತನಾಡಿದರು.

ಮಠಗಳಿಲ್ಲದಿದ್ದರೆ ರಾಜ್ಯ ಶೈಕ್ಷಣಿಕವಾಗಿ ಮುಂದುವರಿಯುತ್ತಿರಲಿಲ್ಲ. ಮಠಗಳು ಅಕ್ಷರ, ಅನ್ನ ದಾಸೋಹ ನಡೆಸಿವೆ. ಮಕ್ಕಳು ದೇಶದ ಭವಿಷ್ಯದ ಆಸ್ತಿ. ರೈತರು ದೇಶದ ಬೆನ್ನೆಲುಬು. ಕಾಣದ ದೇವರಿಗೆ ಕೈ ಮುಗಿಯದೇ ಕಣ್ಣಿಗೆ ಕಾಣುವ ಮಕ್ಕಳು, ರೈತರನ್ನು ಗೌರವಿಸಬೇಕು. ಆಗ ದೇಶ ಬೆಳವಣಿಗೆ ಹೊಂದಲಿದೆ. ಈ ನಿಟ್ಟಿನಲ್ಲಿ ಎಲ್ಲರೂ ಮುಂದಾಗಬೇಕು ಎಂದರು.

ಸಿದ್ದಮಲ್ಲೇಶ್ವರ ಮಠದ ಚನ್ನಬಸವ ಸ್ವಾಮೀಜಿ ಮಾತನಾಡಿ, ಸಿದ್ದಗಂಗಾಶ್ರೀಗಳು ನೀಡಿದ ಧರ್ಮ ಸಂದೇಶಗಳು, ಮಾರ್ಗ ಸಂದೇಶಗಳು ಎಂದಿಗೂ ನಶಿಸದೇ ಉಳಿಯಲಿವೆ ಎಂದರು.

ಈ ವೇಳೆ ಹಂಚೀಪುರ ಪಟ್ಟದ ಮಠದ ಕಿರಿಯ ತೋಂಟದಾರ್ಯ ಸ್ವಾಮೀಜಿ ಮಾತನಾಡಿದರು. ಸಂಘದ ಅಧ್ಯಕ್ಷ ನಂದೀಶ್, ಕಾರ್ಯದರ್ಶಿ ದೇವರಾಜಸ್ವಾಮಿ, ಖಜಾಂಚಿ ರಘುಸ್ವಾಮಿ ನಿರ್ದೇಶಕರಾದ ಎಸ್.ಸಿ.ಹರೀಶ್, ಹೆಚ್.ಎಂ.ಲೋಕೇಶ್, ಶಿವರುದ್ರಪ್ಪ, ರಘುಪತಿ, ಯೋಗೇಶ್, ಗುರುಸ್ವಾಮಿ, ರಘುಸ್ವಾಮಿ, ಎಚ್.ಎಸ್.ಸುರೇಶ್, ಡಿ.ಎಸ್.ಗುರುಸ್ವಾಮಿ, ಶಿವರಾಜು, ಕೆ.ಬಿ.ಶೇಖರ್ ಎ.ಬಿ.ಗುರುಸ್ವಾಮಿ, ಭಾನುಪ್ರಕಾಶ್ ಸೇರಿದಂತೆ ಹಂಚೀಪುರ ಗ್ರಾಮಸ್ಥರು, ಇನ್ನಿತರರಿದ್ದರು.

ವಿಜೃಂಭಣೆಯ ಶ್ರೀಕೆಂಡದ ಬಸವೇಶ್ವರ ಜಾತ್ರಾ ಮಹೋತ್ಸವ



ಮಲ್ಕುಂಡಿ, ಏ.4– ಗ್ರಾಮದಲ್ಲಿ ಶ್ರೀಕೆಂಡದ ಬಸವೇಶ್ವರ ಜಾತ್ರಾ ಮಹೋತ್ಸವ ಗುರುವಾರ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ 7 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀಕೆಂಡದ ಬಸವೇಶ್ವರ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ಈ ವೇಳೆ ಭಕ್ತರು ಬಾಯಿಗೆ ಬೀಗ ಹಾಕಿಸಿಕೊಂಡು ತಮ್ಮ ಹರಕೆ ತೀರಿಸಿದರು. ಇದೇ ವೇಳೆ ದನಗಳ ಕಿಚ್ಚು ಹಾಯಿಸಲಾಯಿತು.

ವಿಜೃಂಭಣೆಯ ಶ್ರೀಭೈರವೇಶ್ವರ ಕೊಂಡೋತ್ಸವ



ಚನ್ನಿಪುರದಲ್ಲಿ ಶ್ರೀಭೈರವೇಶ್ವರ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು, ಏ.4– ತಾಲೂಕಿನ ಚನ್ನಿಪುರದಲ್ಲಿ ಗ್ರಾಮದೇವತೆ ಶ್ರೀಮಾರಮ್ಮ ಹಾಗೂ ಶ್ರೀಭೈರವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಭೈರವೇಶ್ವರ ಕೊಂಡೋತ್ಸವ ಗುರುವಾರ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯವನ್ನು ಬಣ್ಣ ಬಣ್ಣದ ವಿದ್ಯುತ್ ದೀಪ ಹಾಗೂ ಹೂಗಳಿಂದ ಸಿಂಗರಿಸಲಾಗಿತ್ತು. ಅಲ್ಲದೇ ಗ್ರಾಮ ದೇವತೆ ಶ್ರೀಮಾರಮ್ಮ ಹಾಗೂ ಭೈರವೇಶ್ವರ ಮೂಲ ದೇವರಿಗೆ ಪ್ರಧಾನ ದೇವತಾ ಪೂಜೆ, ಪ್ರಧಾನ ಹೋಮ ಸೇರಿದಂತೆ ಮಹಾಮಂಗಳಾರತಿ ರಾಜೋಪಚಾರ, ತೀರ್ಥಪ್ರಸಾದ ವಿನಿಯೋಗ ನಡೆಸಲಾಯಿತು. ಬಳಿಕ ಗಂಗೆ ಪೂಜೆ ಸಲ್ಲಿಸಿ ಸತ್ತಿಗೆ ಹಾಗೂ ದೇವರ ಉತ್ಸವ ಮೂರ್ತಿಯನ್ನು ಗ್ರಾಮದಲ್ಲಿ ಮೆರವಣಿಗೆ ನಡೆಸಲಾಯಿತು. ಬಳಿಕ ಭೈರವೇಶ್ವರ ದೇವಸ್ಥಾನದಲ್ಲಿ ಕೊಂಡೋತ್ಸವ ನೆರವೇರಿತು. ಇದೇ ವೇಳೆ ಭಕ್ತರು ಕೆಂಡದ ಮೇಲೆ ನಡೆದು ಹರಕೆ ತೀರಿಸಿದರು. ಭಕ್ತರಿಗೆ ಅನ್ನದಾನ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಗ್ರಾಮದ ಯಜಮಾನರಾದ ಪುಟ್ಟರಾಜು, ಚಿಕ್ಕ ಯಜಮಾನರಾದ ಕೂಸಪ್ಪ, ಗುಡಿಗೌಡರಾದ ಬೋಳೇಗೌಡ್ರು, ಮುಖಂಡರಾದ ಶಿವನಂಜು, ಚಿಕ್ಕಬೆಂಬೇಗೌಡ, ರವೀಶ್, ಚಲುವರಾಜು, ದುಂಡಯ್ಯ, ಶಿವಣ್ಣ, ಪುಟ್ಟಸ್ವಾಮಿ, ಗೋಪಾಲಯ್ಯ, ಮಲ್ಲೇಶ್, ನಾಗರಾಜು, ಸೇರಿದಂತೆ ಗ್ರಾಮಸ್ಥರಿದ್ದರು.

ನವಭಾರತ ನಿರ್ಮಾಣಕ್ಕಾಗಿ ತಪ್ಪದೇ ಮತ ಹಾಕಿ



ಹಿರೀಕ್ಯಾತನಹಳ್ಳಿ ಗ್ರಾಪಂ ಆವರಣದಲ್ಲಿ ಮತದಾನದ ಪ್ರತಿಜ್ಞಾವಿಧಿ ಮಾಡಿದರು.

ಹಿರೀಕ್ಯಾತನಹಳ್ಳಿ, ಏ.4– ಮತದಾರರು ಪ್ರಜಾಪ್ರಭುತ್ವದ ನೇತಾರರು. ಹೀಗಾಗಿ ಮತ ಚಲಾಯಿಸುವುದು ಪ್ರತಿಯೊಬ್ಬರ ಹಕ್ಕು. ನವಭಾರತ ನಿರ್ಮಾಣಕ್ಕಾಗಿ ಯುವ ಜನತೆ ತಪ್ಪದೇ ಮತ ಚಲಾಯಿಸಬೇಕು ಎಂದು ಪಿಡಿಓ ಶಿಲ್ಪಾಶ್ರೀ ಕರೆ ನೀಡಿದರು.

ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಪಂ ಆವರಣದಲ್ಲಿ ಸ್ವೀಪ್ ಸಮಿತಿ ಏರ್ಪಡಿಸಿದ್ದ ಮತದಾನ ಜಾಗೃತಿ ಅಭಿಯಾನದಲ್ಲಿ ಮಾತನಾಡಿದ ಅವರು, ಪ್ರಜಾತಂತ್ರವೆಂಬ ಹಬ್ಬವನ್ನು ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಆಚರಿಸೋಣ. ಮತದಾನ ನಮ್ಮ ಹಕ್ಕು, ನಾವು ಮತ ಚಲಾಯಿಸುತ್ತೇವೆ. ನೀವು ಸಹ ಏ.26ರಂದು ನಡೆಯುವ ಚುನಾವಣೆಯಲ್ಲಿ ಮತದಾನ ಮಾಡಿ ಎಂದರು.

ಲೆಕ್ಕ ಸಹಾಯಕ ಮಹಾದೇವ್ ಮಾತನಾಡಿ, ಏ.26ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಮತದಾನದಿಂದ ಹೊರಗೆ ಉಳಿಯದೆ ಹಾಗೂ ಯಾವುದೇ ಆಮಿಷಗಳಿಗೆ ಬಲಿಯಾಗದೇ ನಿಷ್ಪಕ್ಷಪಾತ ಹಾಗೂ ದೇಶದ ಸುಭದ್ರ ಭವಿಷ್ಯಕ್ಕಾಗಿ ತಮ್ಮ ಅಮೂಲ್ಯ ಮತ ಚಲಾಯಿಸುವಂತೆ ಸಲಹೆ ನೀಡಿದರು.

ಹಿರೀಕ್ಯಾತನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ವ್ಹೀಲ್‌ಚೇರ್ ವ್ಯವಸ್ಥೆ, ಪ್ರತ್ಯೇಕ ಪ್ರವೇಶ ಸೇರಿದಂತೆ ಇನ್ನಿತರ ಸೌಲಭ್ಯ ಕುರಿತು ತಮ್ಮ ಗ್ರಾಪಂ ವ್ಯಾಪ್ತಿಯ ವಿಶೇಷಚೇತನ ಫಲಾನುಭವಿಗಳಿಗೆ ತಿಳಿಸಿ ಹಾಗೂ 18 ವರ್ಷ ಮೇಲ್ಪಟ್ಟ ಮತ್ತು ಪ್ರತಿ ವಿಶೇಷ ಚೇತನರು ಕಡ್ಡಾಯವಾಗಿ ಮತ ಹಾಕುವಂತೆ ಪ್ರೇರಣೆ ನೀಡಿ ಕಾರ್ಯ ನಿರ್ವಹಿಸುವಂತೆ ಪಂಚಾಯಿತಿ ನೌಕರರಿಗೆ ಸಲಹೆ ಸೂಚನೆ ನೀಡಿದರು.


ಬಣ್ಣ ಬಣ್ಣದ ರಂಗೋಲಿಗಳಿಂದ ಅಂಗನವಾಡಿ, ಪಂಚಾಯಿತಿ ನೌಕರರು ಹಾಗೂ ಸ್ವಸಹಾಯ ಸಂಘದ ಮಹಿಳೆಯರು ಚುನಾವಣಾ ಮತದಾನದ ದಿನ ಬೆರಳಿಗೆ ಇಂಕು ಹಾಕುವ ಚಿಹ್ನೆ, ಜೊತೆಗೆ ಚುನಾವಣಾ ಆಯೋಗದ ಚಿಹ್ನೆ ಬಿಡಿಸಿ ಗಮನ ಸೆಳೆದರು. ಈ ವೇಳೆ ಗ್ರಾಪಂ ಸದಸ್ಯರು, ಗ್ರಾಮದ ಮಹಿಳೆಯರು ಮುಖಂಡರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಮಂಡಲ ಉಪಾಧ್ಯಕ್ಷರಾಗಿ ನೇಮಕ



ಪಿರಿಯಾಪಟ್ಟಣ, ಏ.4– ತಾಲೂಕು ಬಿಜೆಪಿ ಮಂಡಲ ಉಪಾಧ್ಯಕ್ಷರನ್ನಾಗಿ ಎ.ಮಂಜು ಅವರನ್ನು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಹನಗೋಡಿನಲ್ಲಿ ಹುಲಿ ಹೆಜ್ಜೆ ಪತ್ತೆ




ಹನಗೋಡಿನಲ್ಲಿ ಕಾಣಿಸಿಕೊಂಡ ಹುಲಿ ಹೆಜ್ಜೆ ಪರಿಶೀಲಿಸುತ್ತಿರುವ ಅರಣ್ಯಾಧಿಕಾರಿಗಳು.

ಹನಗೋಡು, ಏ.4– ಹುಣಸೂರು ತಾಲೂಕಿನ ಹನಗೋಡಿನಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದ್ದು, ಈ ಭಾಗದ ಗ್ರಾಮಸ್ಥರು, ರೈತರು ಆತಂಕಗೊಂಡಿದ್ದಾರೆ.


ಗ್ರಾಮದ ಲಕ್ಷ್ಮಣತೀರ್ಥ ನದಿಯ ಏರಿ ಕೆಳ ಪಾತ್ರದ ಸುಶೀಲಮ್ಮ ಅವರಿಗೆ ಸೇರಿದ ಜಮೀನಿನಲ್ಲಿ ಹುಲಿ ಹೆಜ್ಜೆ ಪತ್ತೆಯಾಗಿದೆ. ಕಳೆದ ಫೆ.23ರಂದು ಪಕ್ಕದ ತೋಟದ ಹೆಚ್.ಆರ್.ರಮೇಶ್ ಅವರಿಗೆ ಸೇರಿದ ತೋಟದಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿತ್ತು. ಹುಲಿ ಕಾಡುಹಂದಿಯೊಂದಿಗೆ ಕಾದಾಡಿ ಬೇಟೆಯಾಡಿರುವ ಕುರುಹು ಸ್ಥಳದಲ್ಲಿ ಕಂಡುಬಂದಿತ್ತು. ಅಲ್ಲದೇ ಲಕ್ಷ್ಮಣತೀರ್ಥ ನದಿ ಏರಿಯ ಒಂದು ಕಿಮೀ ವ್ಯಾಪ್ತಿಯಲ್ಲಿ ಸಾಕಷ್ಟು ಪೊದೆಗಳಿವೆ. ಅಲ್ಲದೇ ಸಾಕಷ್ಟು ಗಿಡಗಂಟಿಗಳು ಬೆಳೆದಿದ್ದು, ಹುಲಿ, ಚಿರತೆ, ಕಾಡು ಹಂದಿಗಳು ವಾಸಕ್ಕೆ ಪ್ರಶಸ್ತ ಸ್ಥಳವಾಗಿದೆ. ಈ ಅಣೆಕಟ್ಟೆ ಏರಿಯು ಹಾರಂಗಿ ಅಚ್ಚುಕಟ್ಟು ಪ್ರದೇಶಕ್ಕೆ ಸೇರಿದ್ದು, ಇದನ್ನು ತೆರವುಗೊಳಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕಳೆದ 2 ವರ್ಷಗಳಿಂದ ಹನಗೋಡು, ಕಾಮಗೌಡನಹಳ್ಳಿ, ಬಿ.ಆರ್.ಕಾವಲ್, ಅಬ್ಬೂರು, ಸಿಂಡೇನಹಳ್ಳಿ, ನೇಗತ್ತೂರು, ಶೆಟ್ಟಳ್ಳಿ, ದಾಸನಪುರ, ಹಿಂಡಗುಡ್ಲು, ಚಿಕ್ಕಹೆಜ್ಜೂರು, ಕಾಳಬೂಚನಹಳ್ಳಿ, ಕಚುವಿನಹಳ್ಳಿ, ಮುತ್ತುರಾಯನ ಹೊಸಳ್ಳಿ ಭಾಗದ 15 ಕಿಮೀ ವ್ಯಾಪ್ತಿಯಲ್ಲಿ ಹುಲಿ ಆಗಾಗ್ಗೆ ಕಾಣಿಸಿಕೊಂಡು ಜಾನುವಾರುಗಳನ್ನು ಬಲಿ ಪಡೆಯುತ್ತಿದೆ. ಶೆಟ್ಟಳ್ಳಿ ಅರಣ್ಯ ಪ್ರದೇಶದಲ್ಲಿ ಸಾಕಾನೆಗಳ ಮೂಲಕ ಕೂಂಬಿಂಗ್ ನಡೆಸಿದರೂ ಹುಲಿ ಪತ್ತೆಯಾಗಲಿಲ್ಲ. ಗ್ರಾಮಸ್ಥರು ಜಮೀನಿಗೆ ತೆರಳಲು ಹೆದರುವಂತಾಗಿದೆ. ಹೀಗಾಗಿ ಪ್ರಾಣ ಹಾನಿಗೂ ಮುನ್ನಾ ಹುಲಿ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದರು.

ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಸೀಮಾ, ವಲಯ ಅರಣ್ಯಾಧಿಕಾರಿ ನಂದಕುಮಾರ್ ಮಾತನಾಡಿ, ಹುಲಿ ಹೆಜ್ಜೆ ಪತ್ತೆಯಾಗಿರುವ ಸುತ್ತಮುತ್ತ ಕೂಂಬಿಂಗ್ ನಡೆಸುವುದು, ಕ್ಯಾಮರಾ ಅಳವಡಿಸಿ ಹುಲಿ ಪತ್ತೆಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ಡಿಆರ್‌ಎಫ್‌ಓಗಳಾದ ಮಲ್ಲಿಕಾರ್ಜುನ್, ಚಂದ್ರೇಶ್ ಹಾಗೂ ಆನೆ ಕಾರ್ಯಪಡೆ ಸಿಬ್ಬಂದಿ ಹುಲಿ ಕಾಣಿಸಿಕೊಂಡಿರುವ ಸ್ಥಳದ ಸುತ್ತಮುತ್ತ ನದಿ ಏರಿಯ ಪೊದೆಗಳ ಬಳಿ ರಾತ್ರಿ ವೇಳೆ ಪಟಾಕಿ ಸಿಡಿಸಿದರು. ಸೈರನ್ ಮೊಳಗಿಸಿದರು.

ನಾಳೆ ಕೋಟೆಯಲ್ಲಿ ಉದ್ಯೋಗ ಮೇಳ



ಸುದ್ದಿಗೋಷ್ಠಿಯಲ್ಲಿ ಪ್ರಾಂಶುಪಾಲ ಎಸ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಹೆಚ್.ಡಿ.ಕೋಟೆ, ಏ.4– ಪಟ್ಟಣದ ವಿಶ್ವಭಾರತಿ ಕಾಲೇಜು ವತಿಯಿಂದ ಮೈಸೂರಿನ ಎಸ್‌ವಿಜಿ ಪ್ಲೇಸ್‌ಮೆಂಟ್ ಅವರ ಸಹಯೋಗದಲ್ಲಿ ಏ.6 ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಸ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ನಿರುದ್ಯೋಗಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಂದು ಕಾಲೇಜಿನ ಆವರಣದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಈ ಮೇಳದಲ್ಲಿ 65ಕ್ಕೂ ಹೆಚ್ಚು ಕಂಪನಿಗಳು ಭಾಗ ವಹಿಸುತ್ತಿವೆ. 250ಕ್ಕೂ ಹೆಚ್ಚು ಉದ್ಯೋಗಾವಕಾಶ ಲಭ್ಯವಿದ್ದು, 18 ರಿಂದ 45 ವರ್ಷದೊಳಗಿನವರಿಗೆ ಅವರ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಉದ್ಯೋಗ ದೊರೆಯಲಿದೆ ಎಂದರು. ಎಸ್‌ವಿಜಿ ಪ್ಲೇಸ್‌ಮೆಂಟ್‌ನ ಹೆಚ್.ಆರ್. ಸವಿತಾ ಮಾತನಾಡಿ, ನಿರುದ್ಯೋಗ ತೊಡೆದುಹಾಕುವ ನಿಟ್ಟಿನಲ್ಲಿ ನಾವು ಉದ್ಯೋಗ ಮೇಳ ಆಯೋಜಿಸಿದ್ದೇವೆ, ನಿರುದ್ಯೋಗಿಗಳಿಗೆ ಉದ್ಯೋಗ ನೀಡಿ ತಾಲೂಕಿನ ಅಭಿವೃದ್ಧಿಗೆ ನಮ್ಮ ಮೊದಲ ಹೆಜ್ಜೆ ಇಡುತ್ತಿದ್ದೇವೆ ಎಂದರು.

ಇದೇ ವೇಳೆ ಎಸ್‌ವಿಜಿ ಪ್ಲೇಸ್‌ಮೆಂಟ್‌ನ ಮುಖ್ಯಸ್ಥೆ ಕವಿತಾ, ಅಧಿಕಾರಿಗಳಾದ ಬಸಪ್ಪ, ವೆಂಕಟಸ್ವಾಮಿ, ರೋಹಿಣಿ, ವಿಶ್ವ ಭಾರತಿ ಪಿಯು ಕಾಲೇಜಿನ ಪ್ರಾಂಶುಪಾಲ ಕಂದಸ್ವಾಮಿ, ಉಪ ಪ್ರಾಂಶುಪಾಲ ವಾಸು ಇದ್ದರು.



ಸಮಗ್ರ ವರದಿ ಪ್ರಸಾರಕ್ಕಾಗಿ ಪ್ರತಿಷ್ಠಿತ ಇಎನ್‌ಬಿಎ ಪ್ರಶಸ್ತಿ ಪಡೆದ ನ್ಯೂಸ್ ಫಸ್ಟ್ ಮೈಸೂರು ವರದಿಗಾರ ರವಿ ಪಾಂಡವಪುರ ಹಾಗೂ ಪಿ.ಆರ್.ರಾಮಯ್ಯ ದತ್ತಿ ಪ್ರಶಸ್ತಿಗೆ ಭಾಜನರಾದ ಪ್ರತಿನಿಧಿ ಪತ್ರಿಕೆ ಸಂಪಾದಕ ಸಿ.ಕೆ.ಮಹೇಂದ್ರ ಅವರನ್ನು ಪಿರಿಯಾಪಟ್ಟಣ ತಾಲೂಕು ಒಕ್ಕಲಿಗರ ಸಂಘದಿಂದ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದಲ್ಲಿ ಸನ್ಮಾನಿಸಲಾಯಿತು. ಈ ವೇಳೆ ಸಂಘದ ಗೌರವ ಅಧ್ಯಕ್ಷ ಪಿ.ಪ್ರಶಾಂತ್ ಗೌಡ, ಅಧ್ಯಕ್ಷ ಆನಂದ್, ಕಾನೂನು ಸಲಹೆಗಾರ ಸಂದೀಪ್, ಕೆ.ಡಿ.ಕಾರ್ಯದರ್ಶಿ ಮೋಹನ್, ಖಜಾಂಚಿ ಮನು ಉಪಸ್ಥಿತರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಲೋಕಮಣಿರವರು

ಕಡಕೊಳ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು

ಗೆಜ್ಜಗಳ್ಳಿ ನಂಜಪ್ಪನವರ ಧರ್ಮಪತ್ನಿ

ಅಂತ್ಯಕ್ರಿಯೆ: ದಿನಾಂಕ–05–04–2024 ಶುಕ್ರವಾರ, ಮಧ್ಯಾಹ್ನ 12.30ಕ್ಕೆ

ಸ್ಥಳ: ತೋಟದ ಮನೆ, ಲೇಕ್ ವ್ಯೂ ಲೇಔಟ್, ಕುಪ್ಪಲೂರು

ದುಃಖತಪ್ತರು: ಕುಟುಂಬವರ್ಗ, ಗೆಜ್ಜಗಳ್ಳಿ



PUBLIC NOTICE

It is hereby brought to the notice of the **General Public** that my client **Smt. B.Susheela Devi,** W/o. Chittibabu is the absolute owner and in possession of an agricultural land bearing **Sy.No.30** measuring 2 acre 9.12 guntas and 1 acre 4.12 guntas and **Sy.No.9** measuring 32½ guntas, measuring 1 acre 7 guntas and measuring 13¾ guntas situated at Sarkar Uttanahalli Village, Varuna Hobli, Mysore Taluk, Mysore. However, now some of the people claiming to be GPA holder of my client and also Vendors of my client is making a hectic effort to offer to sell the above mentioned properties to General Public. It is submitted that my client is not interested to sell the property in question. Further she has not given any general or special power of attorney either to anyone.

Hence the General Public are hereby cautioned not to deal/transact with the aforesaid any person acting in respect of the land in question or from any other person in any way or in any manner what so ever. If anybody/entity deal/transact in respect of the land in question, they will be doing so on their own risk and cost and any such transaction will be subject to my client's right over the land in question.

Sd/- Harish Kumar M.S.
Advocate
No.58, Sri Sai Ranga, Opp: SSLC Board
Malleshwaram, Bangalore-560003
Mob : 98451 53503
Date : 4.4.2024, Place : Bangalore

IN THE COURT OF THE HON'BLE I ADDITIONAL SENIOR CIVIL JUDGE AT MYSURU

P&Sc No. 15 of 2024

Petitioners : **1. Smt. G.R.Sudha,** W/o Late S. **Mahesh,** Aged about 40 Years.
2. **Kumari M.M. Samanvitha,** D/o. **Late. S. Mahesh,** Aged about 15 years, The Petitioner No.2 is a minor & She is being represented by her guardian & natural mother the Petitioner No.**1 Smt. G.R. Sudha,** Both are residing at No.416, Temple Road, Ramabai Nagara, Mysuru South, Mysuru-570008.

Vs.

Respondent : nill

Public Notice

The Petitioners have filed the petition for Succession Certificate a Succession Certificate in their favour in respect of the including entire monetary benefits like gratuity, provident fund, family pension, employee deposits linked insurance, group insurance, earned leave etc., on account of death of **S.Mahesh,** from the office of the Hon'ble Senior Civil Judge at Pandavapura. Any person/s having any manner of right or claim over the said legitimate share are hereby called upon to appear in person or through his/her/their Advocate/s before the aforesaid Hon'ble court on 18.04.2024 at 11.00 am failing which, the matter will be heard and decided Ex-parte.

SCHEDULE

The entire monetary benefits like gratuity, provident fund, family pension, employee deposits linked insurance, group insurance, earned leave etc., on account of death of S.Mahesh (the husband of the Petitioner No.1) from the office of the Hon'ble Senior Civil Judge at Pandavapura.

Issued under my hand and the Seal of this Court this the 3rd of April, 2024 at Mysuru

By the orders of the Hon'ble court
Sd/- **Chief Ministerial Officer**
Principal Senior Civil Judge at Mysuru

Advocate for Petitioners
Sd/- **S.Yogish**, Advocate,
1117, NPD Complex
Shivarampet, Devaraj Mohalla, Mysuru-01
Mob: 9945781866

PUBLIC NOTICE

Our client proposes to enter into a joint development arrangement in respect of the properties detailed in the Schedule below (hereinafter referred to as the "Schedule Properties") from its respective owners (hereinafter collectively referred to as the "Owners"). The Owners represent that they are the absolute owners of their respective properties each having marketable, right, title and interest therein and that apart from them there are no other person/s having any right or claim over the Schedule Properties. The Owners further represent that they have not mortgaged, created any lien or encumbered the Schedule Properties or part thereof in any manner and that the Owners have not entered into any other agreement of sale/development agreement/memorandum of understanding/arrangement etc., with any person/s with regard to the Schedule Properties. Any person/s having objection/s or claims shall with documentary evidence lodge their objections/claims within fourteen (14) days from the date of this notice with the undersigned, failing which, our client shall proceed with the above-mentioned transaction.

Schedule
Description of the Schedule Properties

Sl No.	Property No.	Extent	Owner(s)	Boundaries			
				East	West	North	South
All that piece and parcel of the converted lands situated at Hinkal village, Kasaba hobli, Mysuru taluk, Mysuru:							
1.	Survey No. 283/1A	1 acre and 6 guntas	Dilipkumar K	Land bearing survey No. 283/1b, 283/1c, 283/2	Land bearing survey No. 305	Land bearing survey No. 284	Land bearing survey No. 283/2
2.	283/2	4 acres and 13 guntas		Land bearing survey No. 285 and MUDA Road	Land bearing survey No. 305	Land bearing survey Nos. 283/1a and 283/1c	Road

Poovayya & Co. Advocates & Solicitors
Savitha K.G. Partner
The Estate, Level Four, 121 Dickenson Road, Bengaluru - 560 042 Phone: +91 80 4656 3000
Place : Mysore Date : 05.04.2024

ಶ್ರೀ ಗಾಯತ್ರಿ ಕ್ಷೇಮಾಭಿವೃದ್ಧಿ ಸಂಘ (ರಿ)

#2, Block 27, Madhuvana Layout, Srirampura 2nd Stage, Mysore 570023

ದಿನಾಂಕ: 04.04.2024

ಸಾರ್ವಜನಿಕರ ಗಮನಕ್ಕೆ

ವಿಷಯ: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಆಲನಹಳ್ಳಿ ಗ್ರಾಮದ ಸರ್ವೆ ನಂ.41/ಬಿಯಲ್ಲಿ ನಿರ್ಮಾಣವಾಗಿರುವ ಬಡಾವಣೆಯ ನಿವೇಶನಗಳ ಕುರಿತು ನ್ಯಾಯಾಲಯದಲ್ಲಿ ಇರುವ ವಿವಾದ ಮತ್ತು ಆದೇಶದ ಕುರಿತು.

ಈ ಬಡಾವಣೆಯ ನಿವೇಶನ ಸಂಖ್ಯೆ 01, 02, 03, 04, 05, 07, 15, 16, 17, 18, 19, 20, 21, 22, 23, 24, 25, 26, 27, 28, 29, 30, 31, 32, 33, 42, 43, 44, 45, 46, 47, 48, 49, 50, 51, 52, 53, 54, 55, 56, 57, 58, 61, 62, 63, 64, 65, 66, 67, 68, 69,70, 71, 72, 73, 74, 75, 76, 77, 78, 79, 80, 81, 82, 83, 84, 85, 86, 87, 88, 89, 90, 91 ಗಳಿಗೆ ಸಂಬಂಧಿಸಿದಂತೆ ನಮ್ಮ ಶ್ರೀ ಗಾಯತ್ರಿ ಕ್ಷೇಮಾಭಿವೃದ್ಧಿ ಸಂಘ, (ರಿ) ಸಂಘದವರು ಭೂ ಮಾಲೀಕರು ಮತ್ತು ಅಭಿವೃದ್ಧಿದಾರರ ವಿರುದ್ಧ Ex.No. 572/2022 (ಜಾರಿಅರ್ಜಿ) ಎಂಬ ಪ್ರಕರಣವನ್ನು ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತದೆ. ಸದರಿ ಪ್ರಕರಣದಲ್ಲಿ ಒಂದು ಮಧ್ಯಂತರ ಅರ್ಜಿಯನ್ನು ಸಹ ಸಲ್ಲಿಸಿದ್ದು ಮಾನ್ಯ ನ್ಯಾಯಾಲಯವು ದಿ :20/03/2024ರಂದು ಪ್ರಕರಣದ ಎದುರುದಾರರಾದ ಶ್ರೀಮತಿ.ರೇವಮ್ಮ W/O. ಲೇಟ್.ಮಹದೇವ, ಶ್ರೀ.ಉಮೇಶ S/o. ಲೇಟ್.ಮಹದೇವ, ಶ್ರೀಮತಿ.ಪ್ರೀತಿ D/o ಲೇಟ್.ಮಹದೇವ, ಎಲ್.ಬಸವಣ್ಣ S/o ಲೇಟ್.ಲಿಂಗಯ್ಯ ಶ್ರೀಮತಿ.ತಾಯಮ್ಮ D/o ಲೇಟ್.ಲಿಂಗಯ್ಯ, ಮೆ. ಸುಖಿ ಕನ್‌ಸ್ಟ್ರಕ್ಷನ್ ರವರುಗಳ ವಿರುದ್ಧ ಯಥಾಸ್ಥಿತಿ ಆದೇಶವನ್ನು ಹೊರಡಿಸಿರುತ್ತದೆ. ಆದಕಾರಣ ಯಾರೂ ಸಹ ಇವರುಗಳೊಡನೆ ಯಾವುದೇ ರೀತಿಯಲ್ಲಿಯೂ ವ್ಯವಹರಿಸತಕ್ಕದ್ದಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಅಧ್ಯಕ್ಷರು (ಜಿ.ಆರ್.ನಾಗರಾಜು), ಶ್ರೀ ಗಾಯತ್ರಿ ಕ್ಷೇಮಾಭಿವೃದ್ಧಿ ಸಂಘ, (ರಿ), ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ಪಟೇಲ್ ವೈ.ಎಂ.ಭೋಜರಾಜುರವರು

ತಿ. ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಯಾಚೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಪಟೇಲ್ ವೈ.ಕೆ. ಮರಿಸಿದ್ದೇಗೌಡರ ಮಗ ಲೇಟ್ ಪಟೇಲ್ ವೈ.ಎಂ. ಭೋಜರಾಜುರವರ ಧರ್ಮಪತ್ನಿ **ಶ್ರೀಮತಿ ಪದ್ಮಮ್ಮನವರು** ಮಾಡುವ ವಿಜ್ಞಾಪನೆಗಳು

ದಿನಾಂಕ: 30–3–2024ನೇ ಶನಿವಾರ ನನ್ನ ಪೂಜ್ಯ ಪತಿಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 07–04–2024ನೇ ಭಾನುವಾರ ಬೆಳಗ್ಗೆ 11–30 ಗಂಟೆಗೆ ಯಾಚೇನಹಳ್ಳಿ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುತ್ತೇವೆ. **ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ** ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಪದ್ಮಮ್ಮ ಮತ್ತು ಗಂಡುಮಕ್ಕಳು, ಹೆಣ್ಣುಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಪಟೇಲ್ ವೈ.ಕೆ. ಮರಿಸಿದ್ದೇಗೌಡರ ಕುಟುಂಬ ವರ್ಗದವರು ಹಾಗೂ ಯಾಚೇನಹಳ್ಳಿ ಗ್ರಾಮಸ್ಥರು.

ಶ್ರದ್ಧಾಂಜಲಿ ಸಭೆ: ಬೆಳಗ್ಗೆ 9–00 ಗಂಟೆಗೆ

ಗೀತನಮನ ಕಾರ್ಯಕ್ರಮ : ಬೆಳಗ್ಗೆ : 10–00 ಗಂಟೆಗೆ ಕಲ್ಲಾಪುರ ಯೋಗೇಶ್ ಮತ್ತು ತಂಡದವರಿಂದ